
ಐಕ್ಯರಂಗ




ಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 40

ಅಕ್ಟೋಬರ್ 5, 2003 ಬೆಲೆ ರೂ. 3.00




'ದ್ರೋಹ' ಕೇಸರಿ ನಾಯಕರ ಇನ್ನೊಂದು ಹೆಸರು



ಸೋಮವಾರಪೇಟೆ: ತಲೆ ಎತ್ತಿದ ಮೋದಿ ಸಂತತಿ




ತಗಡಿನ ತುತ್ತೂರಿ ಹಿಡಿದ ಕೃಷ್ಣ ಸವಾರಿ!!



ಬ
ಲು
ದೂ
ರ

ಬಡವ ಶ್ರೀಮಂತರ ಅಂತರ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 46



ಕಳೆದ ಸಂಚಿಕೆಯಲ್ಲಿ ತನಗಿಂತ ದೊಡ್ಡವರಾದ ತಂಡದ ನಾಯಕರನ್ನು ಒಂದುಗೂಡಿಸುತ್ತಿದ್ದ ಕುಂದನ್, ಸುತ್ತಲೂ ವೈರಿಪಡೆ ಸುತ್ತುವರಿದು ಬೇಟೆಯಾಡಲು ಹಪಹಪಿಸುತ್ತಿದ್ದದ್ದು, ತಮಗಿಂತ ನೂರುಪಟ್ಟು ಉತ್ತಮವಾದ ವೈರಿ ಪಡೆಯನ್ನು ಪ್ರತಿರೋಧಿಸುತ್ತಿದ್ದ ಪುಟ್ಟ ಹುಡುಗರು, ಇವರಿಗೆ ಜನರೇ ಸ್ವಯಂ ಸ್ಫೂರ್ತಿಯಿಂದ ಆಹಾರ ಒದಗಿಸುತ್ತಿದ್ದ ಬಗ್ಗೆ, ಪೊಲೀಸರು ಹೋರಾಟಗಾರರ ಸಹೋದರಿಯರು ಮತ್ತು ಪತ್ನಿಯರ ಮೇಲೆ ಅತ್ಯಾಚಾರ ನಡೆಸುತ್ತಿದ್ದದ್ದು, ತಮ್ಮ ಸಂಗಾತಿಗಳ ಮೇಲೆ ಗುಂಡು ಹಾರಿಸಿ ಅವರ ಪ್ರಾಣ ಹರಣ ಮಾಡಿದರೋ ಆ ಶತ್ರುಗಳಿಗೆ ಚಿಕಿತ್ಸೆ ಮಾಡಿದ ತೆಲಾಂಗಣ ವೀರರು ಈ ಬಗ್ಗೆ ಓದಿರುವಿರಿ ಮುಂದೆ.................

ಕನ್ನಡಕ್ಕೆ: ವಿಶ್ವ ಕುಂದಾಪುರ

ಕ್ರಾಂತಿಕಾರಿ ತೊಟ್ಟಿಲಲ್ಲಿ ಹುಟ್ಟಿ ಬೆಳೆದದ್ದು

ಅಪರ ರಾತ್ರಿಯಾಗುತ್ತಿತ್ತು. ಅನತಿ ದೂರದಲ್ಲಿ ಮೇಲೆ ಸ್ಟೇಷನ್ ಬೆಳಕು, ಕೆಳಗಡೆ ಚಂದ್ರನ ಬೆಳಕು ಚೆಲ್ಲಿತ್ತು.

"ಈಗ ನಿದ್ರಿಸುವ ಸಮಯ. ಸಂಗಾತಿಗಳೇ, ನಾನೀಗ ಮುಗಿಸುತ್ತೇನೆ. ಹೊರ ಜಗತ್ತಿಗೆ, ದೇಶದ ನಮ್ಮ ಇತರ ಸಂಗಾತಿಗಳಿಗೆ ನೀವು ಹೇಳಬಹುದಾದ ಒಂದು ವಿಚಾರವಿದೆ. ನಮ್ಮ ಜನತೆ, ಬಂಧು-ಬಾಂಧವರ ಮೇಲೆ ದಯೆಯಿಲ್ಲದ ಭಯೋತ್ಪಾದನೆ ನಡೆಸುವುದನ್ನು ಪ್ರತಿರೋಧಿಸಿದರೆ ನಮಗೆ ಭಯೋತ್ಪಾದಕರೆಂಬ ಪಟ್ಟ ಬಂದರೆ ಅದನ್ನು ನಾವು ಸ್ವೀಕರಿಸುತ್ತೇವೆ. ನಮ್ಮ ಶ್ರಮದ ಫಲವನ್ನು ಕಸಿದುಕೊಳ್ಳುವುದು ಮಾತ್ರವಲ್ಲ. ನಮ್ಮ ಮನೆಗಳನ್ನು ನಾಶ ಮಾಡುವ, ನಮ್ಮ ಜಮೀನನ್ನು ಸೆಳೆದುಕೊಳ್ಳುವ, ನಮ್ಮ ಮಹಿಳೆಯರಿಗೆ ಅವಮಾನ ಮಾಡುವ ಹಾಗೂ ನಮ್ಮ ಮಕ್ಕಳನ್ನು ಕೊಂದುಹಾಕುವ, ಅಷ್ಟೇ ಅಲ್ಲದೆ ಸ್ವಯಂರಕ್ಷಣೆಯ ನಮ್ಮ ಹಕ್ಕನ್ನು ನಿರಾಕರಿಸುವವರು ನಮ್ಮನ್ನು 'ಡಕಾಯಿತರು' ಎಂದು ಹೇಳಿದರೆ ಹಾಗೆನಿಸಿಕೊಳ್ಳಲು ನಮಗೆ ಹೆಮ್ಮೆಯಾಗುತ್ತದೆ" ಎಂದು 35 ರ ಹರೆಯದ ಗೆರಿಲ್ಲಾ ಸಂಗಾತಿ ನುಡಿದರು.

ಅವರ ಮಾತು ಇನ್ನೂ ಮುಗಿದಿರಲಿಲ್ಲ. ಧ್ವನಿಯಲ್ಲಿ ವಿದ್ವೇಷ ಭಾವ ಬೆರೆತ ಆತ ಹೀಗೆಂದರು.

"ಇದು ಅಪರೂಪದ ಸನ್ನಿವೇಶ ಹೌದೋ ಅಲ್ಲವೋ. ನಾವು ಭಯೋತ್ಪಾದಕರು, ಯಾಕೆಂದರೆ ಭಯೋತ್ಪಾದನೆಯ ಅತ್ಯಂತ ಕೆಟ್ಟ ರೂಪದ ವಿರುದ್ಧ ನಾವು ಹೋರಾಡುತ್ತಿದ್ದೇವೆ. ನಾವು ಡಕಾಯಿತರು, ಯಾಕೆಂದರೆ 'ಡಕಾಯಿತರು' ಮನೆಗಳನ್ನು ನಾಶ ಮಾಡುವಾಗ, ಹಾಗೂ ಲೂಟಿ ಮಾಡುವಾಗ ನಾವು ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ನಾವು ದುಷ್ಕರ್ಮಿಗಳು ಯಾಕೆಂದರೆ ದುರುಳರು ಯಾವುದೇ ಎಗ್ಗಿಲ್ಲದೆ ನಾಶ ಮಾಡಲು ನಾವು ಬಿಡುವುದಿಲ್ಲ ಹಾಗೂ ಅಂಥವರನ್ನು ಯಾವುದೇ ರಾಜಿಯಿಲ್ಲದೆ ಶಿಕ್ಷಿಸಲು ನಮ್ಮ ಯುವ ಪ್ರಾಣಗಳನ್ನು ತೆರಲೂ ಹಿಂದೆ ಮುಂದೆ ನೋಡುವುದಿಲ್ಲ".

ನಿರೀಕ್ಷೆಯಲ್ಲಿ.....

ನಮ್ಮ ಪಯಣದ ಮುಂದಿನ ಹಿತಕ್ಕಾಗಿ ಸಂಪರ್ಕ ಸಾಧಿಸಲು ಕಾಯುತ್ತಿದ್ದ ವೇಳೆ ನಾವು ಸುತ್ತಮುತ್ತ ಅಡ್ಡಾಡಿದೆವು. ಬೆಟ್ಟಗುಡ್ಡಗಳು, ಸಣ್ಣ ಕಾಡುಗಳಲ್ಲಿ ಓಡಾಡಿದೆವು. ಪ್ರತಿದಿನ ಸಂಜೆ ಪಯಣ ಸಾಗುತ್ತಿತ್ತು. ಅವರು ಪಯಣಿಸುತ್ತಲೇ ಇರಬೇಕಾದುದು ಎಷ್ಟು ಅವಶ್ಯ ಎಂಬುದು ನನಗೆ ಗೊತ್ತಾಯಿತು. ತಮ್ಮ ವಲಯ ಪ್ರದೇಶಗಳ ಪರಿಮಿತಿಯಲ್ಲಿ ಅಂತ್ಯವಿಲ್ಲದ ಓಡಾಟ ಅವರಿಗೆ ರಾಜಕೀಯ ಹಾಗೂ ಮಿಲಿಟರಿ ಅಸ್ತಿತ್ವದ ಜೀವನ ಮುನ್ನಡೆಯಾಗಿ ಸಾಬೀತಾಯಿತು.

ಪ್ರತಿ ಸಂಜೆ ನಾವು ಚಲಿಸುತ್ತಿದ್ದಾಗ ಸೂರ್ಯಾಸ್ತವಾಗುತ್ತಲೇ ಮುಂದೆ ಹೋಗಲು ತಂಡ ಸಿದ್ಧವಾಗಿರುತ್ತಿದ್ದುದನ್ನು ನಾನು ಕಾಣುತ್ತಿದ್ದೆ. ಸಣ್ಣ ಸಣ್ಣ ಬಂಡಲುಗಳಲ್ಲಿ ಆಹಾರವನ್ನು ವಿತರಿಸಲಾಗುತ್ತಿತ್ತು. ಪ್ರತಿಯೊಬ್ಬರೂ ತಮ್ಮ ತಮ್ಮ ದಿನದ ಸರಬರಾಜನ್ನು ಬೆನ್ನು ಅಥವಾ ತಲೆಯ ಮೇಲೆ ಹೊತ್ತೊಯ್ಯುತ್ತಿದ್ದರು. ನೀರಿನ ಮಡಕೆಗಳನ್ನು ಖಾಲಿ ಮಾಡಿ ಹೂತುಹಾಕಲಾಗುತ್ತಿತ್ತು. (ಪ್ರತೀ ಕೇಂದ್ರಕ್ಕೆ ಪ್ರತ್ಯೇಕ ನೀರಿನ ಮಡಕೆಗಳಿರುತ್ತಿದ್ದವು) ಸಿಗರೇಟಿನ ಮೊಂಡುಗಳನ್ನು ತೆಗೆಯಲಾಗುತ್ತಿತ್ತು. ಅಷ್ಟೇ ಅಲ್ಲದೆ ಹೆಜ್ಜೆ ಗುರುತುಗಳನ್ನು ಕೂಡ ಅಳಿಸಿ ಹಾಕಿ ಸ್ವಚ್ಛ ಮಾಡಿ ಅಲ್ಲಿ ಯಾರೂ ನಡೆದೇ ಇರಲಿಲ್ಲ ಎಂಬಂತೆ ಪ್ರಕೃತಿ ಸಹಜ ಸ್ಥಿತಿಗೆ ಮರಳಿಸಲಾಗುತ್ತಿತ್ತು.

ಇದೆಲ್ಲ ಆದ ನಂತರ ಕಮಾಂಡರ್ ಜಾಗವನ್ನು ಅಂತಿಮವಾಗಿ ಪರಿಶೀಲಿಸುತ್ತಿದ್ದರು. ಅಲ್ಲೇನಾದರೂ ಚಿಕ್ಕಪುಟ್ಟ ವಸ್ತುಗಳು ಉಳಿದಿದ್ದರೂ ಅವನ್ನು ಎತ್ತಿಕೊಂಡು ಮುಂದೆ ಸಾಗಲು ಸೂಚನೆ ಕೊಡುತ್ತಿದ್ದರು. ನಡೆಯಲು ಶುರು ಮಾಡಿದೆವೆಂದರೆ ಬೆಟ್ಟಗುಡ್ಡ, ಗಿಡಗಂಟಿ ಪೊದೆಗಳನ್ನು ಹಾದು, ಹಳ್ಳ ತೊರೆಗಳಲ್ಲಿ ಸಾಗಿ, ಕೆಸರುಗದ್ದೆಗಳಲ್ಲಿ ನಡೆದು, ಒಣಗಿ ಹೋದ ನದಿ ತೀರಗಳನ್ನು ಹಾದು ಒಂದೇ ಏಟಿಗೆ 10, 15, 20 ಮೈಲಿ ಸವೆಸುತ್ತಿದ್ದೆವು.

> **"ಕ್ರಾಂತಿಕಾರಿ ತೊಟ್ಟಿಲಲ್ಲಿ ಹುಟ್ಟಿ ಪ್ರಜ್ಞಾಪೂರ್ವಕ ಶಿಸ್ತಿನಲ್ಲಿ ಬೆಳೆದ ಹೋರಾಟನಿರತ ಘಟಕವೊಂದನ್ನು ನೋಡಿದ್ದು ನಾನು ಇದೇ ಮೊದಲ ಬಾರಿಗೆ. ಶಿಕ್ಷೆಯ ಭಯವಿಲ್ಲದ, 'ಆಜ್ಞೆ' ಇಲ್ಲದೆ 'ಕುದುರೆ'ಗಳು ಅಲುಗಾಡದ ಸೈನ್ಯದಲ್ಲಿದ್ದ ನನಗೆ ಇಲ್ಲಿನ ವಿದ್ಯಮಾನ ಕಂಡು ಅಚ್ಚರಿಯಾಯಿತು. ನನಗಂತೂ ಇದು ವಿನೂತನ ಅನುಭವ."**

ಅಷ್ಟು ನಡೆದು ರಾತ್ರಿಗಾಗಿ ತಂಗುತ್ತಿದ್ದೇವು. ಹಗಲಲ್ಲಿ ಯಾರೂ ಓಡಾಡುವುದಕ್ಕೆ ಅವಕಾಶವಿಲ್ಲವಾದ್ದರಿಂದ ನೀರು ತರಲೆಂದು ಒಬ್ಬ ಸಂಗಾತಿಯನ್ನು ಕಳಿಸಲಾಗುತ್ತಿತ್ತು. ವಿಶೇಷವಾಗಿ ನೀರಿನ ಎಲ್ಲ ಸ್ಥಳಗಳನ್ನು ಶತ್ರು ನೋಡಿರುತ್ತಾರಾದ್ದರಿಂದ ಈ ರೀತಿ ಮಾಡಲಾಗುತ್ತಿತ್ತು. ನಡೆದು ಬಸವಳಿದಿದ್ದ ಈ ತರುಣ ಸಂಗಾತಿಗಳು ಸಾವಿರಾರು ಅಡಿ ಎತ್ತರದ ಬೆಟ್ಟಗುಡ್ಡಗಳನ್ನು ಹತ್ತಿ ಇಳಿದು ನೀರನ್ನು ತರುತ್ತಿದ್ದರು. ಕಮಾಂಡರ್‌ಗೆ ಬೇಕಾದ ಮಾಹಿತಿಗಳನ್ನು ತರಲು ಸ್ಕೌಟ್‌ಗಳನ್ನು ಸಮೀಪದ ಹಳ್ಳಿಗಳ ಸಂಪರ್ಕಗಳ ಬಳಿ ಕಳಿಸಲಾಗುತ್ತಿತ್ತು. ಆಯಾ ರಾತ್ರಿ ಮಲಗುವ ಮುನ್ನ ರಾತ್ರಿ ಹೊತ್ತೇ ಈ ಎಲ್ಲವನ್ನೂ ಮಾಡಬೇಕಾಗುತ್ತಿತ್ತು.

ಕರ್ತವ್ಯ ಪ್ರಜ್ಞೆ

ಮುಂಜಾನೆ ಎರಡು ಗಂಟೆಗೆ ಪ್ರಾಣ ಹಿಂಡುವ ಪ್ರಯಾಣ ಮಾಡಿ 20 ಮೈಲು ಸವೆಸಿರುವಾಗ ಮತ್ತೆ ಸಾವಿರ ಅಡಿ ಎತ್ತರದ ಕಡಿದಾದ ಬೆಟ್ಟವನ್ನು ಹತ್ತಿ ಇಳಿಯುವುದು ಹುಡುಗಾಟಿಕೆಯ ಮಾತಲ್ಲ. ಆದರೆ ಇವರಿಗದು ದಿನನಿತ್ಯದ ಹೋರಾಟದ ಭಾಗವಾಗಿಬಿಟ್ಟಿದೆ. ಅವರು ಅದನ್ನು ಇಚ್ಛಾಪೂರ್ವಕವಾಗಿ ಹೊಣೆಗಾರಿಕೆಯ ಪ್ರಜ್ಞೆಯಿಂದ ಮಾಡುತ್ತಾರೆ. ಕಮಾಂಡರ್ ಸ್ಕೌಟ್‌ಗಳಿಗೆ ಅಥವಾ ವ್ಯಕ್ತಿಗಳಿಗೆ ವಹಿಸಿಕೊಟ್ಟ ಕೆಲಸಗಳನ್ನು ಕೂಗಾಡದೆ, ಶಾಪಹಾಕದೆ, ತಳ್ಳಾಡದೆ ಸಮಯಕ್ಕೆ ಸರಿಯಾಗಿ, ಪ್ರಜ್ಞಾಪೂರ್ವಕವಾಗಿ ಹಾಗೂ ಕ್ಷಿಪ್ರವಾಗಿ ಮಾಡಿ ಮುಗಿಸಲಾಗುತ್ತಿತ್ತು.

ಕ್ರಾಂತಿಕಾರಿ ತೊಟ್ಟಿಲಲ್ಲಿ ಹುಟ್ಟಿ ಪ್ರಜ್ಞಾಪೂರ್ವಕ ಶಿಸ್ತಿನಲ್ಲಿ ಬೆಳೆದ ಹೋರಾಟನಿರತ ಘಟಕವೊಂದನ್ನು ನೋಡಿದ್ದು ನನಗೆ ಹೊಸ ಅನುಭವವಾಗಿತ್ತು. ಕಠಿಣ ಛೀಮಾರಿ ಅಥವಾ ಶಿಕ್ಷೆಯಿಲ್ಲ, ಸೈನಿಕರಲ್ಲಿ ಶಿಕ್ಷೆಯ ಭೀತಿಯಿಲ್ಲದ, 'ಆಜ್ಞೆ'ಯಿಲ್ಲದೆ 'ಕುದುರೆ'ಗಳು (ಸೈನಿಕರು) ಅಲುಗಾಡದ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದ ನನಗೆ ಇದು ನೂತನ ಅನುಭವವೇ ಆಗಿತ್ತು. "ಒಂದು ಸಾಮಾನ್ಯ ರಾಜಕೀಯ ಉದ್ದೇಶಕ್ಕಾಗಿ ಹುಟ್ಟಿದ ಶಿಸ್ತು, ಮೂಲಾಧಿಕಾರಿಗಳಿಗೆ ವಿಧೇಯತೆ ಮತ್ತು ಕಮಾಂಡರ್-ಸೈನಿಕರ ಒಗ್ಗಟ್ಟು" - ನಾನು ಕಂಡದ್ದು ಇದೇ ಮೊದಲ ಬಾರಿಗೆ. ಅಲ್ಲದೆ ತಾವು ಕಂಡ ಪ್ರಾಣಾಪಾಯದ ನಡುವೆಯೂ ಪ್ರತಿದಿನ ಕೆಲಸ ನಿರ್ವಹಿಸುತ್ತಿದ್ದರೂ ಆ ಅಪಾಯದ ಬಗ್ಗೆ ಅವರು ಏನನ್ನು ಮಾತನಾಡುತ್ತಿರಲಿಲ್ಲ.

ವಿದಾಯದ ಭಾರ ಹೃದಯ ಹಾಗೂ ವಿಶಾಲ ಬೆಟ್ಟಗಳನ್ನು ಹಾದುಹೋಗುವ ರೋಮಾಂಚಕತೆಯೊಂದಿಗೆ ನಾವು ನಮ್ಮ ಮೊದಲ ಕೇಂದ್ರವನ್ನು ಬಿಟ್ಟು ಹೊರಟೆವು.

ಸಂಗಾತಿಗಳ ಸುರಕ್ಷತೆಗೆ ಕಾಳಜಿ

ಒಣ ಬೆಟ್ಟಸಾಲುಗಳ ಜಾಲವೊಂದನ್ನು ಹಾದು, ಒಂದು ಸಾವಿರ ಅಡಿ ಬೆಟ್ಟವೇರಿ ಮತ್ತೆ ಅಷ್ಟೆ ಅಡಿಗಳಷ್ಟು ಇಳಿದು ಇದೇ ರೀತಿಯ ಪ್ರಕ್ರಿಯೆಯನ್ನು ಹಲವು ಬಾರಿ ಪುನರಾವರ್ತಿಸಿ ನಾವು ಒಂದು 'ಸ್ಥಳ' ತಲುಪಿದೆವು. ಅಲ್ಲಿ ಹೊಸ ದೂತ ಹಾಗೂ ತಂಡ ನಮ್ಮನ್ನು ಭೇಟಿಯಾಗಿ ಮುಂದೆ ಕರೆದೊಯ್ಯಲಿತ್ತು.

ಇದೀಗ ಮಧ್ಯರಾತ್ರಿ. ಸುತ್ತಲೂ ನೀರವ ಮೌನ. ಸುತ್ತಲೂ ಎಲ್ಲಾ ಕಡೆ ಸಣ್ಣಸಣ್ಣ ಪೊದೆಗಳು ಬೆಳೆದ ಬೆಟ್ಟಗಳು. ಅವುಗಳು ದೂರದಲ್ಲಿ ಕುಳಿತ ಒಂಟೆಯ ಡುಬ್ಬದಂತೆ ಕಾಣುತ್ತಿದ್ದವು. ಸುತ್ತಮುತ್ತ ಎಲ್ಲೂ ಜನವಸತಿ ಇದ್ದಂತೆ ಕಾಣಲಿಲ್ಲ. ಸಮೀಪದ ಹಳ್ಳಿಗಳಿಂದ ಕೇಳಿಬರುವ ಡೊಳ್ಳಿನ ಸದ್ದಿಲ್ಲ. ನರಿಗಳು ಊಳಿಡುವ ಸದ್ದಿಲ್ಲ. ಹೊಲ ಕಾಯುವವರು ಕೂಗುವ ಶಬ್ದವೂ ಇಲ್ಲ.

ಇದ್ದಕ್ಕಿದ್ದಂತೆ ಮತ್ತೆ ಜೀವನ ಯಥಾಸ್ಥಿತಿಗೆ ಬಂದಂತೆ ಆಯಿತು. ಪೊದೆಯೊಂದರ ಹಿಂದಿನಿಂದ ಮಂಗನ ಕೂಗು ಕೇಳಿಸಿತು. ಆಮೇಲೆ ಮೂರು ಕಡೆಯಿಂದ ನೆರಳುಗಳು ಒಂದೊಂದಾಗಿ ಹೊರಬಿದ್ದವು. ಒಬ್ಬರು, ಇಬ್ಬರು, ಮೂವರು, ನಾಲ್ವರು, ಐವರು.... ಹೀಗೆ - "ರೆಡ್‌ಸೆಲ್ಯೂಟ್ ಕಾಮ್ರೇಡ್ಸ್, ರೆಡ್ ಸೆಲ್ಯೂಟ್ ಕಾಮ್ರೇಡ್ಸ್, ರೆಡ್ ಸೆಲ್ಯೂಟ್ ಕಾಮ್ರೇಡ್ಸ್...." ತಂಡಗಳು ಸೂಕ್ತ ಸ್ಥಳಕ್ಕೆ ಸರಿಯಾದ ಸಮಯಕ್ಕೆ ಬಂದಿದ್ದವು. ಅವರು ಸುಮಾರು ಎರಡು ಗಂಟೆಗಳಿಂದ ನಮ್ಮನ್ನು ಕಾಯುತ್ತಾ ಪೊದೆಗಳ ಹಿಂದೆ ಅಡಗಿ ಕುಳಿತಿದ್ದರು. ಕೇವಲ ಅರ್ಧಗಂಟೆ ಹಿಂದಷ್ಟೇ ಪೊಲೀಸ್ ತುಕಡಿಯೊಂದು ಅಲ್ಲಿಂದ ಹಾದು ಹೋಗಿತ್ತು. ಅವರ ಮೇಲೆ ದಾಳಿ ಮಾಡಬೇಕು ಎಂದೆನಿಸಿತ್ತು, ಆದರೆ ಹಾಗೆ ಮಾಡಲಿಲ್ಲ.

"ಎಂಥ ಪರಿಸ್ಥಿತಿಯಲ್ಲೂ ಉದ್ದೇಶಿತ ಗುರಿಯಿಂದ ಗಮನ ಬೇರೆಡೆ ಹರಿಸಬಾರದು" - ಇದು ಗೆರಿಲ್ಲಾ ಜೀವನದ ತತ್ವವಾಗಿತ್ತು. ಈ ತಂಡಗಳು ದಾಳಿ ಮಾಡಲು ನಿಯೋಜಿತವಾಗಿರಲಿಲ್ಲ. ಆದರೆ ಪ್ರಾಂತೀಯ ಸಮಿತಿ ಕಾರ್ಯದರ್ಶಿ ಹಾಗೂ ಅವರ 'ಗೆಳೆಯ' ಅಂದರೆ ನನ್ನನ್ನು ಕರೆದೊಯ್ಯಲು ಬಂದಿದ್ದವು. ಅವರು ಮಾಡಬೇಕಾದದ್ದು ಆ ಕೆಲಸವನ್ನಷ್ಟೆ.

"ನನಗೆ ತುಂಬಾ ಚಿಂತೆಯಾಗಿತ್ತು-ಯುವ ಕಮಾಂಡರ್ ಕಳವಳದ ದನಿಯಿಂದ ಪಿಸುಗುಟ್ಟಿದ. ನಾವು ಬರುತ್ತಿದ್ದ ದಿಕ್ಕಿನಲ್ಲೇ ವೈರಿಪಡೆ (ಪೊಲೀಸ್ ತುಕಡಿ) ಹೋಗಿದ್ದರಿಂದ ಅವರಿಗ ಕಸಿವಿಸಿಯಾಗಿತ್ತು. 'ಹೀಗಾಗಿ, ನೀವು ಬರುವ ಹಾದಿಯಲ್ಲೇ ಒಂದು ವೇಳೆ ಅವರು ಬಂದರ

(ಮುಂದುವರಿಯುವುದು

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 29**
  ಅಂತರ ಕಾಲೇಜ್ ಜಾನಪದ ಕಲಾ ಉತ್ಸವ, ಬೆಳಿಗ್ಗೆ 9 ರಿಂದ ಸಂಜೆ 5 ರ ವರಗೆ, ಯಾದವ ಕಾಲೇಜ್, ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಂಗಳೂರು
- **ಸೆಪ್ಟೆಂಬರ್ 29**
  'ರೈತನ ಮಕ್ಕಳು' ನಾಟಕ ಪ್ರದರ್ಶನ ಸಂಜೆ 6.30 ಕ್ಕೆ, ಎ.ವಿ.ವರದರಾಜ್ ಕಲಾ ಕ್ಷೇತ್ರ, ನಟರಾಜ ಟಾಕೀಸ್ ಹಿಂಭಾಗ, ಬೆಂಗಳೂರು
- **ಸೆಪ್ಟೆಂಬರ್ 30, 2003**
  ಅರಣ್ಯ ಅತಿಕ್ರಮಣ ಸಕ್ರಮಕ್ಕೆ ಒತ್ತಾಯಿಸಿ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ -ಕಾರವಾರ ಸಂಘಟಕರು - ಕರ್ನಾಟಕ ಪ್ರಾಂತ ರೈತ ಸಂಘ - ಉ.ಕ. ಜಿಲ್ಲಾ ಸಮಿತಿ
- **ಅಕ್ಟೋಬರ್ 1,2- 2003**
  ಬಳ್ಳಾರಿ ಜಿಲ್ಲಾ ಸಿಐಟಿಯು ಸಮ್ಮೇಳನ ಹೊಸಪೇಟೆ
- **ಅಕ್ಟೋಬರ್ 2**
  ಆತ್ಮಹತ್ಯೆಯಲ್ಲ - ಸಂಘರ್ಷ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪಾದಯಾತ್ರೆ
  ಬೆಂಗಳೂರು: ಬೆಳಿಗ್ಗೆ 11 ಕ್ಕೆ ಗಾಂಧಿ ಪ್ರತಿಮೆ ಯಿಂದ ರಾಜಭವನಕ್ಕೆ, ನಾಡಿನ ಗಣ್ಯರು, ಚಿಂತಕರು, ಹೋರಾಟಗಾರ ಪಾದಯಾತ್ರೆ
  ಅಕ್ಟೋಬರ್ 2
  ತುಮಕೂರು ಜಿಲ್ಲಾ ಸಿಐಟಿಯು ಸಮ್ಮೇಳನ ತುಮಕೂರು.
- **ಅಕ್ಟೋಬರ್6, 2003**
  ಉತ್ತರ ಕನ್ನಡ ಜಿಲ್ಲಾ ಸಿಐಟಿಯು ಸಮ್ಮೇಳನ, ದಾಂಡೇಲಿ
- **ಅಕ್ಟೋಬರ್ 6,7 2003**
  ಸಿಐಟಿಯು ಗಂಗಾವತಿ ತಾಲ್ಲೂ ಸಮ್ಮೇಳನ, ಗಂಗಾವತಿ
- **ಅಕ್ಟೋಬರ್ 9**
  ಮುಂದುವರಿಕೆ ಶಿಕ್ಷಣ ಕೇಂದ್ರಗಳ ಪ್ರೇರಕ ಮತ್ತು ಸಹಪ್ರೇರಕರ ವಿಧಾನ ಸೌ ಚಲೋ, ಬೆಂಗಳೂರಿನ ಚಿಕ್ಕಲಾಲ್ ಭಾ ನಿಂದ ಬೆಳಿಗ್ಗೆ 11.30 ಕ್ಕೆ ಮೆರವ ಆರಂಭ. ಸಂಘಟಕರು ಕರ್ನಾಟಕ ರಾ ಸಾಕ್ಷರತಾ ಪ್ರೇರಕರ ಸಂಘ ವ ಡಿವೈಎಫ್ಐ

ತಗಡಿನ ತುತ್ತೂರಿ ಹಿಡಿದು ಕೃಷ್ಣರ ಸವಾರಿ

ಐರಾವತ'ವನ್ನೇರಿ ಹೊರಡಲಿದೆ ಕೃಷ್ಣರ ಸವಾರಿ! ವಂಧಿವಮಾಗಧರು, ಮಂತ್ರಿ ಮಹೋದಯರು. ಈ ಜಂಬೂ ಸವಾರಿ ಭಾರೀ ಸರ್ಜರಿ! ರೈತರ ಆತ್ಮಹತ್ಯೆಗಳ, ಸಾವಿನ ಶತಕಗಳ ಹೊರೆ ಹೆಗಲ ಮೇಲಿರುವಾಗ ಇವರ ಮುಖವೀಗ ವಿಜಾಪುರದತ್ತ ತಿರುಗಿದೆ. ನಾಲ್ಕು ವರುಷಗಳ ಅಧಿಕಾರ ಅನುಭವಿಸಿರುವ ಕೃಷ್ಣರಿಗೆ ಐದು ಪೂರೈಸುವ ಇಚ್ಛೆ, ಮತ್ತು ಐದು ವರುಷ ಆಸೀನರಾಗುವತನಕ. ಅದಕ್ಕೆಂದೇ ಅವರ ಆಡಳಿತ ವೈಖರಿ, ಸಾಧನೆಗಳ ಬಗೆಗೆ ಸ್ವತಃ ಅರಿಯುವ ಆಶೆಯಂತೆ! ಅಧಿಕಾರಕ್ಕೆ ಬರುವ ಮೊದಲು 'ವನ-ವಾಸಿ'ಯಾಗಿದ್ದ ಕೃಷ್ಣರು ಪಾಂಚಜನ್ಯ'ದ ರಥವೇರಿ ಕರ್ನಾಟಕದ ಕೆಲವು ಹಾದಿ-ಬೀದಿ ನೋಡಿದ್ದರು. ಬಳಿಕ ಕಳೆದ ವರುಷ ಕಾವೇರಿ ನೀರು ಹಂಚಿಕೆ ವಿವಾದ ಭುಗಿಲೆದ್ದಾಗ ಹಿಡಿದೆಬ್ಬಿಸಲಾದ ಭಾವೋದ್ರೇಕ ಬಾಚಿಕೊಳ್ಳುವ ಆತುರದಲ್ಲಿ ಏಕಾಏಕಿ ಮಂಡ್ಯದ ಕಡೆಗೆ ಸರ್ಧ್ವಾ ರಾಜಕೀಯದ ಪಾದ ಹಾಕಿ, ವಿವಿಧ ರಾಜಕೀಯ ಪಕ್ಷಗಳು, ಸಂಘಟನೆಗಳಿಂದ ಬಹಿಷ್ಕಾರ ಹಾಕಿಸಿಕೊಂಡಿದ್ದಲ್ಲದೆ ಬಳಿಕ ಸುಪ್ರಿಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡು ಅಧಿಕಾರದ ಕುರ್ಚಿ ಅಲ್ಲಾಡಿಸಿಕೊಂಡಿದ್ದರು. ವಿಧಾನಸಭೆಯ ಚುನಾವಣೆಗಳಿಗೆ ಕೆಲವು ತಿಂಗಳಿರುವಾಗ ಈಗ ಹುಡುಕಿಕೊಂಡಿದ್ದಾರೆ ವಿಜಾಪುರದ ದಾರಿ!

ಕೃಷ್ಣ ಮಂಡಳಿಯ ಈ ಸವಾರಿಗೆ 'ಜನಸ್ಪಂದನ' ಎಂದು ಹೆಸರಿಟ್ಟಿದ್ದಾರೆ. ಹೈಟೆಕ್ ಐರಾವತ ಬಸ್ಸು ಅಕ್ಟೋಬರ್ 8 ರಂದು ಬೆಂಗಳೂರಿನಿಂದ ಹೊರಟು- ತುಮಕೂರು, ಚಿತ್ರದುರ್ಗ, ಹೊಸಪೇಟೆ, ಹಾದು- ವಿಜಾಪುರವನ್ನು 11 ರಂದು ತಲುಪಲಿದೆಯಂತೆ. ಹಾದಿಯುದ್ದಕ್ಕೂ ಬಾಜಾ ಬಜಂತ್ರಿ ಸ್ವಾಗತ ಇರುವುದಿಲ್ಲವಂತೆ. ಅಂತ್ಯದಲ್ಲಿ ವೆಲ್ಲಾ ಮೊಳಗಬಹುದಂತೆ. ರಾಷ್ಟ್ರೀಯ ಹೆದ್ದಾರಿ 17 ನ್ನು ಹಿಡಿದಿರುವ ಈ 'ಯಾತ್ರೆ'ಗಳ ಹೈಟೆಕ್ ಬಸ್ಸು ಕೊಂಚ ಹೈದ್ರಾಬಾದ್- ಕರ್ನಾಟಕ ಹಾದಿ ಹಿಡಿದಿದ್ದರೆ. ಇನ್ನೂ ಹೆಚ್ಚು ಸಾಧನೆಗಳು ಸತ್ಯದ ದರ್ಶನ ಆಗಬಹುದಿತ್ತು. ಈ ಹಾದಿ ಹೈಟೆಕ್‌ಗೆ ಸರಿಹೊಂದುವುದಿಲ್ಲವೆಂದು ನಿರಾಕರಿಸಿಬಿಟ್ಟರೇ ಕೃಷ್ಣ. ಹಾಗೆ ನೋಡಿದರೆ ವಿಜಾಪುರದ ಹಾದಿಯೂ ಸುಗಮವೇನಲ್ಲ. ಅವರ ನಡಿಗೆಯ ಮೊದಲ ಹೆಜ್ಜೆಯಲ್ಲಿಯೇ ಹೈಟೆಕ್ ಸಿಟಿಯಲ್ಲಿ ಬೆಂಗಾಡಾಗುತ್ತಿರುವ ಬೆಂಗಳೂರು- ಪೀಣ್ಯಾ ಪ್ರದೇಶ ಕಾಣುತ್ತದೆ. ಬೆಲೆ ಸಿಗದೇ ಲಾರಿ ಏಟು

ಈ ವಾರ ಕರ್ನಾಟಕ
ಒಂದು ನೋಟ
ಎಸ್. ವೈ. ಗುರುಶಾಂತ್

ಗೋಲಿಬಾರ್‌ನ ಗುಂಡೇಟು ತಿಂದ ತುಮಕೂರು ಶಿರಾ ಇದೇ ಹಾದಿಯಲ್ಲಿವೆ. ಪ್ರಶ್ನೆ ಕೇಳಿದ ರೈತರ ಬೆನ್ನ ಮೇಲೆ ಸಚಿವ ರಂಗನಾಥರ ಪ್ರತಾಪದ ಬಾಸುಂಡೆಗಳು ಹಾಗೇ ಇವೆ. ಕೊಪ್ಪಳದ ವಿದ್ಯುತ್ ಹೋರಾಟಗಾರರ ಮೇಲಿನ ಪೊಲೀಸ್ ಅಮಾನವೀಯ ದೌರ್ಜನ್ಯದ ದೂಳು ಇನ್ನೂ ಅಡಗಿಲ್ಲ. ಬಾಗಲಕೋಟೆ ನಿರಾಶ್ರಿತರಿಗೆ ಸೂಕ್ತ ನೆಲೆ ಸಿಕ್ಕಿಲ್ಲ. ಇಲ್ಲಿಂದ ಅಲ್ಲಿಯವರೆಗೂ ಆತ್ಮಹತ್ಯೆಗೀಡಾದ, ನಿತ್ಯ ಬವಣೆಗಳಿಂದ ತತ್ತರಿಸುತ್ತಿರುವ ರೈತರ ಕೂಲಿಕಾರರ ಆಕ್ರಂದನವಿಜಾಪುರದ ಸುತ್ತಲೂ ನಿಂತಿಲ್ಲ. ತೊಗಾಡಿಯಾನ ಹಾರಾಟ ಇಳಿದಿಲ್ಲ. ಇವುಗಳು ಮುಖ್ಯಮಂತ್ರಿಗಳಿಗೆ ಕಾಣಿಸುತ್ತವೆಯೆ? ಇವು ಗೋಚರಿಸಬೇಕೆಂದರೆ ವಿಶ್ವಬ್ಯಾಂಕ್- ಐಎಂಎಫ್, ಬಹುರಾಷ್ಟ್ರೀಯ ಕಂಪನಿಗಳು ತೊಡಿಸಿರುವ 'ಕಪ್ಪು ಕನ್ನಡಕ' (ತಣ್ಣನೆಯ ಚಾಳೀಸ್) ತೆಗೆಯಬೇಕು.

ಕೃಷ್ಣ ತಲುಪಲಿರುವ ವಿಜಾಪುರ ಹಾಗೂ ಜಿಲ್ಲೆಯ ಸುತ್ತಮುತ್ತಲೂ ಸಂಘಪರಿವಾರದ ಅಟ್ಟಹಾಸವಿದೆ. ಹಳ್ಳಿ-ಹಳ್ಳಿಗಳಲ್ಲಿಯೂ ಬಜರಂಗದಳ ಶಾಖೆಗಳೂ, ಆರಂಭಗೊಳ್ಳುತ್ತಿದ್ದು ತ್ರಿಶೂಲ ಹಂಚಿಲಾಗುತ್ತಿದೆ. ಕೃಷ್ಣರ ಸರ್ಕಾರ, ಕೋಮುವಾದಿಗಳ ಕುಕೃತ್ಯಗಳ ವಿರುದ್ಧ ಅದೆಷ್ಟು ದನಿ ಎತ್ತುತ್ತಾರೆ? ಕಾನೂನು- ರಾಜಕೀಯಗಳ ಅಸ್ತ್ರ ಝಳಪಿಸುತ್ತಾರೆ? ಕೋಮು ಸೌಹಾರ್ದತೆಗೆ ಕಾಂಗ್ರೆಸ್‌ನದು ಎಷ್ಟು ಬದ್ಧತೆ ಎಂಬ ಪ್ರಶ್ನೆ ಮತ್ತೆ ಮತ್ತೆ ಎದ್ದು ಬಂದಿದೆ.

ಈಚೆಗಿನ ಗಣಪತಿ ಉತ್ಸವದ ಸುತ್ತಿನಲ್ಲಿ ಚಿಡ್ಡಿಪಡೆಗಳ ಅಟ್ಟಹಾಸಕ್ಕೆ ಅನೇಕ ಕಡೆ ಜಿಲ್ಲಾ ಆಡಳಿತ ಮೌನಸಮ್ಮತಿ ನೀಡಿದ ಉದಾಹರಣೆಗಳಿವೆ. ಗೋಮಾಂಸದ ಬಗ್ಗೆ ದೇವೇಗೌಡರು ಹೇಳಿದರೆಂದು ಆರೋಪಿಸಿದ ಹೇಳಿಕೆಯ ತುಣುಕೊಂದನ್ನು ತಿರುಚಿ, ಹಿಡಿದ ಚಿಡ್ಡಿಪಡೆ ಬಿಜೆಪಿ ದುಷ್ಟ ರಾಜಕೀಯಕ್ಕೆ ಇಳಿದಾಗ- ಕಾಂಗ್ರೆಸ್ ಪಕ್ಷವು ಸಂಘ ಪರಿವಾರವನ್ನು ನಾಚಿಸುವಂತೆ ಚೀರಾಡಿದ್ದು ಇನ್ನೂ ಕೇಳಿಸುತ್ತಿದೆ. ಉದಾರೀಕರಣದ ಓಟಿನ ರಾಜಕಾರಣಕ್ಕೆ ಕಾಂಗ್ರೆಸ್ 'ಖಾವಿ'ಮಯ ಯಾಗುತ್ತಿರುವುದು ತಂದ ದುರಂತ. ಗುಜರಾತ್‌ನ ಕಹಿ ಅನುಭವ ಕಣ್ಣೆದುರೇ ಇದೆ. ಇವುಗಳಿಗೆ ಕೃಷ್ಣ ಉತ್ತರಿಸಿಯಾರೆ? ಆದ್ದರಿಂದ ಇವರ ಹೈಟೆಕ್ ಸವಾರಿ ಹೊರಟ ದಾರಿ ಏನೆಂದು ಕಾದು ನೋಡಬೇಕಿದೆ.

ಅಂತೂ ಕೃಷ್ಣ ತಮ್ಮ ಜನವಿರೋಧಿ ದಿವಾಳಿಕೋರ ನೀತಿಗಳಿಂದ ಜನತೆಯಲ್ಲಿ ಅತೃಪ್ತಿ ಹೆಪ್ಪುಗಟ್ಟುತ್ತಿರುವಾಗ, ಬಿಜೆಪಿ ಕಾಂಗ್ರೆಸ್‌ಗೆ ವಿರೋಧವಾದ ಮೂರನೆಯ ರಾಜಕೀಯ ಶಕ್ತಿಗಳು ಕ್ರೋಢೀಕರಣಗೊಂಡು ಶಕ್ತಿ ಪಡೆಯುವ ಪ್ರಕ್ರಿಯೆ ಇರುವಾಗಲೇ




ಬಣ್ಣ ಕೃಷ್ಣರ ಬಣ್ಣದ ಮಾತುಗಳಷ್ಟು

ವಿಜಾಪುರದತ್ತ ಹೊರಟಿದ್ದಾರೆ. ಅವರ ಪ್ರಚಾರ ಪ್ರೀಯತೆ, ರಾಜಕೀಯ ತಂತ್ರ ಅರಿಯದಷ್ಟು ಜನ ಮುಗ್ಧರಲ್ಲ ಎಂಬುದು ತಿಳಿದಿರಲಿ. ಬಣ್ಣದ ತಗಡಿನ ತುತ್ತೂರಿ ಊದುವ ಕೃಷ್ಣರ ವರಸೆಗಳನ್ನು ಬಯಲಿಗಿಟ್ಟು ಎದುರಿಸುವುದು ಸಹ ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲಿರುವ ಜವಾಬ್ದಾರಿ.

ಕೊಲ್ಲುವವರನ್ನು ಕಾಯುವವರು !

ಆತ್ಮಹತ್ಯೆ ಮಾಡಿಕೊಳ್ಳುವುದು ರಾಜ್ಯಕ್ಕೆ ಅಪಮಾನ ಎಂದಿದ್ದಾರೆ ಪೇಜಾವರ ಮಠದ ಶ್ರೀಗಳವರು. ಅವರು ಮದ್ದೂರಿನ ಹುಳುಗನ ಹಳ್ಳಿಯಲ್ಲಿ ಈ ಬಗ್ಗೆ 'ರೈತರಿಗೆ ಸಾಂತ್ವನ' ಹೇಳುತ್ತಿದ್ದರು. ರೈತರ ಆತ್ಮಹತ್ಯೆಗೆ ಕಾರಣವೇನು ಎಂಬುದರತ್ತ ಚಿಂತನಾಲಹರಿ ಚಿತ್ತಹರಿಸಿದರೋ ಇಲ್ಲವೋ , ಅಂತಹ ಸದ್ಬುದ್ಧಿಯನ್ನುಅವರು ನಂಬಿದ 'ಭಗವಂತ' ಕೊಟ್ಟನೋ ಇಲ್ಲವೋ ತಿಳಿಯದು? ಅವರು 'ವಿಶ್ವಪಾದಂಗಳು' ಆಗಿದ್ದರೂ ರಾಜ್ಯಕ್ಕೆ ದೃಷ್ಟಿ ಸೀಮಿತಗೊಳಿಸಿ ರುವುದು 'ಸ್ವ-ದೇಶಿ' ಅಥವಾ 'ಸ್ವ-ರಾಜ್ಯದ ಮೇಲಿನ ಮಮಕಾರದಿಂದ ಖಂಡಿತ ಇರಲಾರದೇ. ಪೇಜಾವರ ವಿಶ್ವದೃಷ್ಟಿ ಡಾಟ್ ಕಾಂನಲ್ಲಿ ವಾಜಪೇಯಿ ಸರ್ಕಾರದ ವಿಶ್ವಬ್ಯಾಂಕ್‌ನ ನೀತಿ ನಿರ್ದೇಶನಗಳು ಗೋಚರವಾಗದೇ ಇರುವುದು ಕೇವಲ ಸಾಫ್ಟ್‌ವೇರ್‌ನ ದೋಷವಲ್ಲ; ಸಂಘ ಪರಿವಾರದ ಪುರಸ್ಕಾರ, ದೆಹಲಿ ಸರ್ಕಾರಗಳು, ಅಮೆರಿಕಾ ಅಂಕಲ್‌ಗಳು ವಿಶ್ವಾಸವಾದಕ ಅವರನ್ನು ಕಾಯುವ ಕಾಯಕ ಈ ಖಾವಿಧಾರಿಗಳದ್ದೇ ಎಂಬ ಪ್ರಶ್ನೆಗೆ ಉತ್ತರಿಸಲು ತೊಗಾಡಿಯಾನ ಜೊತೆಗಾರರೂ ಆದ ಶ್ರೀಪಾದಂಗಳು ಮುಂದಾಗಿಲ್ಲ. ವಿಶ್ವ ಬ್ಯಾಂಕ್- ಡಬ್ಲ್ಯುಟಿಓನ ಉಚಿತ ಸಲಹೆಗಾರರೂ ಇರಲಿಕ್ಕಿಲ್ಲ. ಯಾಕೆಂದರೆ ಪ್ರತಿಫಲಾಪೇಕ್ಷೆ ಯಿಲ್ಲದೇ ನಿಷ್ಠೆಯಿಂದ ಕೆಲಸ ಮಾಡು ಎಂಬ ಉಪದೇಶ ಅನ್ಯರಿಗಲ್ಲದೇ ತನಗಲ್ಲ ಎಂಬ ಸತ್ಯ ಅರಿತ 'ಸಾಧಕರು'! ಅವರು. ವಿಶ್ವ ಹಿಂದೂ ಪರಿಷತ್‌ನ ನಾಯಕರೂ, ತೊಗಾಡಿಯಾನ ಆತ್ಮಬಂಧುವೂ ಆಗಿರುವ ಉಡುಪಿ ಶ್ರೀ ಕೃಷ್ಣನ ಆರಾಧಕ ಪೇಜಾವರರು ಕೋಮುವಾದಿಗಳನ್ನು ಮಾತಿನಲ್ಲಿ ಮಟ್ಟಹಾಕುವ 'ಗಟ್ಟಿಗ' ಕೃಷ್ಣರವರೂ ಹೀಗೆ ಒಬ್ಬರಿಗೊಬ್ಬರು ಸಹಕಾರ-ಸಾಂತ್ವನ ಹೇಳುತ್ತಿರುವುದು ಕೇವಲ ಆಕಸ್ಮಿಕವಲ್ಲ.





ಕೃಷ್ಣರ ಕಣ್ಣಿಗೆ ಕಂಡೀತೇ ದಾರುಣ ಸತ್ಯ?

ಕುಡಿಯಲು ಆಂಧ್ರಕ್ಕೆ ಆಲಮಟ್ಟಿ ನೀರು

ಇತ್ತೀಚೆಗೆ ಆಂಧ್ರ ಮುಖ್ಯಮಂತ್ರಿಗಳು ಕರ್ನಾಟಕಕ್ಕೆ ಬಂದಿದ್ದರು. ಆಲಮಟ್ಟಿ ಅಣೆಕಟ್ಟು ಪರಗೋಡು ಬ್ಯಾರೇಜ್‌ಗಳ ವಿಷಯದಲ್ಲಿ ಸಾಕಷ್ಟು ವಿವಾದಕ್ಕೆ ಟೀಕೆಗೆ ಒಳಗಾಗಿದ್ದ ಚಂದ್ರಬಾಬು ನಾಯ್ಡುರವರ ಭೇಟಿ ಸಹಜವಾಗಿಯೇ ಕುತೂಹಲ ಕೆರಳಿಸಿತ್ತು. ಕೃಷ್ಣ ಕಣಿವೆಯ 'ಬಿ' ಸ್ಕಿಂನ ನೀರಿನ ಹಂಚಿಕೆಯ ಪ್ರಶ್ನೆಯು ಪ್ರಕಟಿತ ಎದ್ಮುತ್ ಸುದ್ದಿಗೆ ಹೆಚ್ಚಿನ ವಿಶ್ವಾಸ ತಂದಿತ್ತು.

ನಾಯ್ಡುರವರು ಬೆಂಗಳೂರಿಗೆ ಬಂದಿದ್ದು ಇವಾವೂ ವಿಷಯಗಳ ಬಗ್ಗೆ ಚರ್ಚಿಸಲು ಅಲ್ಲ. ಅವರು ಮುಖ್ಯಮಂತ್ರಿ ಕೃಣರವರನ್ನು ಭೇಟಿ ಮಾಡಿ ಕೇಳಿದ್ದು, ಆಂಧ್ರ ಪ್ರದೇಶವೂ ಬರಗಾಲಕ್ಕೆ ಈಡಾಗಿದೆ. ಜನ-ಜಾನುವಾರುಗಳಿಗೆ ಕುಡಿಯುವ ನೀರಿಲ್ಲ' ಒಂದಿಷ್ಟು ಟಿ.ಎಂ.ಸಿ ಆಲಮಟ್ಟಿಯಿಂದ ನೀರು ಬಿಡಿ' ಎಂದು ಚರ್ಚೆ ಸೌಹಾರ್ದಯುತವಾಗಿಯೇ ನಡೆದಿದೆ. ಸಂಕಷ್ಟದ ನೀತಿಯನ್ನು ಪರಸ್ಪರ ಮನಗಂಡು ಕುಡಿಯಲು ಬೇಕಾಗುವಷ್ಟು ನೀರನ್ನು ಕರ್ನಾಟಕ ಬಿಡುವುದು ಅತ್ಯಗತ್ಯ. ಇಂತಹ ಅತೀ ಅವಶ್ಯಕವಿರುವ ನೀರನ್ನು ಬಿಡುವ ಬಗ್ಗೆ ಕೆಲವರು ವಿರೋಧಿಸಿರುವುದು ಸರಿಯಲ್ಲ.

ರಾಮ ರಾಜ್ಯಕ್ಕೆ ಬೆಂಕಿ ಇಡುತ್ತಿರುವ ಸಂಘ ಪರಿವಾರ

ಆಗಸ್ಟ್ 15 ರಿಂದ 30 ರತನಕ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಕರೆಯಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನವಿರೋಧಿ ನೀತಿ ವಿರುದ್ಧ ಪ್ರಚಾರಾಂದೋಲನ ಕಾರ್ಯಕ್ರಮದ ಅಂಗವಾಗಿ, ದಕ್ಷಿಣ ಕನ್ನಡ ಜಿಲ್ಲಾ ಬೆಳ್ತಂಗಡಿ ತಾಲೂಕು ಸಮಿತಿಯ ಎಲ್ಲಾ 18 ಶಾಖೆಗಳ ಸದಸ್ಯರು ಮನೆ ಮನೆ ಭೇಟಿ ನೀಡಿ ಕರಪತ್ರ ಹಂಚಿದರು. ಎಲ್ಲಾ ಕಡೆ ಭಯದ ವಾತಾವರಣ. ಮುಸ್ಲಿಂ, ಬಾಂಧವರಲ್ಲಂತೂ ಅಸಹನೆ ತೋರ್ಪಡಿಸಲಾಗದ ಭಯ, ಹತಾಶೆ ಮನೋಭಾವ ಕಾಣುತ್ತಿತ್ತು. ಬೆಳ್ತಂಗಡಿಯ ಉಜಿರೆಯಲ್ಲಿ ನಡೆದ ಹಿಂದೂ ಸಮಾಜೋತ್ಸವ, ಕಲ್ಲಡ್ಕ ಘಟನೆ ಮಂಗಳೂರಿನಲ್ಲಿ ನಡೆದ ಹಿಂದೂ ಸಮಾಜೋತ್ಸವ ಈ ವಾತಾವರಣ ನಿರ್ಮಾಣವಾಗಲು ಕಾರಣವಾಗಿತ್ತು. ಜಾನುವಾರು ಮಾರಾಟಗಾರರಿಗೆ ಭಜರಂಗದಳ, ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರಿಂದ ಕಿರುಕುಳ ಹೊಡೆತ, ದರೋಡೆ, ದಿನನಿತ್ಯದ ಕತೆ. ವೇಣೂರು ಉಜಿರೆ ಮೊದಲಾದ ಕಡೆ ದನ ಹೋಗುವ ಟೆಂಪೊ ನಿಲ್ಲಿಸಿ ಅದರಲ್ಲಿದ್ದ ಜನರಿಗೆ ಹೊಡೆದು ಹಣ ವಸೂಲಿ ಮಾಡಿ ದನಗಳನ್ನು ತಮ್ಮ ಸ್ವಾದೀನಕ್ಕೆ ತೆಗೆದುಕೊಳ್ಳುತ್ತಿದ್ದರು. ಟೆಂಪೊವನ್ನು ಪೋಲಿಸರಿಗೆ ಒಪ್ಪಿಸಲಾಗುತ್ತಿತ್ತು. ಪೊಲೀಸ್ ಇಲಾಖೆ ಕೇಸ್ ದಾಖಲಿಸುತ್ತಿತ್ತು. ಪೊಲೀಸರಿಗೂ ಇವರ ಮೇಲೆ ಭಯ. ಅವರವರ ಪ್ರದೇಶದಲ್ಲಿ ಇರುವ ಹೆಸರನ್ನು ಕೂಡಾ ಹಿಂದೂ ಜಾಗರಣ ವೇದಿಕೆಯವರು ಹೇಳಿದಂತೆ ಬದಲಾಯಿಸಬೇಕೆಂಬ ಬೇಡಿಕೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಆಗಸ್ಟ್ 20 ರಂದು ಉಜಿರೆಯಿಂದ ಗುರುವಾಯನಕೆರೆ ತನಕ ಕಾಲ್ನಡಿಗೆ ಜಾಥಾ ನಡೆಸಲು ತೀರ್ಮಾನಿಸಿತು. ಈ ಜಾಥಾದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನ ವಿರೋಧಿ ನೀತಿ, ಜಾಗತೀಕರಣ ವಿರೋಧಿ ಹಾಗೂ ಕೋಮು ಸೌಹಾರ್ದ ರ‍್ಯಾಲಿ ಎಂದು ತೀರ್ಮಾನಿಸಿ ಈ ಬಗ್ಗೆ ತಾಲೂಕಾದ್ಯಂತ ಪ್ರಚಾರ ಮಾಡಿ ಸುಮಾರು ನೂರು ಜನ ಸೇರಿಸಲು ಸಾಧ್ಯವಾಯ್ತು. 8 ಕಿ.ಮೀ ನಡೆದ ಈ ಜಾಥಾದಲ್ಲಿ ಮಹಿಳೆಯರು, ಮುದುಕರು ಕೂಡಾ ಸ್ಪೂರ್ತಿಯಿಂದ ಮುನ್ನಡೆದರು.

ಉಜಿರೆಯಲ್ಲಿ ಪ್ರಾರಂಭವಾದ **ಜಾಥಾವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಉದ್ಘಾಟಿಸಿ** ಮಾತನಾಡುತ್ತಾ ಕೇಂದ್ರ ಸರಕಾರದ ಜನವಿರೋಧಿ ನೀತಿಯಿಂದ ಕೈಗಾರಿಕೆ, ಕೃಷಿ ವ್ಯವಸ್ಥೆಯ ನಾಶ ದೇಶವನ್ನೇ ಲೂಟಿ ಮಾಡುವ ಸಂಘ ಪರಿವಾರಗಳ ನೇತೃತ್ವದ ಬಿ.ಜೆ.ಪಿ ಸರಕಾರ ದೇಶವನ್ನು ದಿವಾಳಿಯತ್ತ ಸಾಗಿಸುತ್ತಿರುವುದರ ವಿರುದ್ಧ ಕಿಡಿ ಕಾರಿದರು. ಆಗ ಹಿಂದೂ ಜಾಗರಣ ವೇದಿಕೆಯ ಕೆಲವು ಪುಂಡರು ದಿಕ್ಕಾರ ಕೂಗತೊಡಗಿದರು. ಪೋಲೀಸರು ಕೊನೆಗೆ



ಸೌಹಾರ್ದತೆಯ ಜಾಥಾ

ಮಧ್ಯಪ್ರವೇಶ ಮಾಡಿ ಅವರನ್ನು ಸುಮ್ಮನಿರಿಸಿದರು.

ಆಗ ಜಿ.ಎನ್.ಅವರು "ರಾಮನ ಭಕ್ತ ಹನುಮಂತ ರಾವಣ ರಾಜ್ಯಕ್ಕೆ ಬೆಂಕಿಯಿಟ್ಟರೆ, ಸಂಘ ಪರಿವಾರದ ಗೂಂಡಾಗಳು ರಾಮ ರಾಜ್ಯವಾದ ಭಾರತಕ್ಕೆ ಬೆಂಕಿ ಇಡುತ್ತಿದ್ದಾರೆ. ಕಂಸಾಸುರನ ಸಂತಾನದವರಾದ ಈ ಕೋಟಾ ಹಿಂದುತ್ವವಾದಿಗಳು ಮಕ್ಕಳನ್ನು ಮಹಿಳೆಯರನ್ನು ಕೊಲ್ಲುತ್ತಾ ದೇಶವನ್ನು ಸರ್ವನಾಶ ಮಾಡಲು ಹೊರಟಿದ್ದಾರೆ. ಎಲ್ಲಾ ಕಡೆ ಸಮಸ್ಯೆಗಳ ವಿರುದ್ಧ ಹೋರಾಟಗಳು ಬೆಳೆದು ಬರುತ್ತಿದ್ದರೆ, ಈ ಹೋರಾಟಗಳ ದಮನಕ್ಕೆ ಸಾಮ್ರಾಜ್ಯಶಾಹಿಗಳ ಕುತಂತ್ರಕ್ಕೆ ಬಲಿಯಾದ ಬಿ.ಜೆ.ಪಿ. ಸರಕಾರ ಈ ಸಂಘ ಪರಿವಾರಗಳ ಮೂಲಕ ಜಾತಿ, ಧರ್ಮದ ಹೆಸರಲ್ಲಿ ಗಲಭೆ ಎಬ್ಬಿಸುತ್ತಿದೆ ಎಂದರು. ಕರ್ನಾಟಕದಲ್ಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಸರಕಾರ ಈ ಬಗ್ಗೆ ಮೌನವಾಗಿದೆ. ಸಂಘ ಪರಿವಾರಗಳ ತೊಗಾಡಿಯ ಕಾರ್ಯಕ್ರಮಕ್ಕೆ ವಿರೋಧ ಮಾಡದ ಕಾಂಗ್ರೆಸ್ ಸರಕಾರ, ವಿದ್ಯುತ್ ಚಳುವಳಿಗಾರರನ್ನೂ ಅರಣ್ಯ ಇಲಾಖೆಯಲ್ಲಿ ವಾಸ್ತವ್ಯವಿರುವವರನ್ನು ಎಬ್ಬಿಸುವುದರ ವಿರುದ್ಧ ಹೋರಾಡುವವರನ್ನು, ಗ್ರಾಮೀಣ ಕೃಪಾಂಕ ನೌಕರರ ಹೋರಾಟವನ್ನು ದಮನಿಸಲು ತುದಿಗಾಲಲ್ಲಿದೆ. ಆದರೆ ತೊಗಾಡಿಯರವರ ಉದ್ರೇಕಕಾರಿ ಭಾಷಣವನ್ನು ನಿಲ್ಲಿಸಲು, ತ್ರಿಶೂಲ ಹಂಚುವುದನ್ನು ನಿಲ್ಲಿಸಲು ಮುಂದಾಗಲಿಲ್ಲ. ಬೆಳ್ತಂಗಡಿಯಲ್ಲಿ ಪೋಲೀಸ್ ಕೆಲಸ ಮಾಡಲು ಭಜರಂಗದಳದವರನ್ನು ಬಿಟ್ಟ ಕಾಂಗ್ರೆಸ್ ಸರಕಾರವನ್ನು ಎಷ್ಟು ನಂಬಬಹುದು ಎಂದು ಟೀಕಿಸಿದರು.

ಅದೇ ರೀತಿ ಪ್ರತೀಕಾರದ ಭಾವನೆಯಿಂ ಮುಸಲ್ಮಾನರು ಪ್ರತ್ಯೇಕ ಸಂಘ ಕಟ್ಟಿ ಮತೀಯವಾ ಬೆಳೆಸುವುದು ಸರಿಯಲ್ಲ. ಸಮಸ್ಯೆಗಳ ವಿರುದ್ ಕೋಮುವಾದದ ವಿರುದ್ಧ ಜಾಗತೀಕರಣ ಹಾಗ ಸರಕಾರಗಳ ಜನವಿರೋಧಿ ನೀತಿ ವಿರುದ್ಧ ಒಟ್ಟ ಹೋರಾಡಿ ಎಂದು ಕರೆ ನೀಡಿದರು.

ಉಜಿರೆ, ಲ್ಯಾಲ, ಬೆಳ್ತಂಗಡಿಯಲ್ಲಿ ಸಭೆ ನಡೆ ಗುರುವಾಯನಕೆರೆಯಲ್ಲಿ ಸಮಾರೋಪ ಸ ನಡೆಸಲಾಯ್ತು. ಬೆಳ್ತಂಗಡಿಯಲ್ಲಿ ಸಿಪಿಐ(ಎಂ)ದಕ್ಷಿ ಕನ್ನಡ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾ ಮಾತನಾಡಿದರು. ಹರಿದಾಸ್, ಬಿ.ಎಮ್.ಭಟ ಮಂಜುನಾಥ, ನಿಲೇಶ್ ಮುಂತಾದವರು ಭಾಷ ಮಾಡಿದರು. ಸಿ.ಪಿ.ಐ.(ಎಂ) ತಾಲೂ ಕಾರ್ಯದರ್ಶಿ ಶಿವಕುಮಾರ್ ಜಾಥಾದ ನೇತ ವಹಿಸಿದ್ದರು. ಈ ಜಾಥಾಕ್ಕೆ ಸಿ.ಐ.ಟಿ.ಯು ಎ.ಐ.ಕೆ.ಎಸ್. ಜೆ.ಎಮ್.ಎಸ್, ಡಿ.ವೈ.ಎಫ್ ಸಂಘಟನೆಗಳು ಬೆಂಬಲ ನೀಡಿ ಭಾಗವಹಿಸಿದ ಸಿ.ಐ.ಟಿ.ಯು ನ ಹಮೀದ್ ಹೀತ, ಜೆ.ಎಂ.ಎಸ್ ಸುಕನ್ಯ, ಪ್ರಭಾವತಿ, ಡಿ.ವೈ.ಎಫ್.ಐ ಯ ನಿಲೇ ಬಶೀರ್, ಹಕ್ಕಿಂ ಕುಂಞ, ಮೋನ, ವಸ ಸಾಲಿಯಾನ ಮೊದಲಾದವರು ಭಾಗವಹಿಸಿದ್ದ

ವಿವಿಧ ಜನವಿಭಾಗಗಳ ಸಂಘಟನೆ ಜಾ ಬೆಂಬಲ ನೀಡಿದರು. ಸಮಾರೋಪ ಸಮಾರ ಸುನ್ನತ್ ಕೆರೆಯ 100 ಮಂದಿ ಯುವಕ ಭಾಗವಹಿಸಿದ್ದರು.

ಸಿ.ಪಿ.ಐ.(ಎಂ) ನಿಂದ ನಡೆದ ಈ ಜಾ ತಾಲೂಕಾದ್ಯಂತ ಮಾತ್ರವಲ್ಲ ಪುತ್ತೂರಿನಲ್ಲೂ ಕುತ ಬೆಳೆಸಿತು. ಕಾಂಗ್ರೆಸ್ ಕೋಮುವಾದಿಗಳ ತಾನು ಪ್ರತ್ಯೇಕ ಸಭೆ ನಡೆಸಲು ತೀರ್ಮಾನಿ ಹಿಂದೂ ಜಾಗರಣ ವೇದಿಕೆ ಪುನಃ ಹಿಂ ಸಮಾಜೋತ್ಸವ ಗಣೇಶ ಚೌತಿಯ ಹೆಸ ನಡೆಸಿತು. ಜನ ಸೇರಿದ ಬಗ್ಗೆ ಜಾಥಾವನ್ನು ದೂ ಮಾತಾಡಿತು. ಒಟ್ಟಾರೆ ಈ ಜಾಥಾ ಜನರಲ್ಲಿ ಜಾ ಹುಟ್ಟಿಸಿತು. ಕೋಮುವಾದಿ ಹುನ್ನಾರಗಳಿಗೆ ಉತ್ತರ ಹೇಳಿತು. ಅಸಂಘಟಿತರಲ್ಲಿ ಸಂಘ ಮನೋಭಾವ ಹುಟ್ಟಿಸಿತು. ಸಿಪಿಐ(ಎಂ) ಬಗ್ಗೆ ಹೆಮ್ಮೆಯಿಂದ ಮಾತನಾಡುವಂತಾಯಿತು.

ವರದಿ **ಗೀತ ಪದು**

ಕೊಡಗು ಜಿಲ್ಲಾ ಕಾರ್ಮಿಕರ ಸಮ್ಮೇಳನ

ಸೆಪ್ಟೆಂಬರ್ 14 ರಂದು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು) ವತಿಯಿಂದ ಕಾರ್ಮಿಕರ ಸಮಾವೇಶವು ಚೆಟ್ಟಳ್ಳಿಯ ಮಂಗಳ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ಕೊಡಗಿನ ಎಲ್ಲೆಡೆಗಳಿಂದ ಬಂದಿದ್ದ ತೋಟ ಕಾರ್ಮಿಕರ ಈ ಸಮಾವೇಶವನ್ನು ಸಿ.ಐ.ಟಿ.ಯು ರಾಜ್ಯ ಸಮಿತಿ ಉಪಾಧ್ಯಕ್ಷರಾದ ವಿ.ಸುಕುಮಾರರವರು ಉದ್ಘಾಟಿಸಿದರು.

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಉದಾರೀಕರಣ ಜಾಗತೀಕರಣ ಖಾಸಗೀಕರಣಗಳಿಂದಾಗಿ ದೇಶದ ಉದ್ಯಮ ರಂಗವು ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ಹಲವು ಕಾರ್ಖಾನೆಗಳು ಮುಚ್ಚಿಹೋಗಿ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಕಾಫಿ ಉದ್ಯಮವೂ ಕೂಡ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ಬಿಕ್ಕಟ್ಟಿನ ಹೊರೆಯನ್ನು ಕಾರ್ಮಿಕರ ಮೇಲೆ ವರ್ಗಾಯಿಸಲು ಮಾಲೀಕ ವರ್ಗ ಪ್ರಯತ್ನಿಸುತ್ತಿದೆ.

ಅಲ್ಲದೆ, ಸಂಘ ಪರಿವಾರ, ಕೋಮುಗಲಭೆಗಳ ಮೂಲಕ ಜನತೆಯ ಐಕ್ಯವನ್ನು ಒಡೆಯಲು ಮುಂದಾಗಿದೆ. ನ್ಯಾಯಾಂಗವೂ ಕೂಡ ಕಾರ್ಮಿಕರ ಹಕ್ಕನ್ನು ಕಸಿದುಕೊಳ್ಳಲು ಸಹಾಯಕವಾಗುವ ತೀರ್ಪನ್ನು ನೀಡುತ್ತಿದೆ.


ಈ ಹಿನ್ನೆಲೆಯಲ್ಲಿ ಕಾರ್ಮಿಕರು ಐಕ್ಯ ಹೋರಾಟದ ಮೂಲಕ ಪರಿಸ್ಥಿತಿಯನ್ನು ಎದುರಿಸಲು ಮುಂದಾಗಬೇಕು ಎಂದು ವಿ.ಸುಕುಮಾರ್ ಕರೆ ನೀಡಿದರು.

ಮೈಸೂರಿನಲ್ಲಿ ನಡೆಯುವ ಸಿ.ಐ.ಟಿ.ಯು. ನ ರಾಜ್ಯ ಸಮ್ಮೇಳನಕ್ಕೆ ಮತ್ತು ಮಹಿಳಾ ಕಾರ್ಮಿಕರ ಸಮ್ಮೇಳನಕ್ಕೆ ಕೊಡಗು ಜಿಲ್ಲೆಯ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಸಭೆಯನ್ನು ಉದ್ದೇಶಿಸಿ ಜಿ.ಪಂ.ಸದಸ್ಯರ ಪ್ಲಾಂಟೇಶನ್ ಕಾರ್ಮಿಕರ ಸಂಘದ ರಾಜ್ಯ ಅಧ್ಯಕ್ಷರಾದ ಹೆಚ್.ಎಂ.ಕಾಳಯ್ಯ, ಕೊಡಗು ಯೂನಿಯನ್‌ನ ಉಪಾಧ್ಯಕ್ಷರಾದ ಎನ್.ಡಿ.ಕುಟ್ಟಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಐ.ಆರ್.ಪ್ರಮೋದ್ ಭಾಷಣ ಮಾಡಿದರು.

ಡಿ.ವೈ.ಎಫ್.ಐ. ನಾಯಕ ಭರತ್ ಶುಭ ಕೋರಿದರು ಯೂನಿಯನ್ ಅಧ್ಯಕ್ಷರಾದ ಪಿ.ವೀರಾಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಚಟ್ಟಳ್ಳಿಪೇಟೆಯಲ್ಲಿ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಲಾಯಿತು.



ವಿಜಾಪುರ : ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಯಶಸ್ವಿ ಜಿಲ್ಲಾ ಸಮಾವೇಶ

ಸೆಪ್ಟೆಂಬರ್ 9 ರಂದು ವಿಜಾಪುರ ನಗರದ ಕಂದಗಲ್ ಹೂವಂಕರಾಯ ರಂಗಮಂದಿರದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ವಿಜಾಪುರ ಜಿಲ್ಲೆಯ ಎಲ್ಲ ತಾಲೂಕುಗಳಿಂದ ಸುಮರು 1500 ನೌಕರ್ರರು ಪಾಲ್ಗೊಂಡಿದ್ದರು. ರಾಜ್ಯದ ಎಲ್ಲ ಜಿಲ್ಲೆಗಳಿಂದ ಮತ್ತು ಕೇಂದ್ರ 'ಒಕ್ಕೂಟ' ದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಪಾಲ್ಗೊಂಡಿದ್ದ ಸಮಾವೇಶವನ್ನು ಉದ್ಘಾಟಿಸಿದ ವಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಗಳು ಮಾತನಾಡುತ್ತಾ ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿನ ನಿಸ್ವಾರ್ಥ ದುಡಿಯುವ ಜನರಿಂದ ಮಾತ್ರ ಸಾಧ್ಯ ಎಂದು ಮ್ಯಾಕ್ಸಿಂ ಗಾರ್ಕಿಯವರ ಮಾತುಗಳನ್ನು ಉಲ್ಲೇಖಿಸುತ್ತಾ ಜನಪರವಾಗಿ ನೌಕರರು ಕಾರ್ಯನಿರ್ವಹಿಸಲು ಕರೆ ನೀಡಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ ರಾಜ್ಯ 'ಒಕ್ಕೂಟ'ದ ಅಧ್ಯಕ್ಷರಾದ ಯು.ಡಿ.ನರಸಿಂಹಯ್ಯರವರು ಮಾತನಾಡುತ್ತಾ ಜಗಜ್ಯೋತಿ ಬಸವೇಶ್ವರರ ನಾಡಿನಲ್ಲಿ ಒಕ್ಕೂಟಕ್ಕೆ ನೌಕರರು ನೀಡಿರುವ ಬೆಂಬಲಕ್ಕೆ ಅಭಿನಂದಿಸುತ್ತಿದ್ದರು. ಒಕ್ಕೂಟವನ್ನು ಈ ಭಾಗದಲ್ಲಿ ಕಟ್ಟಲು ಶಕ್ತಿಮೀರಿ ಕಾರ್ಯನಿರ್ವಹಿಸುವಂತೆ ಎಲ್ಲರಿಗೂ ಕರೆ ನೀಡಿದರು. ಒಕ್ಕೂಟದ ಜಿಲ್ಲಾ ಅಧ್ಯಕ್ಷರಾದ ರಾಜೇಂದ್ರ ವಿ.ಮುಂತಾದ ಮುಂದಾ ಜಿಲ್ಲಾ ಸಮಾವೇಶವನ್ನು ಅತ್ಯಂತ ಯಶಸ್ವಿ ಸಂಘಟಿಸಿದ್ದರು. ಮಧ್ಯಾಹ್ನ ನಡೆದ ಪ್ರ ಸಮಾವೇಶದಲ್ಲಿ ರಾಜ್ಯ ಸರ್ಕಾರಿ ನೌ ಎದುರಿಸುತ್ತಿರುವ ಹಲವಾರು ಜ್ವ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚಿಸಿದ್ದಲ್ಲದೆ ಸರ್ವೋಚ್ಚ ನ್ಯಾಯಾಲ ಮುಷ್ಕರದ ವಿರುದ್ಧ ನೀಡಿರುವ ತೀ ಹಿನ್ನೆಲೆಯಲ್ಲಿ ಮುಂದೆ ಕೈಗೊಳ್ಳಬೇ ಕ್ರಮಗಳ ಬಗ್ಗೆ ಪ್ರತಿನಿಧಿಗಳು ಹಲವಾರು ಸೂಚನೆಗಳನ್ನು ನೀಡಿದರು. ಪ್ರ ಸಮಾವೇಶವನ್ನು ಉದ್ದೇಶಿಸಿ ಉಪಾಧ್ಯ ಟಿ.ಸಿ.ಚಂದ್ರಶೇಖರ, ಎ.ಪುಟ್ಟಸ ರಮಾದೇವಿ, ಜಿಲ್ಲಾ ಘಟಕಗಳ ಪ ಜಂಬಯ್ಯ ನಾಯಕ್, ಬಿ.ಎ. ಪಾ ಮುಂತಾದವರು ಮಾತನಾಡಿದರು.

ಇದರಿಂದಾಗಿ ಅಖಿಲ ಕರ್ನಾಟಕ ಸರ್ಕಾರಿ ನೌಕರರ ಒಕ ಉತ್ತರಕರ್ನಾಟಕದ ಎಲ್ಲಾ ಜಿಲ ಸಂಘಟನೆಗೊಂಡು ಅತ್ಯಂತ ಸಕ್ರೀ ಕಾರ್ಯ ನಿರ್ವಹಿಸುತ್ತಲಿದೆ.

ಸಮಾವೇಶದಲ್ಲಿ "ಮುಷ್ಕರದ ಪುಸ್ತಕದ ಪ್ರತಿಗಳನ್ನು ವ ಮಾಡಲಾಯಿತು.

ಮಗನ ಸಾವಿಗೆ ಪರಿಹಾರ-ರೌಡಿಗಳ ಪ್ರಹಾರ

ಚಂದ್ರಮೂರ್ತಿಯಂಬ ೧೬ ವಯಸ್ಸಿನ ಮುಗ್ಧ ವಿದ್ಯಾರ್ಥಿಬೆಂಗಳೂರಿನ ವಿನೋಬನಗರದಲ್ಲಿ ಪೊಲೀಸ್ ದೌರ್ಜನ್ಯದಿಂದಾಗಿ ಮೃತಪಟ್ಟು ನಾಲ್ಕೈದು ತಿಂಗಳಾಗುತ್ತಾ ಬಂತು. ಈತನ ಸಾವಿಗೆ ಪರಿಹಾರವಾಗಲಿ, ಈತನನ್ನು ಕೊಂದ ಇನ್ಸ್‌ಪೆಕ್ಟರ್‌ಗೆ ನ್ಯಾಯರೀತಿ ಶಿಕ್ಷೆಯಾಗಲಿ ಸಿಗಲೇ ಇಲ್ಲ. ಹತ್ತಾರು ಸಂಘಟನೆಗಳು ಬೀದಿಗಿಳಿದು ನ್ಯಾಯಕ್ಕಾಗಿ ಹೋರಾಡುತ್ತಿದ್ದಾಗ್ಯೂ ಆಡಳಿತ ಈ ಬಗ್ಗೆ ಕಿವಿಗೊಡಲಿಲ್ಲ. ಬದಲಿಗೆ ಸ್ಥಳೀಯ ಶಾಸಕರು ಕೊಲೆಗಡುಕ ಇನ್ಸ್‌ಪೆಕ್ಟರ್ ಶಾಮೀಲಾಗಿ ಇಡೀ ಸ್ಲಂ ಪ್ರದೇಶವನ್ನೇ ಭಯಭೀತಗೊಳಿಸುವತ್ತ ಮುಂದಾಗಿದ್ದಾರೆ. ಹೀಗಾಗಿಯೆ ಮಗನನ್ನು ಕಳೆದುಕೊಂಡು ಮರುಗುತ್ತಿರುವ ಕುಟುಂಬಕ್ಕೆ ಪರಿಹಾರವಾಗಿ ರೌಡಿಗಳ ಪ್ರಹಾರ ಎದುರಾಗಿದೆ. ಇಷ್ಟಾದರೂ ಪೊಲೀಸ್ ಇಲಾಖೆಯ ಅಧಿಕಾರಿಗಳು ನಿಷ್ಟುರ ಕ್ರಮ ಜರುಗಿಸದ ಬಗ್ಗೆ ಜನತೆ ಆಡಿಕೊಳ್ಳುತ್ತಿದ್ದಾರೆ.

ಅಧಿಕಾರಿಗಳ ಮುಂದಿನ ಉತ್ತರ ಏನು?

ವಿನೋಬನಗರ, ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಸ್ಲಂ ಪ್ರದೇಶ. ಇದನ್ನು ಸೂಕ್ಷ್ಮ ಪ್ರದೇಶವೆಂದು ಪೊಲೀಸ್ ಇಲಾಖೆ ಘೋಷಿಸಿದೆ. ಇಂಥದ್ದೊಂದು ಜಾಗದಲ್ಲಿ ಸೆಪ್ಟೆಂಬರ್ 19 ರ ರಾತ್ರಿ 10 ಗಂಟೆಯಿಂದ ಹಾಗೂ ಮಧ್ಯರಾತ್ರಿ ಒಂದರತನಕ ಗಣೇಶೋತ್ಸವದ ಹೆಸರಿನಲ್ಲಿ ಆರ್ಕೆಸ್ಟ್ರಾ, ಕಣಿತ, ಕುಣಿತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಉತ್ಸವವನ್ನು ಸಂಘಟಿಸಿದ್ದವರು, ಶಾಸಕ ಆರ್.ವಿ.ದೇವರಾಜ್ ಬೆಂಬಲಿಗರು. ಇವರ ಕಾರ್ಯಕ್ರಮದ ಉತ್ಸವ ಮೂರ್ತಿ ಕಲಾಸಿಪಾಳ್ಯಂ ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದರಾಮಯ್ಯ.

ಸಮಾರಂಭದಲ್ಲಿ ಕೊರಳಿಗೆ ಹಾರ ಭುಜಕ್ಕೆ ಶಾಲು ಹಣ್ಣು-ಹಂಪಲುಗಳ ಸನ್ಮಾನ ಶುರುವಾಗುತ್ತಿದ್ದಂತೆಯೇ ಈತನ ವರಸೆಯೂ ಬದಲಾಗಿ ಹೋಯಿತು. ಸಾರ್ವಜನಿಕರೆದುರು ಸಿಂಗಾರಗೊಂಡ ಸಿದ್ರಾಮಯ್ಯ ತಾನೊಬ್ಬ ಸರ್ಕಾರಿ ಅಧಿಕಾರಿ ಎಂಬುದನ್ನು ಮರೆತು ಪುಡಾರಿ ರಾಜಕಾರಣೆಯಂತೆ ಪೋಸು ನೀಡತೊಡಗಿದ.



ತಾನೊಬ್ಬ ಹುಲಿಯೆಂದು ಘರ್ಜಿಸತೊಡಗಿದ.

ಮದೋನ್ಮತ್ತ ಇನ್ಸ್‌ಪೆಕ್ಟರ್ ಸಿದ್ದರಾಮಯ್ಯ ಸ್ಲಮ್ಮಿನ ಅಮಾಯಕ ಜನತೆಯೆದುರು ಕಥೆಯೊಂದನ್ನು ಹೇಳುವ ಮೂಲಕ ತಾನೊಬ್ಬ ಹುಲಿಯಾಗಹೊರಟ. ಅಲ್ಲಿದ್ದ ರೌಡಿಗಳನ್ನು ಪ್ರೇರೇಪಿಸುವಲ್ಲಿ ಸಹ ಯಶಸ್ವಿಯಾದ. ಮುಂದಿನ ಘಟನೆಗಳ ರೂವಾರಿಯಾದ.

ವಿಘ್ನೇಶ್ವರನ ಎದುರು ನಿಂತು ಸ್ವತಃ ಸಿದ್ಧರಾಮಯ್ಯ ಪೋಣಿಸಿದ ಕಥೆಯ ಸಾರಾಂಶ ಹೀಗಿದೆ ನೋಡಿ.

ಒಂದು ಕಾಡು. ಕಾಡಿನಲ್ಲಿ ಹುಲಿಯೊಂದು ಗಂಭೀರವಾಗಿ ನಡಿಗೆ ಹಾಕ್ತಾ ಸಾಗ್ತಾ ಇರುತ್ತೆ. ಅದೇ ದಾರಿಯಲ್ಲಿ ಓಡಿ ಬಂದ ಜಿಂಕೆ ಹುಲಿಯನ್ನು ನೋಡಿ ಬೆದರಿ ಒಂದೇ ಉಸಿರಿಗೆ ಓಟ ಕೀಳುತ್ತೆ. ಹಿಂದೆ- ಮುಂದೆ ನೋಡ್ದೇ ಓಡಿದ್ದರಿಂದ ಬಾವಿಗೆ ಬಿದ್‌ಬಿಡುತ್ತೆ. ಆ ಬಾವಿ ತುಂಬಾ ಹಾವುಗಳು ತುಂಬಿರುತ್ವೆ. ಅವು ಜಿಂಕೆಯನ್ನು ಆವರಿಸಿಕೊಳ್ಳುತ್ವೆ. ಅದೇ ಸಂದರ್ಭಕ್ಕೆ ಬಾವಿ ತುದಿಯಲ್ಲಿ ಜೇನು ಗೂಡು ಕಟ್ಟಿರುತ್ತೆ. ಜಿಂಕೆ ಕಷ್ಟ ನೋಡಿ ಮೇಲೆ ಬಾ ನಾವು ಜೇನಿನ ರಸದೂಟ ನೀಡ್ತಿವಿ ಅನ್ನುತ್ತೆ ಜೇನು ಗೂಡು. ಆದ್ರೆ ಜಿಂಕೆ ಹೋಗೋದಿಲ್ಲ. ಹಾವುಗಳ ಬಾಯಿಗೆ ಸಿಕ್ಕಿ ಸತ್ತು ಹೋಗುತ್ತೆ.

ಇದು ಕಥೆಯ ಸಾರಾಂಶ. ಗರಿಕೆ ಹುಲ್ಲು ಕಡುಬು- ಸಿದ್ದಿಬುದ್ದಿ ಶಾಪಗ್ರಸ್ಥ ಚಂದ್ರ, ಪಾರ್ವತಿ ಬೆವರು, ಈಶ್ವರನ ಶಾಪದ ಬಗ್ಗೆ ಮಾತಾಡ್ಬೇಕಾದ ಸಂದರ್ಭದಲ್ಲಿ ಹುಲಿ- ಜಿಂಕ ಕಥೆ ಯಾಕೆ ಬಂತು ಅನ್ನೋದೆ ಮುಖ್ಯವಾದ ವಿಷಯ.

ಈ ಕಥೆ ಕಟ್ಟೋದರ ಸಲುವಾಗಿಯೇ ಇನ್ಸ್‌ಪೆಕ್ಟರ್ ಅಲ್ಲಿಗೆ ಬಂದಿದ್ದ ಅಂದ್ರೂ ತಪ್ಪಾಗೋದಿಲ್ಲ. ಈ ಕಥೆಗೂ ಜೂನ್ 16 ರಂದು ವಿನೋಬಾ ನಗರದಲ್ಲಿ ಜರುಗಿದ ಘಟನೆಗಳು ಥಳಕು ಹಾಕಿ ತಾನೊಬ್ಬ ಹುಲಿ ತನ್ನನ್ನು ಕೆಣಕಿದರೆ ಸಾವೇ ಗತಿ ಎಂಬ ಸಂದೇಶ ನೀಡುವುದೇ ಆತನ ಉದ್ದೇಶವಾಗಿತ್ತು. ಜೊತೆಗೆ 16 ರ ಘಟನೆಗೆ ಹುಲಿ ಕಾರಣವಲ್ಲವೆಂದು ಒಪ್ಪಿಸುವ ಹುನ್ನಾರವೂ ಸಾಗಿತ್ತು. ಒಂದೇ ಏಟಿಗೆ ಎರಡು ಹಕ್ಕಿ ಎನ್ನುವಂತೆ.

ವಿನದು 16 ರ ಘಟನೆ- ಏನಿದು ಹುಲಿ- ಜಿಂಕೆ ಕಥೆ.

ಎನೋಬ ನಗರಕ್ಕೆ ಐದು ಜನ ಪಿ.ಸಿಗಳೊಂದಿಗೆ ಗಸ್ತು ಬಂದ ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದರಾಮಯ್ಯ ದಾರಿಯುದ್ದಕ್ಕೂ ಘರ್ಜಿಸುತ್ತಾ ಹೋದ ಕೈಗೆ ಸಿಕ್ಕಿದವರನ್ನು ಲಾಠಿಯಿಂದ ಬೀಸುತ್ತಾ ಸಾಗಿದ. ಭೇಟೆಯಾಡುತ್ತಾ ಹೋದ ಕೊಲೆಗಡುಕ ಸಿದ್ದರಾಮಯ್ಯನ ಎದುರು ಸಿಕ್ಕಿಬಿದ್ದ 16 ವಯಸ್ಸಿನ ವಿದ್ಯಾರ್ಥಿ ಚಂದ್ರಮೂರ್ತಿ ಹುಲಿಗೆ ಜಿಂಕೆಯೆಂದರೆ ಪಂಚಪ್ರಾಣವಲ್ಲವೆ! ಚಂದ್ರಮೂರ್ತಿಯೆಂಬ ಜಿಂಕೆ ಮೇಲೆ ಎರಗಿದ ಹುಲಿ ಸಿದ್ದರಾಮಯ್ಯ ಲಾಠಿ ಪೆಟ್ಟು ಜೀರ್ಣಿಸಿಕೊಳ್ಳಲಾಗದ ಜಿಂಕೆಯಂಥ ಮುದ್ದು ಹುಡುಗ ಚಂದ್ರಮೂರ್ತಿ ಹುಲಿ ಭೇಟೆಗೆ ತುತ್ತಾಗೇ ಹೋದ.

ಕಥೆಯ ಅರ್ಥವೇನು ಗೊತ್ತೆ

ಹುಲಿ - ಸಿದ್ದರಾಮಯ್ಯ, ಜಿಂಕೆ- ಚಂದ್ರಮೂರ್ತಿ

ಬಾವಿ- ಡಿ.ವೈ.ಎಫ್.ಐ, ಹಾವುಗಳು - ಡಿ.ವೈ.ಎಫ್.ಐ

ಕಾರ್ಯಕರ್ತರು ಕೊನೆಗೆ ಜೇನಿನ ಕೊಡ ಯಾವುದು ಗೊತ್ತೆ, ಶಾಸಕ ಆರ್.ವಿ.ದೇಶಪಾಂಡೆ

ಅಂದರೆ ಚಂದ್ರಮೂರ್ತಿ ಸಾವಿಗೆ ನಾನು ಕಾರಣವಲ್ಲ. ಅವನು ತಾನಾಗಿ ತಾನೇ ಸತ್ತ. ನೆರವಾಗಲು ಹೋದ ಆರ್.ವಿ.ದೇವರಾಜ್‌ನನ್ನು ದೂರವಿರಿಸಿದ್ದ ಕುಟುಂಬ ಡಿ.ವೈ.ಎಫ್.ಐ ಬಾವಿಗೆ ಬಿದ್ದಿದೆ. ಅಲ್ಲಿರುವ ಹಾವುಗಳ ಕೈಗೆ ಸಿಕ್ಕಿದೆಯೆಂದು ಕಥೆಯ ಮೂಲಕ ಸಂದೇಶ ನೀಡಿದ.

ರೌಡಿಗಳ ಕಿರುಕುಳ ಅಲ್ಲಿಗೆ ನಿಂತಿಲ್ಲ. ಏಕೆಂದರೆ ಇದು ಎಂ.ಎಲ್.ಎ. ಪೊಲೀಸ್, ಪ್ರಾಯೋಜಕ ರೌಡಿಸಂ ಚಾಕು-ಚೂರಿ ಜಳಪಿಸುವುದು. ಮನೆಗೆ ನುಗ್ಗಿ ಗಲಾಟೆ ಮಾಡುವುದು ಬೀದಿಗಳಲ್ಲಿ ನಿಂತು ಕೊಲ್ಲುವ ಬೆದರಿಕೆ ಒಡ್ಡುವುದು ಇವು ಅಲ್ಲೀಗ ಮಾಮೂಲಿಯಾಗಿ ಬಿಟ್ಟಿದೆ. ದೂರನ್ನು ದಾಖಲಿಸಬೇಕಾದವರೆ ಇದರ ಹಿಂದಿರುವಾಗ ದೂರು ನೀಡುವುದು ಯಾರಿಗೆ?

ಕಿರುಕುಳ ಸಹಿಸಿ ಸಾಕಾದ ಸ್ಲಂ ಜನತೆ ಸಿಪಿಐ(ಎಂ) ನೇತೃತ್ವದಲ್ಲಿ 25 ರಂದು ಪೋಲೀಸ್ ಕಮಿಷನರ್ ಕಛೇರಿ ಎದುರು ಪ್ರತಿಭಟನೆ ಮಾಡಿ ಮನವಿ ಸಲ್ಲಿಸಿದರು.

ಕಮಿಷನರ್ ಎಸ್.ಮರಿಸ್ವಾಮಿಯವರು ನಿಯೋಗದೊಂದಿಗೆ ಮಾತನಾಡಿ "ಯಾರನ್ನೂ ರಕ್ಷಿಸುವುದಿಲ್ಲ" ವೆಂದು ತಿಳಿಸಿದ್ದಾರೆ. ಇದರ ಅರ್ಥ ಮುಂದಷ್ಟೆ ತಿಳಿಯಬೇಕು.


ಈ ಸತ್ಯ ಪತ್ರಿಕೆಗಳಲ್ಲಿ ಪ್ರಕಟಗೊಂಡು ಸಿದ್ದರಾಮಯ್ಯನ ರಾಕ್ಷಸ ಮುಖ ಬಯಲುಗೊಂಡಿತು. ಪೊಲೀಸ್ ದೌರ್ಜನ್ಯದ ವಿರುದ್ಧ ವ್ಯಾಪಕ ಪ್ರತಿಭಟನೆಗಳು ಪ್ರಾರಂಭವಾದವು. ಅದರಲ್ಲೂ ಮುಖ್ಯವಾಗಿ ಡಿ.ವೈ.ಎಫ್.ಐನ ಸಂಘಟನೆ ನ್ಯಾಯಕ್ಕಾಗಿನ ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತಿತು.

ಸ್ಲಮ್ಮೊಂದರ ಘಟನೆ ಇಷ್ಟು ಗಟ್ಟಿಯಾಗಿ ನಿಲ್ಲುತ್ತದೆಂದು ನಿರೀಕ್ಷಿಸಿರದಿದ್ದ ಸಿದ್ದರಾಮಯ್ಯ ಹಾಗೂ ಆತನ ಪೋಷಕ, ಶಾಸಕ ಆರ್.ವಿ.ದೇವರಾಜ್

ಆರೋ- ಮೂರೋ ಕಾಸನ್ನು ಹುಡುಗನ ತಾಯಿ-ತಂದೆಯ ಬಾಯಿಗೆ ತುರುಕಿ ಘಟನೆಯನ್ನು ತಣ್ಣಗೆ ಮಾಡಿ ಮುಚ್ಚಿ ಹಾಕುವ ಪ್ರಯತ್ನ ಮಾಡಿದರು.

ಡಿ.ವೈ.ಎಫ್.ಐ. ಆಸರೆ ಪಡೆದಿದ್ದ ಕುಟುಂಬ ಈ ಅನ್ಯಾಯವನ್ನು ಒಪ್ಪದಾದಾಗ ಕುಟುಂಬದವರನ್ನು ಡಿ.ವೈ.ಎಫ್.ಐ. ಸಂಘಟನೆಯ ಕಾರ್ಯಕರ್ತರನ್ನು ಭಯಭೀತಗೊಳಿಸಿ ತೆಪ್ಪಗಿರಿಸುವ ಭ್ರಮೆಯಿಂದ ಸಿದ್ದರಾಮಯ್ಯ ಕಥೆ ಕಟ್ಟಿ ರೌಡಿಗಳನ್ನು ಪ್ರೇರೇಪಿಸಿದ.

ಸಮಾಜದೆದುರು ತಲೆತಗ್ಗಿ ನಿಲ್ಲುವಂತ ಘಟನೆಗೆ ಕಾರಣನಾಗಿದ್ದ ಅನಾಗರೀಕ ಸಿದ್ದರಾಮಯ್ಯ ಹುಡುಗನ ಸಾವಿಗೆ ಕಾರಣ ನಾನಲ್ಲವೆಂದು ಒಪ್ಪಿಸುವ ಸಲುವಾಗಿ ಕಥೆ ಹೆಣೆದ. ಡಿ.ವೈ.ಎಫ್.ಐ ಸಂಘಟನೆಯ ಕಾರ್ಯಕರ್ತರನ್ನು, ಚಂದ್ರಮೂರ್ತಿಯ ಕುಟುಂಬದವರನ್ನು ರೌಡಿಗಳೆದುರು ಶತೃಗಳಾಗಿಸಿ ಛೂ ಬಿಟ್ಟ. ಗಣೇಶೋತ್ಸವ ಮುಗಿಸಿದ ರೌಡಿಗಳು



ಮೃತನ ತಾಯಿ

ನೇರ ಹೋಗಿದ್ದು ಸಾವಿಗೀಡಾದ ಚಂದ್ರಮೂರ್ತಿ ಮನೆಗೆ. ಚಂದ್ರಮೂರ್ತಿ ತಾಯಿ-ತಂದೆ ಕುಟುಂಬದವರನ್ನು ಚಾಕು-ಚೂರಿಯಿಂದ ಇರಿಯುವುದಾಗಿ ಹೆದರಿಸಿ- ಬೆದರಿಸಿ ಅವರ ಮೇಲೆ ಹಲ್ಲೆ ಮಾಡಿ ಎಂ.ಎಲ್.ಎ ಹೇಳಿದಂತೆ ಕೇಳಬೇಕೆಂದು ಧಮಕಿ ಹಾಕಿ, ಅಲ್ಲಿಂದ ಡಿ.ವೈ.ಎಫ್.ಐ ಕಾರ್ಯಕರ್ತರುಗಳ ಮನೆಗೆ ನುಗ್ಗಿ ಇದೇ ಕೆಲಸ ಮಾಡಿದರು.

ಎನ್.ಪ್ರಭಾ



ಪೊಲೀಸ್ ಕಮೀಷನರ್ ಕಚೇರಿ ಎದುರು ಸಿಪಿಐ(ಎಂ) ಪ್ರತಿಭಟನೆ

ಕೆಲಸದವನ ಹಾಡು

ಕೆಲಸ ಕೊಡಿ
ರೊಟ್ಟಿ ಕೊಡಿ, ಅನ್ನ ಕೊಡಿ
ಕವಿತೆಯಾಗುತ್ತೇನೆ - ಕವಿ ನಾಚುವಂತೆ,
ಕೊಡಿ, ಸೂರಿನಡಿ ನಾಲ್ಕು ಗೋಡೆಗಳ
ಚಿತ್ತಾರವಾಗುತ್ತೇನೆ
ಚಿತ್ರಗಾರನು ಬೆರಗುವಂತೆ

ನನ್ನ ಅಡವಿಟ್ಟ ನಾಳೆಗಳ
ಹಿಂತಿರುಗಿ ಕೊಡಿ

ನನಸಾಗುತ್ತೇನೆ - ಕನಸುಗಳು ಕರಗುವಂತೆ
ವರ್ತಮಾನದ ನಿಮಿಷಗಳೆ ದಾರಿ ಬಿಡಿ!
ಹೆಜ್ಜೆಯಾಗುತ್ತೇನೆ - ಕೋಮುವಾದಿಗಳೆದೆ
ನಡುಗುವಂತೆ.

ಹೆಗಲಿಗೆ ಹೆಗಲು ಕೊಡಿ,
ಸಂಘರ್ಷದೀ ರಣರಂಗದಲಿ
ಮರಣವಾಗುತ್ತೇನೆ
ಈ ನಾಡ ಸುಡುಗಾಡ ಮಾಡುವರೆದೆಗೆ
ಸಿಡಿಲು ಬಡಿದಂತೆ.

ಕೂಲಿಕಾರರಿಗೆ ಪೀಠವಾಗುತ್ತೇನೆ,
ಜೋಗುಳವಾಗುತ್ತೇನೆ ಮತ್ತೆ
ನಾಡ ಕಂದಮ್ಮಗಳ ತುಟಿಯರಳುವಂತೆ.

ಕೆಲಸ ಕೊಡಿ, ರೊಟ್ಟಿ ಕೊಡಿ, ಅನ್ನ ಕೊಡಿ
ದೋಚಿದೀ ಭೂಮಿಯನು ನಮಗೆ ಬಿಡಿ.

ನಮಗೆ ಬಿಡಿ !!
ನಮ್ಮ ಅಂಗಳದಲ್ಲಿ ಮೊಗ್ಗು ಅರಳುವ ಚಿಂತೆ
ಕೋಗಿಲೆಯ ಮೌನಬಿಚ್ಚುವ ಚಿಂತೆ
ನಮಗೆ ಬಿಡಿ ಎಲ್ಲ ಚಿಂತೆಯನು
ಮೋಡಗಳ ಮಾಡುಲೋಗುವೆ
ಮಳೆಯ ಸುರಿಸುತ್ತೇವೆ.
ಸೂರ್ಯ - ಚಂದ್ರರ ಅವರವರ ಜಾಗಕ್ಕೆ
ಕೂರಿಸುತ್ತೇವೆ.

ನಮಗೆ ಬಿಡಿ
ನಮಗೆ ಬಿಡಿ
ಉಳಿದೆಲ್ಲವನು ನಮಗೆ ಬಿಡಿ.

ಸಿದ್ಧಲಿಂಗಯ್ಯ, ರಾಯಚೂರು.

ದ್ರೋಹ- ಕೇಸರಿ ನಾಯಕರ ಇನ್ನೊಂದು ಹೆಸರು

ಬಾಬ್ರಿ ಮಸೀದಿ ಧ್ವಂಸಗೊಳಿಸಿದ ಪ್ರಕರಣದಲ್ಲಿ ಆರೋಪ ಪಟ್ಟಿಸಲ್ಲಿಸಲ್ಪಟ್ಟ ಸಚಿವ ಮುರಳಿ ಮನೋಹರ ಜೋಷಿ ನೈತಿಕ ಹೊಣೆಹೊತ್ತು ರಾಜೆನಾಮೆ ನೀಡಿದ್ದೇನೆಂದಿದ್ದರು. ಈಗ ಸ್ವರ ಬದಲಾಯಿಸಿದ್ದಾರೆ. ಆದ್ವಾನಿವರನ್ನು ಸಿಬಿಐ ಖುಲಾಸೆಗೊಳಿಸಿದೆ. ಗ್ರಹಂಸ್ಟೇನ್ ಮತ್ತು ಮಕ್ಕಳನ್ನು ಜೀವಂತವಾಗಿ ಸುಟ್ಟ ಮಕ್ಕಳನ್ನು ಜೀವಂತವಾಗಿಸುಟ್ಟ ಬಜರಂಗದಳದ ದಾರಾಸಿಂಗ್‌ಗೆ ಕೋರ್ಟ್ ಗಲ್ಲು ಶಿಕ್ಷೆ ವಿಧಿಸಿದೆ.

ಮುಂದಿನ ಚುನಾವಣೆಯ ಕಾರ್ಯಸೂಚಿಯಿಟ್ಟು ಸಂಘಪರಿವಾರ ರಾಷ್ಟ್ರೀಯ ಅಂತರಾಷ್ಟ್ರೀಯ ವೇದಿಕೆ ಬಳಸುತ್ತಿದೆ. ದ್ರೋಹವೇ ಕೇಸರಿ ಪಡೆಗಳ ನಾಯಕರ ಇನ್ನೊಂದು ಹೆಸರಲ್ಲವೇ?

ಸೀತಾರಾಂ ಯೆಚೂರಿ

ಬಾಬ್ರೀ ಮಸೀದಿ ಧ್ವಂಸಗೊಳಿಸಿದ ಪ್ರಕರಣದಲ್ಲಿ ಲಾಲ್ ಕೃಷ್ಣ ಅದ್ವಾನಿಯವರನ್ನು ದೋಷಮುಕ್ತಗೊಳಿಸಿರುವುದು, ರಾಯ ಬರೇಲಿ ನ್ಯಾಯಾಲಯವಲ್ಲ! ಮೂಲ ಆರೋಪ ಪಟ್ಟಿಯಿಂದ ದೂರ ಸರಿದು ಕೇಂದ್ರ ಹೊಸತಾಗಿ ವಿಕೃತಗೊಳಿಸಿದ ಆರೋಪ ಪಟ್ಟಿ ಸಲ್ಲಿಸಿದ ತನಿಖಾದಳ (ಸಿ.ಬಿ.ಐ)ವೇ ಇದಕ್ಕೆ ನೇರ ಹೊಣೆ.

ಪ್ರಧಾನ ಮಂತ್ರಿ ಕಛೇರಿಯ ಅಡಿಯಲ್ಲಿ ಕೆಲಸ ಮಾಡುವ ಸಿ.ಬಿ.ಐ ಮೇಲೆ ಗೃಹ ಸಚಿವಾಲಯದ ತೀವ್ರ ಪ್ರಭಾವ ಇದ್ದೇ ಇರುತ್ತದೆ. ಆರೋಪವನ್ನು ಹೊತ್ತ ಎಲ್.ಕೆ.ಡ್ವಾನಿಯವರೇ ಗೃಹ ಸಚಿವ ಹಾಗೂ ಉಪ ಪ್ರಧಾನಿಯಾಗಿರುವಾಗ ಸಿಬಿಐ ನಿಂದ ನ್ಯಾಯವನ್ನು ನಿರೀಕ್ಷಿಸುವುದಾದರೂ ಹೇಗೆ?

ಸಂಘ ಪರಿವಾರ ನಿಯಂತ್ರಿತ ವಾಜಪೇಯಿ ಸರಕಾರವು ಕಪೋಲ ಕಲ್ಪಿತ 'ಹಿಂದೂ ರಾಷ್ಟ್ರ'ದ ಉದ್ದೇಶವನ್ನು ಈಡೇರಿಸಿಕೊಳ್ಳಲು ಸಂಸದೀಯ ವ್ಯವಸ್ಥೆಯನ್ನು ಬಳಸಿಕೊಳ್ಳಲು ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಇದು ಇನ್ನೊಂದು ಸಾಕ್ಷಿ.

ರಾಯಬರೇಲಿ ಕೋರ್ಟಿನ ತೀರ್ಪು ಬರುವ ಮೊದಲು, ನಾವು 'ಗೆಲ್ಲುವ ಕುದುರೆ' ಎಂದೇ ಬಿಜೆಪಿ- ಆರ್.ಎಸ್.ಎಸ್ ಪರಿವಾರ ಭಾವಿಸಿತ್ತು. ನ್ಯಾಯಾಲಯವು ಎಲ್ಲರನ್ನೂ ದೋಷಮುಕ್ತರನ್ನಾಗಿ ಮಾಡಿದ್ದರೆ, ತಾವು ಮಾಡಿದ್ದೇ ಸರಿ ಎಂದು ಎಲ್ಲೆಡೆ ಸಾರಬಹುದಾಗಿತ್ತು. ಜತೆಯಲ್ಲಿ, ಭಾರತ ಪ್ರಾಚ್ಯವಸ್ತು ಸಮೀಕ್ಷಾ ಸಂಸ್ಥೆ (ಎ.ಎಸ್.ಐ)ಯು ಸಿದ್ಧಪಡಿಸಿದ. ವರದಿಯ ಪ್ರಕಾರ ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ದೇವಸ್ಥಾನದ ಕುರುಹು ಸಿಕ್ಕಿದೆ. ಇದರಿಂದ ಇನ್ನಷ್ಟು ಉತ್ತೇಜಿತರಾಗಿ ಸಂಘ ಪರಿವಾರ ಪ್ರಚಾರದ ರಭಸವನ್ನು ಹೆಚ್ಚಿಸಿದೆ. ಆದರೆ ಈ ಕುರಿತು ಅಲಹಾಬಾದ್ ನ್ಯಾಯಾಲಯವು ಇನ್ನೂ ತೀರ್ಪು ನೀಡಿಲ್ಲ ಎಂಬುದನ್ನು ಸಂಘ ಪರಿವಾರ ಮರೆತಿದೆ.

ರಾಯಬರೇಲಿ ನ್ಯಾಯಾಲಯವು, ಅದ್ವಾನಿ ಸೇರಿದಂತೆ ಎಲ್ಲರ ಮೇಲೂ ಆರೋಪ ಪಟ್ಟಿ ಹಾಕಿದಿದ್ದರೆ, ಇದೊಂದು ರಾಜಕೀಯ ಕುತಂತ್ರ' ಎಂದೋ 'ರಾಮ ಜನ್ಮ ಭೂಮಿಗಾಗಿ ಹುತಾತ್ಮರಾದವರು' ಎಂದೋ ಬೊಬ್ಬೆ ಹೊಡೆಯುತ್ತಿದ್ದರು. ಇಂತಹ ಬೊಬ್ಬೆ ಅವರ ಅಂದಾಜಿನ ಪ್ರಕಾರ 5 ರಾಜ್ಯಗಳಲ್ಲಿ ನಡೆಯಲಿರುವ ಚುನಾವಣೆಗೆ ಅನುಕೂಲವಾಗುತ್ತಿತ್ತು. ಆದರೆ ಅದ್ವಾನಿಯವರನ್ನು ದೋಷಮುಕ್ತರನ್ನಾಗಿ ಮಾಡಿದುದರಿಂದ, ಬಿಜೆಪಿ ಈಗ 'ಗೆಲ್ಲುವ ಕುದುರೆ' ಸ್ಥಾನದಿಂದ ಸೋಲುವ ಕುದುರೆ ಸ್ಥಾನಕ್ಕೆ ಇಳಿದಿದೆ.

ಜೋಷಿ ರಾಜೀನಾಮೆಯ ನಾಟಕ: ವಾಜಪೇಯಿ ಸರಕಾರದಲ್ಲಿ ರಾಜೆನಾಮೆಯ ನಾಟಕಗಳಿಗೇನೂ ಕೊರತೆಯಿಲ್ಲ. ಲೆಕ್ಕವಿಲ್ಲದಷ್ಟು ಬಾರಿ ರಾಜೆನಾಮೆ ನೀಡಿದ ಮಮತಾ ಬ್ಯಾನರ್ಜಿ ಪುನಃ ಖಾತೆರಹಿತ ಮಂತ್ರಿಯಾಗಿದ್ದಾರೆ. 'ತೆಹಲ್ಕಾ ಕಳಂಕದಿಂದ ಮುಕ್ತನಾಗದೇ ಸಚಿವಸ್ಥಾನಕ್ಕೆ ವಾಪಾಸು ಬರುವುದಿಲ್ಲವೆಂದು ಶಪಥ ಮಾಡಿದ ಜಾರ್ಜ್ ಫರ್ನಾಂಡೀಸ್ ಕೈಯಲ್ಲಿ ದೇಶದ ರಕ್ಷಣಾ ಖಾತೆ! ನಿಲೇಶ್‌ಕುಮಾರ್, ಚಿಂಚೀ ರಾಮಚಂದ್ರನ್ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇದೀಗ ಶಿಕ್ಷಣದ ಕೇಸರೀಕರಣ ಗೊಳಿಸುವುದರಲ್ಲಿ ತಲ್ಲೀನರಾಗಿರುವ ಮುರಳಿ ಮನೋಹರ ಜೋಷಿಯವರು ಪ್ರಧಾನ ಮಂತ್ರಿಯವರಿಗೆ ರಾಜೆನಾಮೆ ಸಲ್ಲಿಸಿದ್ದಾರೆ. ಆದರೆ ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಪ್ರಧಾನ ಮಂತ್ರಿಯೊಂದಿಗೆ ಮಾತನಾಡಿದ ನಂತರ ರಾಜೆನಾಮೆ ವಾಪಾಸು ಪಡೆಯುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಇವರು ಅಷ್ಟೊಂದು ಶಿಸ್ತಿನ ಸಿಪಾಯಿ ಆಗಿದ್ದರೆ, 1998ರಲ್ಲಿ ಮಂತ್ರಿ ಪದವಿಯನ್ನೇ ಸ್ವೀಕರಿಸಬಾರದಾಗಿತ್ತು. ಲಕ್ನೋದ ವಿಶೇಷ ನ್ಯಾಯಾಲಯವು ಸೆಪ್ಟೆಂಬರ್, 1997 ರಲ್ಲೇ ಸಂಘಪರಿವಾರದ ಅದ್ವಾನಿ, ಜೋಷಿ, ಉಮಾಭಾರತಿ ಮತ್ತಿತರ 49 ಮಂದಿಯ ಮೇಲೆ ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಕ್ರಿಮಿನಲ್ ಕುತಂತ್ರ ನಡೆಸಿದ ಆರೋಪವನ್ನು ಹೊರಿಸಿತ್ತು. ಅದರೂ 1998 ರಲ್ಲಿ 24 ಪಕ್ಷಗಳ ಅಧಿಕಾರದಲ್ಲಿ ಮೇಲಿನ ಮೂವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಇವರು ಶಿಸ್ತಿನ ಸಿಪಾಯಿಗಳಾಗಿದ್ದರೆ, ನೈತಿಕತೆ ಇದ್ದಿದ್ದರೆ ಆಗಲೇ ಸಚಿವರಾಗಬಾರದಿತ್ತು. ಇವರಿಗೆಲ್ಲಿದೆ ನೈತಿಕತೆ.

ಪುನಃ ಕೋಮುವಾದಕ್ಕೆ ಒತ್ತು: ಸಾರ್ವಜನಿಕರ ಬೆಂಬಲದಿಂದ ದೂರವಾಗುತ್ತಿರುವ ಬಿಜೆಪಿ ಕೂಟವು ಪುನಃ ಕೋಮುವಾದದ ಅಟ್ಟಹಾಸಕ್ಕೆ ಮೊರೆಹೋಗುತ್ತಿದೆ. ಇದರಿಂದ ಗುಜರಾತಿನಲ್ಲಿ ನಡೆದಂತೆ ಹಿಂದು ಮತ ಬ್ಯಾಂಕ್‌ನ್ನು ಬುಟ್ಟಿಗೆ ಹಾಕಿಕೊಳ್ಳುವ ಪ್ರಯತ್ನ ಸಾಗುತ್ತಿದೆ.


ದೇವಾಲಯ ನಿರ್ಮಿಸುವುದಕ್ಕೆ ಹೋರಾಟ ನಡೆಸುವುದಾಗಿ ವಿಶ್ವಹಿಂದೂ ಪರಿಷತ್ತು ಹೇಳಿದ್ದು ನ್ಯಾಯಾಲಯದ ತೀರ್ಪನ್ನು ಕೂಡಾ ಉಲ್ಲಂಘಿಸುವುದಾಗಿ ಹೇಳಿದೆ. ಸೆಪ್ಟೆಂಬರ್ 23 ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ವರದಿಯಾದಂತೆ 'ದೇವಾಲಯ ನಿರ್ಮಾಣ ಆರಂಭವಾದರೆ ಮಾತ್ರ ಭಯೋತ್ಪಾದನೆ ನಿಲ್ಲುತ್ತದೆ' ಎಂದು ಹೇಳುವ ಮೂಲಕ ತನ್ನ ಫ್ಯಾಸಿಸ್ಟ್ ಧೋರಣೆಯನ್ನು ಬಿಚ್ಚಿಟ್ಟಿದೆ. ಸಂಘ ಪರಿವಾರದ ಇನ್ನೋರ್ವ ಪ್ರಚಾರಕರಾಗಿದ್ದ ಪ್ರಧಾನ ಮಂತ್ರಿ ವಾಜಪೇಯಿಯವರು ಭಯೋತ್ಪಾದನೆ ವಿರುದ್ಧ ಧೃಢ ಹೆಜ್ಜೆ ಇರಿಸಬೇಕೆಂದು ಅಂತರರಾಷ್ಟ್ರೀಯ ಪ್ರಚಾರ ನಡೆಸುತ್ತಿದ್ದಾರೆ. ಬಹುಶಃ ಅವರ ಪ್ರಕಾರ, ಇಸ್ಲಾಂ ಮೂಲಭೂತವಾದಿಗಳು ಧಾಳಿ ನಡೆಸಿದರೆ ಅದು ಭಯೋತ್ಪಾದನೆ; ಹಿಂದೂ ಕೋಮುವಾದಿಗಳು ನಡೆಸಿದ ಧಾಳಿ, ರಾಜಕೀಯ ಚಳುವಳಿ? ಇದು ಜನತೆಯನ್ನು ದಿಕ್ಕು ತಪ್ಪಿಸುವ ದ್ರೋಹವಲ್ಲದೆ ಇನ್ನೇನು?

'ಕವಿ ಹೃದಯದ, ಪ್ರಧಾನಮಂತ್ರಿಯಂತೂ' ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕೆಂದು ಹೇಳುವ ಮೂಲಕ ಕ್ರಿಶ್ಚಿಯನ್ ಮಿಷಿನರಿಗಳು ನಡೆಸಿದ ಮತಾಂತರಕ್ಕೆ ಪ್ರತಿಯಾಗಿ ಸ್ಟೈನ್ಸ್ ಅವರ ಹತ್ಯೆಯಾಯಿತು ಎಂದು ಹೇಳುವ ಮೂಲಕ ಇಡೀ ಪ್ರಕರಣವನ್ನು ಗೌಣಗೊಳಿಸಲು ಪ್ರಯತ್ನಿಸಿದರು.

ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಉತ್ತೇಜಿಸುವ ಮೂಲಕ ಚುನಾವಣೆ ಮತ್ತು ರಾಜಕೀಯ ಕಾರ್ಯಸೂಚಿಯನ್ನು ಮುಂದೆ ಇಟ್ಟು ಅದರಿಂದ ಲಾಭ ಪಡೆಯಲು ಹವಣಿಸುತ್ತಿರುವ ಸಂಘ ಪರಿವಾರ, ಇದಕ್ಕಾಗಿ ಎಲ್ಲಾ ರಾಷ್ಟ್ರೀಯ ಅಂತರಾಷ್ಟ್ರೀಯ ವೇದಿಕೆಗಳನ್ನು ಬಳಸಿಕೊಳ್ಳುತ್ತಿದೆ.

ಮುಗ್ಧ ಜನರ ಕೊಲೆ, ಆಸ್ತಿ ಪಾಸ್ತಿ, ಧ್ವಂಸ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ತರುವುದರ ಮೂಲಕ ಮಾತ್ರವೇ ಪ್ರಭುತ್ವದ ಮೇಲಿನ ತನ್ನ ಹಿಡಿತವನ್ನು ಗಟ್ಟಿಗೊಳಿಸಬಹುದು ಎಂದು ಧೃಡವಾಗಿ ನಂಬಿರುವ ಸಂಘ ಪರಿವಾರ ಈ ನಿಟ್ಟಿನಲ್ಲಿ ರಭಸದಿಂದ ಮುನ್ನುಗ್ಗುತ್ತಿದೆ.

ಈ ಶಕ್ತಿಯನ್ನು ಸೋಲಿಸುವುದರ ಮೂಲಕ ಮಾತ್ರವೇ ಎಲ್ಲಾ ದೇಶಪ್ರೇಮಿಗಳು ಬಯಸುವ ಜಾತ್ಯಾತೀತ ಭಾರತವನ್ನು ಉಳಿಸಿಕೊಳ್ಳುವುದು ಸಾಧ್ಯ.



ಕೃಪೆ : ತೀಕ್ ದಿರ್

ದಾರಾಸಿಂಗ್‌ಗೆ ಗಲ್ಲು

ಅದ್ವಾನಿ ಮತ್ತಿತರ ಮುಖಂಡರು ಸರ್ಟಿಫಿಕೇಟ್ ನೀಡಿದ ಬಜರಂಗದಳದ ಪ್ರಮುಖ ಕಾರ್ಯಕರ್ತ ದಾರಾಸಿಂಗ್‌ಗೆ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ. ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಅವ್ಯಾಹತ ಅಪಪ್ರಚಾರದ ಜತೆಯಲ್ಲೇ ತೀವ್ರ ದಾಳಿಯನ್ನು ಎಸಗಿದ ಸಂದರ್ಭದಲ್ಲಿ ಕ್ರೈಸ್ತ ಧರ್ಮ ಪ್ರಚಾರ ಗ್ರಹಾಂ ಸ್ಟೈನ್ಸ್ ಮತ್ತು ಅವರ ಇಬ್ಬರು ಮುದ್ದು ಮಕ್ಕಳನ್ನು ಬೆಂಕಿ ಇಟ್ಟು ಸುಡಲಾಗಿತ್ತು. ಈ ಹಿನ್ನೆಲೆಯಲ್ಲಿ ದಾರಾಸಿಂಗ್ ಸೇರಿದಂತೆ 13 ಜನರ ಮೇಲೆ ಆರೋಪ ಹೊರಿಸಲಾಗಿದ್ದು ನ್ಯಾಯಾಲಯವು ಒಬ್ಬರನ್ನು ಖುಲಾಸೆಗೊಳಿಸಿ, ದಾರಾಸಿಂಗ್‌ಗೆ ಮರಣದಂಡನೆಯನ್ನು ಇನ್ನುಳಿದವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ. ಆದ್ದರಿಂದಲೇ ನ್ಯಾಯಾಲಯವು ಕೆಲವೊಂದು ಹಂತದಲ್ಲಾದರೂ ಜನರ ನಂಬಿಕೆಯನ್ನು ಉಳಿಸಿಕೊಂಡಿದೆ.


ಆದರೆ ಆದ್ವಾನಿ ಮಹಾಶಯರು ಈ ಆರೋಪಿಗಳಿಗೆ ಒಳ್ಳೆಯ ಗುಣ ನಡತೆಯ ಸರ್ಟಿಫಿಕೇಟ್ ನೀಡಿದ್ದರು. ಈ ಆರೋಪಿಗಳನ್ನು ಬಂಧಿಸಿದ ಸಂದರ್ಭದಲ್ಲಿ, ನನಗೆ ಈ ಸಂಘಟನೆಗಳ ಬಗ್ಗೆ ಗೊತ್ತು, ಅವರೆಲ್ಲ ಕ್ರಿಮಿನಲ್‌ಗಳಲ್ಲ" ಎಂದು ಹೇಳಿದ್ದರು. ಆರ್.ಎಸ್.ಎಸ್. ಗಿಂತಲೂ ಒಂದು ಹೆಜ್ಜೆ ಮುಂದೆ ಇಟ್ಟಿರುವ ಜಾರ್ಜ್ ಫರ್ನಾಂಡಿಸ್, ಗ್ರಹಂ ಸ್ಟೈನ್ಸ್ ಅವರ ಹತ್ಯೆ ವಿದೇಶಿ ಕೈವಾಡ ಎಂದು ಬಣ್ಣಿಸಿದ್ದರು. ಪೋಕ್ರಾನ್ ಅಣುಪರೀಕ್ಷೆಯಿಂದ ಆತಂಕಗೊಂಡ ಇಸ್ಲಾಮಿ ಜಹಾದಿಗಳು ಈ (ಎನ್.ಡಿ.ಎ) ಸರಕಾರ ಇರಬಾರದೆಂದು, ಅದಕ್ಕೆ ಮಸಿ ಬಳಿಯಬೇಕೆಂದು ಸ್ಟೇನ್ ಅವರ ಕೊಲೆ ಮಾಡಿದರು' ಎಂದು ಅಂದು ಬಿಜೆಪಿಯ ಕಾರ್ಯದರ್ಶಿಯಾಗಿದ್ದು, ಇಂದು ಗುಜರಾತ್ ಮುಖ್ಯಮಂತ್ರಿಯಾಗಿರುವ ನರೇಂದ್ರ ಮೋದಿ ತಿಳಿಸಿದ್ದರು.



ಸೋಮವಾರ ಪೇಟೆ


ತಲೆ ಎತ್ತುತ್ತಿರುವ ಮೋದಿ ಸಂತಾನ

ವ್ಯಕ್ತಿಗಳಿಬ್ಬರ ನಡುವಿನ ಬಡಿದಾಟದಿಂದ ಆದ ಕೊಲೆ ಪ್ರಕರಣವನ್ನೇ ಬಳಸಿ, ದಾಂಧಲೆಗೆ ಇಳಿಯಿತು ಚಡ್ಡಿ ಪಡೆ. ಅಲ್ಲಿ ಮಾಡಿದ ಹಾವಳಿ ಎಂತಹದ್ದು?



ನೆಲಕಚ್ಚುತ್ತಿದ್ದ ಶಾಸಕ, ಸಂದರ್ಭಸಾಧಕ

ಕೊಡಗಿನ ಸೋಮವಾರಪೇಟೆ ಸಮೀಪದ ಹಾನಗಲ್ ಬಾಣೆಯಲ್ಲಿ ಕಾರ್ಮಿಕ ಮುರಗೇಶ್ ಎಂಬುವವರಿಗೆ ಇನ್ನೊಬ್ಬ ಕಾರ್ಮಿಕ ಇಸ್ಮಾಯಿಲ್ ಎಂಬುವವರು ವೈಯಕ್ತಿಕ ಕಾರಣಗಳಿಂದ ಚಾಕುವಿನಿದ



ಗಲಭೆಗೆ ಇಳಿದ ಗುಂಪು

ಇರಿದು ಮುರುಗೇಶ್ ಮೃತಪಟ್ಟಿದ್ದು, ಈ ವಿಷಯವನ್ನೆತ್ತಿಕೊಂಡು ಭಾ.ಜ.ಪ ಮಂದಿ ಇಡೀ ಸೋಮವಾರಪೇಟೆಯನ್ನು ಗುಜರಾತ್ ಮಾಡಲು ಹೊರಟಿದ್ದಾರೆ. ಈ ಇಬ್ಬರು ಕಾರ್ಮಿಕರು ಸ್ನೇಹಿತರಾಗಿದ್ದು ಅಕ್ಕಪಕ್ಕದ ನಿವಾಸಿಗಳು. ಘಟನೆಯೆಂದು ಬೆಳಿಗ್ಗೆ ಇಬ್ಬರೂ ಸೋಮವಾರಪೇಟೆಗೆ ತೆರಳಿ ಮಾಂಸ ಖರೀದಿಸಿ ಮನೆಗೆ ಬಂದವರು, ಮುರುಗೇಶನ ಮನೆಯಲ್ಲೆ ವಿಶಾಮತ್ತರಾಗಿ ಮಾತಾಡಿಕೊಂಡು ಹೊರಬಂದವರು ನಂತರ ನೀರು ಬಿಡುವ ವಿಚಾರದಲ್ಲಿ ಜಗಳವಾಡಿಕೊಂಡು ಮಾತು ವಿಕೋಪಕ್ಕೆ ಹೋದಾಗ ಇಸ್ಮಾಯಿಲ್ ತನ್ನ ಕೈಯಲ್ಲಿದ್ದ ಚಾಕುವಿನಿಂದ ಮುರುಗೇಶನ ಕುತ್ತಿಗೆಗೆ ತಿವಿದಿದ್ದ. ತೀವ್ರ ರಕ್ತಸ್ರಾವ ಉಂಟಾಗಿ ಆಸ್ಪತ್ರೆಗೆ ಕೊಂಡೊಯ್ಯುವಾಗ ಆತ ಮೃತಪಟ್ಟಿದ್ದ. ಇದು ಕಾನೂನು ರೀತಿಯಲ್ಲಿ ಕ್ರಮ ಜರುಗಿಸಬೇಕಾದ ಘಟನೆ. ಆದರೆ ಈ ಘಟನೆಯನ್ನು ದೊಡ್ಡದು ಮಾಡಿದ ಕಾವಿಪಡೆ ಇಡೀ ಪಟ್ಟಣದಲ್ಲಿ ದಾಂಧಲೆ ನಡೆಸಿ ಲೂಟಿ ನಡೆಸಿದ್ದಾರೆ.

ಸೋಮವಾರಪೇಟೆ ತಾಲೂಕಿನ ಭಾ.ಜ.ಪ ಅಧ್ಯಕ್ಷ ಮಂಜುನಾಥ್ ನೇತೃತ್ವದಲ್ಲಿ ಘಟನೆ ನಡೆದ ರಾತ್ರಿ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಠಾಣೆಯ ನಾಮಫಲಕ ಕಿತ್ತೆಸೆದು ಕಿಟಕಿ ಗಾಜುಗಳನ್ನು ಪುಡಿ ಮಾಡಿ ದಾಂಧಲೆ ಆರಂಭಿಸಿದ್ದಾರೆ. ನಂತರ ಅಲ್ಪಸಂಖ್ಯಾತರಿಗೆ ಸೇರಿದ ನಾಲ್ಕು ಅಂಗಡಿಗಳಿಗೆ ಕಲ್ಲು ತೂರಿ ಹಾನಿ ಮಾಡಿದ್ದಲ್ಲದೆ ಒಂದು ಅಂಗಡಿಗೆ ಬೆಂಕಿ ಹಚ್ಚಿದ್ದಾರೆ. ಘಟನೆಗೆ ಕೋಮು ಬಣ್ಣ ಹಚ್ಚಿ ಇನ್ನಷ್ಟು ಬೆಂಕಿ ಹಚ್ಚಲು ಪ್ರಯತ್ನಿಸಿದ್ದಾರೆ. ಅಲ್ಪಸಂಖ್ಯಾತರ ಮನೆಗಳನ್ನು ಗುರುತಿಸಿ ಕಲ್ಲು ತೂರಲಾಗಿದೆ. ವಾಹನಗಳನ್ನು ಜಖಂಗೊಳಿಸಲಾಗಿದೆ. ಮೋಟಾರ್ ಸೈಕಲನ್ನು ಸುಟ್ಟು ಹಾಕಲಾಗಿದ. ಕೋಮು ಗಲಭೆಯ ಮುನ್ಸೂಚನೆ ದೊರೆತ ಕೂಡಲೇ ಪೊಲೀಸ್ ಇಲಾಖೆ 144 ನೇ ಸೆಕ್ಷನ್ ಜಾರಿ ಮಾಡಿದೆ. ರಾತ್ರಿ ಆರೋಪಿ ಇಸ್ಮಾಯಿಲ್ ಶರಣಾಗಿದ್ದಾನೆ. ಆದರೂ ಬಾ.ಜ.ಪ. ದವರು ನಿಷೇದಾಜ್ಞೆಯ ನಡುವೆ ಮೆರವಣಿಗೆ ಮಾಡಿ ಸೋಮವಾರಪೇಟೆಯಲ್ಲಿ ದಾಂಧಲೆ ನಡೆಸಿದ್ದಾರೆ. ದಾಂಧಲೆ ನಿಯಂತ್ರಿಸ ಬೇಕಾದ ಪೊಲೀಸರು ಜನತೆಗೆ ರಕ್ಷಣೆ ನೀಡದೇ ದಾಂಧಲೆಕೋರರಿಗೆ ಬೆಂಗಾವಲಾಗಿ ನಿಂತಿದ್ದಾರೆ. ಸೆಕ್ಷನ್ 144 ಜಾರಿಯಲ್ಲಿದ್ದರೂ ಸಂಘ ಪರಿವಾರದವರಿಗೆ ಇದು ಅನ್ವಯವಾಗಲಿಲ್ಲ. ಶಾಸಕ ರಂಜನ್ ಆಗಮಿಸಿದ



ಆರೋಪಿ [illegible] ಮನೆಯನ್ನು ಧ್ವಂಸಗೊಳಿಸಿದ್ದು

ನಂತರ ದಾಂಧಲೆಗಳು ಮುಂದುವರೆದಿವೆ. ಶಾಸಕರ ಆಪ್ತ ಸಹಾಯಕ ಕುಟ್ಟಪ್ಪ ಈ ದಾಂಧಲೆಯಲ್ಲಿ ನೇರವಾಗಿ ಭಾಗಿಯಾಗಿದ್ದಾನೆ.

ಗಾಂಧಿನಗರ ಹಾಗೂ ಚೌಡ್ಲು ಗ್ರಾಮದ ಅಲ್ಪಸಂಖ್ಯಾತ ಮನೆಗಳನ್ನು ಗುರುತಿಸಿ ನುಗ್ಗಿದ ಗುಂಪು ಕಲ್ಲು ತೂರಿ ಹಾನಿ ಮಾಡಿದ್ದಾರೆ. ವಾಹನಗಳನ್ನು ಜಖಂಗೊಳಿಸಿದ್ದಾರೆ. ಅಸ್ಲು ಎಂಬುವವರ ಮನೆಗೆ ನುಗ್ಗಿ ಹಲ್ಲೆ ನಡೆಸಿ ಹಣ ಚಿನ್ನಾಭರಣಗಳನ್ನು ದೋಚಿದ್ದಾರೆ. ಮೂಸಾ ಎಂಬುವವರಿಗೆ ಸೇರಿದ ಬೈಕನ್ನು ಸುಟ್ಟು ಹಾಕಲಾಗಿದೆ. ಬ್ಯಾಂಕ್ ವ್ಯವಸ್ಥಾಪಕ (ಹಿಂದೂ) ಅವರ ಮನೆಗೆ ಕಲ್ಲುತೂರಿ ಕಾರನ್ನು ಜಖಂಗೊಳಿಸಲಾಗಿದೆ. ಇವರ ದಾಳಿಯಿಂದ ತತ್ತರಿಸಿದ ಅಲ್ಪಸಂಖ್ಯಾತ ಕುಟುಂಬದವರು ರಕ್ಷಣೆಗಾಗಿ ಅಲ್ಲಾ ಹೋ ಎಂದು ಕೂಗಿಕೊಂಡಾಗ ಇದನ್ನು ಜಿಹಾದ್ ಘೋಷಣೆ ಎಂದು ಹುಯಿಲೆಬ್ಬಿಸಿದ್ದಾರೆ.

ಮಸೀದಿಗೆ ಕಲ್ಲು:

ಪ್ರತಿಭಟನೆ ನೆಪದಲ್ಲಿ ಮಸೀದಿಗೆ ಕಲ್ಲು ತೂರಲಾಗಿದೆ. ಅಬ್ಬಾಸ್ ಎಂಬುವವರ ಮನೆಗೆ ಹಾನಿ ಮಾಡಲಾಗಿದೆ. ಇದೆಲ್ಲವೂ ಪೊಲೀಸ್ ರಕ್ಷಣೆಯಲ್ಲಿ ನಡೆದಿದೆ. ಪೊಲೀಸ್ ವರಿಷ್ಠಾಧಿಕಾರಿಯನ್ನು ಪ್ರತಿಭಟನಾಕಾರರು ಎಳೆದಾಡಿದ್ದಾರೆ. ಎಸ್.ಪಿ ಯವರಿಗೆ ಕಲ್ಲೇಟು ಬಿದ್ದಿದೆ. ಆದರೂ ಪೋಲೀಸರು ಕ್ರಮ ತೆಗೆದುಕೊಳ್ಳಲಿಲ್ಲ. ಮದ್ಯಾಹ್ನ ನಗರಕ್ಕೆ ಆಗಮಿಸಿದ ಶಾಸಕ ಅಪ್ಪಚ್ಚು ರಂಜನ್ ಶಾಸಕರ ನಿಧಿಯಿಂದ ಮೃತನ ಕುಟುಂಬಕ್ಕೆ 10 ಸಾವಿರ ರೂ ಪರಿಹಾರ ನೀಡುವುದಾಗಿ ಹೇಳಿದ್ದು ಪ್ರತಿಭಟನಾಕಾರರಿಗೆ ಹುಮ್ಮಸ್ಸು ಹೆಚ್ಚಿಸಿದೆ. ಶಾಸಕರ ಆಗಮನ ನಂತರ ಇನ್ನಷ್ಟು ದಾಂಧಲೆ ನಡೆಸಲು ಈ ಪಡೆ ಮುಂದಾದಾಗ ವರಿಷ್ಠಾಧಿಕಾರಿ ಲಾಠಿ ಪ್ರಹಾರಕ್ಕೆ ಆದೇಶ ನೀಡಿದ್ದಾರೆ. ಶಾಸಕ ರಂಜನ್ ಲಾಠಿ ಪ್ರಹಾರ ಮಾಡಿದಲ್ಲಿ ಪರಿಸ್ಥಿತಿ ಗಂಭೀರವಾಗುತ್ತದೆ ಎಂದು ಪೊಲೀಸರನ್ನು ಬೆದರಿಸಿದ್ದಾರೆ. ಶಾಸಕರ ನೇತೃತ್ವದಲ್ಲಿ ದಾಂಧಲೆ ನಡೆಯುತ್ತಿದ್ದರೂ ಪೊಲೀಸರು ನಿಷ್ಕ್ರಿಯರಾಗಿದ್ದಾರೆ.

ಹಸುಳೆಯನ್ನು ಕೊಲ್ಲಲು ಹೊರಟ ಮೋದಿ ಪಡೆ

ಗಾಂಧಿ ನಗರಕ್ಕೆ ನುಗ್ಗಿದ ಮೋದಿ ಪಡೆ 15 ದಿನದ ಮುಸ್ಲಿಂ ಹಸುಗೂಸನ್ನು ಕೊಲ್ಲಲು ಮುಂದಾಗಿದ್ದಾರೆ. ಇದನ್ನು ಗಮನಿಸಿದ ಪಕ್ಕದ ನಿವಾಸಿ ಡ್ರೈವರ್ ಚಂದ್ರು ಎಂಬುವವರು ಕೂಡಲೇ ಮಗುವನ್ನು ಎತ್ತಿಕೊಂಡು ಇದು ತನ್ನದೆಂದು ಕೊಲ್ಲಬಾರದೆಂದು ಮನವಿ ಮಾಡಿಕೊಂಡಿದ್ದಾರೆ. ಮಗುವನ್ನು ಎತ್ತಿಕೊಂಡು ಚಂದ್ರು ಹೊರನಡೆದಾಗ ಈ ಪಡೆ ಚಂದ್ರುವನ್ನು ಪ್ರಶ್ನಿಸಿ ಈ ಮಗು ಮುಸ್ಲಿಂ ಮಗುವಾಗಿದ್ದಲ್ಲಿ ಆದಕ್ಕೆ ಬದುಕುವ ಹಕ್ಕು ಇಲ್ಲ ಎಂದು ತಿಳಿಸಿದ್ದಾರೆ. ಧೃತಿಗೆಡದ ಚಂದ್ರು ಅಲ್ಲಿಂದ ಹಸುಗೂಸನ್ನು ಕೊಂಡೊಯ್ದು ರಕ್ಷಿಸಿ ಮಾನವೀಯತೆ ಮೆರೆದಿದ್ದಾರೆ.

ಬಾಯಿ ತೆರೆದ ಕೆಲವರು: ಕೊಡಗಿನ ಕಾಂಗ್ರೆಸ್ ಕವಲುದಾರಿಯಾಗಿ, ಉಸ್ತುವಾರಿ ಸಚಿವ ನಾಣಯ್ಯನವರು ಕೋಮುವಾದಿಗಳತ್ತ ಮೃದುವಾಗಿರುವುದು ಅಲ್ಲಿಂದ ಕೆಲವರ ಭಿನ್ನ ಸ್ವರವೂ ಕೇಳಿದೆ. ಈ ವಿಭಾಗದ ಯುವ ಕಾಂಗ್ರೆಸ್ ಅಧ್ಯಕ್ಷ ಲೋಕೇಶ್ ಕುಮಾರ ಶಾಸಕ ರಂಜನ್ ಮೇಲೆ ಬಹಿರಂಗ ಆರೋಪಗಳನ್ನು ಮಾಡಿ ಅವರನ್ನು ಗೂಂಡಾ ಕಾಯ್ದೆಯಡಿಯಲ್ಲಿ ಬಂಧಿಸಬೇಕೆಂದು ಹೇಳಿಕೆ ನೀಡುವ ಧೈರ್ಯ ಮಾಡಿದ್ದಾರೆ. ಮಾಜಿ ಸಚಿವ ಬಿ.ಎ. ಜೀವಿಜಯ ಘಟನೆ ನಡೆದ ಸ್ಥಳಕ್ಕೆ ತೆರಳಿದಾಗ ಅವರಿಗೆ ಚಡ್ಡಿ ಪರಿವಾರ ಧಿಕ್ಕಾರ ಕೂಗಿ ನಿಂಧಿಸಿದೆ. ಇವರು ಠಾಣೆಗೆ ತೆರಳಿ ದಾಂಧಲೆ ಕೂಗಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಇಷ್ಟಾದರೂ ಪೊಲೀಸ್ ಇಲಾಖೆ ದಾಂಧಲೆಕೋರರನ್ನು ಬಂಧಿಸುವ ಧೈರ್ಯ ತೋರಲಿಲ್ಲ. ಬದಲಾಗಿ ಸಣ್ಣ ಸೆಕ್ಷನ್ ಹಾಕಿ ತಕ್ಷಣ ನ್ಯಾಯಾಲಯದಿಂದ ಜಾಮೀನು ಸಿಗುವಂತೆ ಕೇಸು ದಾಖಲಿಸಿದ್ದಾರೆ. ಅಲ್ಪಸಂಖ್ಯಾತರು ಇಂದಿಗೂ ಭಯಭೀತರಾಗಿದ್ದು ಸಿ.ಪಿ.ಐ(ಎಂ) ಜಿಲ್ಲಾಸಮಿತಿ ವತಿಯಿಂದ ನಿಯೋಗ ಕಾ.ಪೀಟರ್ ಹಾಗೂ ಕಾಂ.ವಸಂತ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಹಲ್ಲೆಗೊಳಗಾದವರನ್ನು ಭೇಟಿ ಮಾಡಿದಾಗ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಮೃತ ಮುರುಗೇಶನ ಮನೆಗೂ ನಿಯೋಗ ಭೇಟಿ ನೀಡಿ ಸಾಂತ್ವನ ಹೇಳಿದ್ದು ಜನರ ರಕ್ಷಣೆಗೆ ಜಿಲ್ಲಾಡಳಿತವನ್ನು ಒತ್ತಾಯಿಸಿದೆ.

ಫೋಟೋ ಕೃಪೆ: ಕೊಡಗು ಸಮಾಚಾರ

ವರದಿಗಾರ

ಪ್ರಾಚ್ಯ ಇಲಾಖೆಯ ವರದಿಯೋ ಕಾವಿಪಡೆಯ ಅಜೆಂಡಾವೋ

ಅಯೋದ್ಯೆಯಲ್ಲಿ ಪ್ರಾಚ್ಯವಸ್ತು ಸಂಶೋಧನಾ ಸಂಸ್ಥೆಯವರು ತಮ್ಮ ಸಂಶೋಧನೆಯಲ್ಲಿ ಕಂಡು ಹಿಡಿದ ಅಂಶಗಳ ಬಗ್ಗೆ ಒಂದು ದೊಡ್ಡ ವರದಿಯನ್ನು ನೀಡಿದ್ದಾರೆ. ಇದು ಹೇಗಿದೆಯೆಂದರೆ ಕವಿ ಫಿರಾಕ್ ಗೋರಕ್ ಪುರಿಯವರು ಹೇಳುವಂತೆ ನೆರೆಯವನೊಬ್ಬ ತನ್ನ ಹಿತ್ತಲಿನಲ್ಲಿ ಅಗೆಯುತ್ತಿದ್ದಾಗ ಭೂಮಿಯ ಆಳದಲ್ಲಿ ವಿದ್ಯುತ್ ಮತ್ತು ದೂರವಾಣಿ ವೈರುಗಳು ಸಿಕ್ಕಿದವಂತೆ ಇದನ್ನು ಕಂಡ ಅವನು ಪ್ರಾಚೀನ ಕಾಲದ ನಮ್ಮ ಸಮಾಜ ಬಹಳ ಮುಂದುವರೆದಿತ್ತು ಅವರು ಟೆಲಿಫೋನುಗಳು ಮತ್ತು ಟೆಲಿಗ್ರಾಫ್‌ಗಳನ್ನು ಬಳಸುತ್ತಿದ್ದರು ಎಂಬ ಅಭಿಪ್ರಾಯಕ್ಕೆ ಬಂದನಂತೆ! ಇದನ್ನು ಕೇಳಿದ ನೆರೆಯ ಮತ್ತೊಬ್ಬನು ತನ್ನ ಹಿತ್ತಲಿನಲ್ಲಿ ಅಗೆಯಲು ಆರಂಬಿಸಿದನಂತೆ. ಅವನು ಎಷ್ಟೇ ಆಳಕ್ಕೆ ಅಗೆದರೂ ಏನೂ ಸಿಗಲಿಲ್ಲವಂತೆ, ಅದಕ್ಕೆ ಅವನು ನಮ್ಮ ಪ್ರಾಚೀನ ಸಮಾಜ ಇನ್ನೂ ಮುಂದುವರೆದಿತ್ತು, ಏಕೆಂದರೆ ಅವರು ವೈರುಗಳನ್ನು ಬಳಸದೇ ಸಂಪರ್ಕ ಕಲ್ಪಿಸುವಷ್ಟು ಮುಂದುವರೆದಿದ್ದರು" ಎಂಬ ಅಭಿಪ್ರಾಯಕ್ಕೆ ಬಂದನಂತೆ.

ಈ ವಿಷಯವಾಗಿ ಕೆಲವು ಅಂಶಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಮೊದಲನೆಯದಾಗಿ ಹೈಕೋರ್ಟ್‌ನವರು ಅಲ್ಲಿ ಭೂಸಂಶೋಧನೆಗಳನ್ನು ಮಾಡಲು ಎ.ಎಸ್.ಐ.ಯನ್ನು ಕೇಳಿಕೊಂಡಾಗಲೇ ನಾವು ಅಂಥಹ ಸಂಶೋಧನೆ ಅನಗತ್ಯ, ನ್ಯಾಯಾಲಯದ ಮುಂದೆ ಪ್ರಕರಣ ಬಾಕಿ ಇದೆ ಎಂದು ಹೇಳಿದ್ದೆವು. ಭಾರತೀಯ ಕಾನೂನಿನ ಪ್ರಕಾರ ಭೂಮಿಯ ಒಡೆತನವನ್ನು ಗುರುತಿಸುವುದು ಈಗಿರುವ ಕಾನೂನಿನ ಪರಿದಿಯಲ್ಲಿಯೇ ಹೊರತು ಪುರಾತನ ಕಾಲದಲ್ಲಿ ಅಲ್ಲಿ ಯಾರಿದ್ದರು ಎಂಬುದರ ಮೇಲಲ್ಲ. ಹಾಗಾಗಿ ನ್ಯಾಯಾಲಯದ ನಿರ್ದೇಶನವು ವಿವಾದದ ಪರಿಹಾರಕ್ಕೆ ಅನುಕೂಲ ಮಾಡುವುದಿಲ್ಲ. ಈ ವಿಚಾರದಲ್ಲಿ ನರಸಿಂಹರಾವ್ ಸರ್ಕಾರ ಅಲ್ಲಿ ಮಂದಿರವಿತ್ತೇ ಅಥವಾ ಮಸೀದಿಯಿತ್ತೇ ಕಂಡುಹಿಡಿಯಬೇಕು ಎಂದು ನ್ಯಾಯಾಲಯವನ್ನು ಕೇಳಿದಾಗ, ಉಚ್ಚನ್ಯಾಯಾಲಯವು ಈ ಪ್ರಸ್ತಾಪವನ್ನು ವಾಪಸ್ಸು ಕಳುಹಿಸಿ ಇದು ನ್ಯಾಯಾಲಯದ ಕೆಲಸವಲ್ಲ ಎಂದು ಹೇಳಿತ್ತು. ಸಂವಿಧಾನವನ್ನು ರಕ್ಷಿಸುವುದು ಮತ್ತು ಅದಕ್ಕೆ ಬದ್ಧರಾಗಿರುವುದು ನ್ಯಾಯಾಲಯದ ಕೆಲಸವೇ ಹೊರತು ಇತಿಹಾಸ ಅಥವಾ ಪುರಾಣದಲ್ಲಿ ತಲೆ ಹಾಕುವುದಲ್ಲ ಎಂದು ನ್ಯಾಯಾಲಯ ಹೇಳಿತ್ತು. ಸುಪ್ರೀಂಕೋರ್ಟ್‌ನ ಈ ತೀರ್ಪಿನ ಹೊರತಾಗಿಯೂ ಉತ್ತರ ಪ್ರದೇಶ ಹೈಕೋರ್ಟ್ ವರದಿಯೊಂದನ್ನು ನೀಡುವಂತೆ ಎ.ಎಸ್.ಐ.ನ್ನು ಕೇಳಿತ್ತು.

ಎರಡನೆಯದಾಗಿ ಪ್ರಾಚ್ಯವಸ್ತು ಸಂಶೋಧನೆ ಮಾಡುವುದು ಎಂದರೆ ಕಟ್ಟಡ ಕಟ್ಟಲು ಭೂಮಿ ಅಗೆದಷ್ಟು ಸುಲಭದ ಕೆಲಸವಲ್ಲ. ಅದು ತುಂಬಾ ನಿಧಾನ ಮತ್ತು ಶಿಸ್ತಿನಿಂದ ಕೂಡಿದ ಕ್ರಿಯೆ. ಆದರೂ ಎ.ಎಸ್.ಐ.ಗೆ ಸಮಯ ನಿಗದಿಪಡಿಸಲಾಗಿತ್ತು. ಮತ್ತದನ್ನು ಹಲವಾರು ಬಾರಿ ವಿಸ್ತರಿಸಲಾಯಿತು. ಆದರೂ ವೈಜ್ಞಾನಿಕ ಸಂಶೋಧನೆಗೆ ಹಲವಾರು ಮಿತಿಗಳಾದವು.

ಮೂರನೆಯದಾಗಿ ಇಂತಹ ಆತುರದ ಸಂಶೋಧನೆಯಿಂದಾಗಿ ಹಲವಾರು ಮೌಲ್ಯಯುತ ವಸ್ತುಗಳ ನಾಶ ಅಥವಾ ವಿಕೋಪಗೊಳ್ಳುವ ಸಾಧ್ಯತೆಯಿದ್ದು, ಮುಂದಿನ ಸಂಶೋಧನೆಗಳಿಗೆ ಇದರಿಂದ ಗಂಬೀರ ತೊಂದರೆಗಳಾಗುತ್ತವೆ.

ನಾಲ್ಕನೆಯದಾಗಿ ಸಂಶೋಧನೆಗಳನ್ನು ಹಲವಾರು ರೀತಿಯಲ್ಲಿ ವಿಶ್ಲೇಷಿಸಲು ಸಾಧ್ಯವಿದೆ. ಎ.ಎಸ್.ಐ. ಇಂತಹ ಒಂದು ಉತ್ಖಾಹದಲ್ಲಿ ಹತ್ತನೆಯ ಶತಮಾನದ ಹಿಂದಿನ ದೇವಸ್ಥಾನವೊಂದಿತ್ತು ಎಂಬ ಅಭಿಪ್ರಾಯ ನೀಡಿದೆ. ಆದರೆ ಎಲ್ಲಿ ನೋಡಿದರೂ ಈ ವಿಷಯದ ಪ್ರಖ್ಯಾತ ಇತಿಹಾಸ ತಜ್ಞರು, ಪ್ರಾಚ್ಯವಸ್ತು ಸಂಶೋಧಕರು ವಿಭಿನ್ನ ಅಭಿಪ್ರಾಯ ನೀಡಿದ್ದಾರೆ.

ಐದನೆಯದಾಗಿ ಎ.ಎಸ್.ಐ.ನ ಇಂತಹ ಉತ್ಸಾಹಕ್ಕೆ ಕಾರಣವೇನೆಂದರೆ ಅದು ಕಲುಷಿತಗೊಂಡಿರುವ ರೀತಿ. ಇತರೆ ಸಂಶೋಧನಾ ಸಂಸ್ಥೆಗಳಂತೆ ಎ.ಎಸ್.ಐ.ಗೂ ಹಲವಾರು ಆರ್‌ಎಸ್‌ಎಸ್ ಪರವಾದ ಜನರನ್ನು ವಾಜಪೇಯಿ ಸರ್ಕಾರ ನೇಮಿಸಿದೆ. ಇದು ಆರ್‌ಎಸ್‌ಎಸ್‌ನ ತಾಳಕ್ಕನುಗುಣವಾಗಿ ಹೆಜ್ಜೆ ಹಾಕುತ್ತದೆ.

ಕೊನೆಯದಾಗಿ ಈ ಅಂಶವನ್ನು ಬಳಸಿಕೊಂಡು ಸಂಘ ಪರಿವಾರದ ಜನ ಈಗಾಗಲೇ ಪ್ರಚಾರ ಶುರು ಮಾಡಿದ್ದಾರೆ. ಕೋಮು ವಿಷ ಹರಡಿ ಜನರನ್ನು ವಿಭಾಗಿಸಿ ಚುನಾವಣಾ ಲಾಭ ಮಾಡಿಕೊಳ್ಳುವುದನ್ನು ಹೊರತುಪಡಿಸಿ ಬೇರೆ ಯಾವ ಮಾರ್ಗದಿಂದಲೂ ಜನತೆಯನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಈ ಕೋಮುವಾದಿಗಳಿಗೆ ಗೊತ್ತಾಗಿದೆ. ಆದ್ದರಿಂದ ಈ ಶಕ್ತಿಗಳನ್ನು ಸೋಲಿಸಿ ಭಾರತದ ಜಾತ್ಯಾತೀತ ಗಣತಂತ್ರವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಸಾಕ್ಷರತಾ ಪ್ರೇರಕರು ಸಂಘಟನೆಯತ್ತ

ಸಾಕ್ಷರತಾ ಆಂದೋಲನದಲ್ಲಿ ತಮ್ಮನ್ನು ಸಮರ್ಪಿಸಿಕೊಂಡು ದುಡಿಯುತ್ತಿರುವ ಪ್ರೇರಕರು ಜಾಗೃತಗೊಂಡು ಸಂಘಟಿತರಾಗುತ್ತಿದ್ದಾರೆ. ಆದರೆ ಅವರ ಒಗ್ಗಟ್ಟನ್ನು ಮುರಿಯಲು ಕೆಲವರು ಹತಾಶೆಯತ್ತ ನಡೆಸಿದ್ದಾರೆ. ಯಾಕೆ ಹೀಗೆ? ಓದಿ

ಪ್ರೇರಕರ ಒಗ್ಗಟ್ಟನ್ನು ಮುರಿಯಲು ಯಾರಿಂದಲೂ ಸಾಧ್ಯವಿಲ್ಲ

ಈ ಮಾತನ್ನು ಹೇಳಿದವರು ಡಿ.ವೈ.ಎಫ್.ಐ ನಾಯಕರಾಗಲಿ ಅಥವಾ ಸಮಾನ ಮನಸ್ಕ ಸಂಘಟನೆಯ ನಾಯಕರಾಗಲೀ ಅಲ್ಲ. ಬದಲಾಗಿ ಪ್ರೇರಕರಾಗಿದ್ದುಕೊಂಡು ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ, ಬಳಿಕ ಸಂಘಟಿತರಾಗಿ ನಾಯಕತ್ವ ವಹಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರೇರಕರ ಸಂಘದ ಜಿಲ್ಲಾಧ್ಯಕ್ಷರಾದ ನಂದಾಪಾಯಸ್ ಹಾಗೂ ಕಾರ್ಯದರ್ಶಿ ದೇವಕಿಯವರು. ಈ ಮಾತು ನಿಜಕ್ಕೂ ಉತ್ಪ್ರೇಕ್ಷೆಯಲ್ಲ. ಹೋರಾಟದಲ್ಲಿ ಮೂಡಿಬಂದ ಕಿಡಿಯಾಗಿದೆ, ಮನದಾಳದ ನೋವಿನಲ್ಲೂಅನುಭವಿಸಿದ ಶೋಷಣೆಯ ಸ್ಫೋಟವಾಗಿದೆ. ಪ್ರೇರಕರ ನೋವಿನ ಧ್ವನಿಯಾಗಿ ಶೋಷಣೆಯನ್ನು ಅಂತ್ಯಗೊಳಿಸಬೇಕೆಂದು ಸಂಘಟಿತರಾಗಲು ಹೊರಟರೆ, ಅಂತಹ ಸಂಘಟನೆಯನ್ನೇ ಮುರಿಯಲು ಹತಾಶ ಪ್ರಯತ್ನ ಸ್ಥಾಪಿತ ಹಿತಾಸಕ್ತಿಗಳಿಂದ ಇದನ್ನೆಲ್ಲಾ ಕಂಡು ರೋಸಿಹೋದ ಪ್ರೇರಕರು ಭುಗಿಲೆದ್ದು ಸಂಘಟಿತರಾಗಲು ಮುಂದಾದರು. ಹೋರಾಟ ನಡೆಸಲು ಬೀದಿಗಿಳಿದೇಬಿಟ್ಟರು. ಈ ಹೋರಾಟದ ಸಂದರ್ಭದಲ್ಲಿ ಅಂತರಾಳದಿಂದ ಹೊರಬಿದ್ದ ನೋವಿನ ಮಾತುಗಳಿವು.

ಇವೆಲ್ಲದಕ್ಕೂ ಕಾರಣ ಇದ್ದೇ ಇದೆ. ಸಾಕ್ಷರತಾ ಆಂದೋಲನದ ಮುಂದುವರಿದ ಭಾಗವೇ ಮುಂದುವರಿಕಾ ಕಲಿಕಾ ಕೇಂದ್ರ. ಇದನ್ನು 2001 ರಂದೇ ಜಾರಿಗೊಳಿಸಿ 5 ವರ್ಷಗಳ ಕಾಲದ ಉತ್ತಮವಾದ ಯೋಜನೆ. ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವ ಮಹಾನ್ ಉದ್ದೇಶವನ್ನು ಹೊಂದಿದ ಈ ಯೋಜನೆಗೆ ಮೊದಲಿನ 3 ವರ್ಷ ಕೇಂದ್ರ ಸರ್ಕಾರ ಹಣವನ್ನು ವಿನಿಯೋಗಿಸಿದರೆ, ನಂತರದ 2 ವರ್ಷ ರಾಜ್ಯ ಸರ್ಕಾರವು ಹಣವನ್ನು ನೀಡಬೇಕಾಗಿದೆ. ಬಳಿದ ಇದನ್ನು ಆಯಾಯ ಸ್ಥಳೀಯ ಪಂಚಾಯತ್- ಪುರಸಭಾ- ನಗರಪಾಲಿಕಾ ಸಂಸ್ಥೆಗಳು ನೋಡಿಕೊಳ್ಳುವ ಮೂಲಕ ಜನಸಮುದಾಯದ ಕೇಂದ್ರಗಳನ್ನಾಗಿ ಮಾರ್ಪಡಿಸಬೇಕಾಗಿದೆ. ಇಂತಹ ಕೇಂದ್ರಗಳಲ್ಲಿ ಇಡೀ ರಾಜ್ಯಾದ್ಯಂತ 25,000 ಕ್ಕೂ ಮಿಕ್ಕಿದೆ ಸಾಕ್ಷರತಾ ಪ್ರೇರಕರಿದ್ದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1562 ರಷ್ಟು ಪ್ರೇರಕರಿದ್ದಾರೆ. ಇವರ ಬದುಕಂತೂ ಶೋಚನೀಯ.

ಸರ್ಕಾರದ ಯೋಜನೆಯ ತುತ್ತೂರಿ ಊದಲು ಪ್ರೇರಕರನ್ನು ಹಿಂಡಿ ಹಿಪ್ಪೆ ಮಾಡುವ ಸರ್ಕಾರ ಕಳೆದ 10 ತಿಂಗಳಿನಿಂದ ಬಾಕಿ ಇರುವ ಗೌರವಧನವನ್ನು ನೀಡಲು ಮುಂದಾಗುತ್ತಿಲ್ಲ. ಗೌರವಧನ ಸಿಗುವುದೇ 700 ರೂ.ಮಾತ್ರ. ಪೇಪರ್ ಬಿಲ್, ಪ್ರಯಾಣ ವೆಚ್ಚ ಸಿಗದೇ 10 ತಿಂಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ.95 ರಷ್ಟು ಮಹಿಳಾ ಪ್ರೇರಕರಿದ್ದರೂ, ಹೆರಿಗೆ ರಜೆ ಇಲ್ಲ. ಮುಂತಾದ ನ್ಯಾಯಯುತ ಬೇಡಿಕೆಗಳನ್ನಿಟ್ಟು ಇಡೀ ರಾಜ್ಯದಲ್ಲಿ ಪ್ರೇರಕರನ್ನು ಸಂಘಟಿಸಬೇಕೆಂದು ಡಿ.ವೈ.ಎಫ್.ಐ ಕರ್ನಾಟಕ ರಾಜ್ಯಸಮಿತಿ ತೀರ್ಮಾನಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಮಾಡಬೇಕೆಂದು ತೋಚಲಿಲ್ಲ. ಯಾಕೆಂದರೆ ಪ್ರೇರಕರೆಲ್ಲಾ ಸ್ಥಳೀಯ ಮಟ್ಟದಲ್ಲಿ ಕಾಂಗ್ರೆಸ್ ಬಿಜೆಪಿ ಪುಢಾರಿಗಳ ಕಪಿಮುಷ್ಟಿಯಲ್ಲಿದ್ದರು. ಅವರ ವಿರುದ್ದ ಸ್ವರ ಎತ್ತುವ ಧೈರ್ಯ ಇವರಿಗಿಲ್ಲ. ಕೆಲವರ ಪರಿಚಯವಿದ್ದರೂ ಸಂಘಟನೆಗೊಳ್ಳಲು ತಯಾರಿರಲಿಲ್ಲ. ವಾಸ್ತವತೆ ಹೀಗಿದ್ದರೂ ಡಿ.ವೈ.ಎಫ್.ಐ ನೇತೃತ್ವದಲ್ಲಿ ಪ್ರೇರಕರ ಸಭೆ ಎಂದು ಪತ್ರಿಕಾ ಹೇಳಿಕೆ ನೀಡಿದ್ದೇ ತಡ ವಿವಿಧ ಕಡೆಗಳಿಂದ ಒಳ್ಳೆ ಪ್ರತಿಕ್ರಿಯೆ ಬಂತು. ಸಭೆಯ ದಿನದಂದು ಸುಮಾರು 50 ರಷ್ಟು ಪ್ರೇರಕರು ಆಗಮಿಸಿರುವುದು ವಿಶೇಷವಾಗಿತ್ತು. ತಾವು ಅನುಭವಿಸುತ್ತಿರುವ ಕಷ್ಟ-ನಷ್ಟಗಳ ಬಗ್ಗೆ ಮಂತ್ರಾಲೋಚನೆ ನಡೆಯಿತು. ಅಂತಿಮವಾಗಿ ಸಂಘಟನೆ ಮತ್ತು ಹೋರಾಟವೊಂದೇ ಪರ್ಯಾಯದಾರಿ ಎಂದು ಮನಗಂಡು ಪ್ರೇರಕರ ಜಿಲ್ಲಾ ಸಂಚಾಲಕ ಸಮಿತಿಯನ್ನು



ಸಮಾವೇಶವನ್ನು ನಡೆಸಿ ವಿಸ್ತಾರವಾಗಿ ಸಂಘಟನೆಯನ್ನು ಬೆಳೆಸಬೇಕೆಂದು ತೀರ್ಮಾನಿಸಲಾಯಿತು.

ಆಗಸ್ಟ್-29 ರಂದು ಜರುಗಿದ ಜಿಲ್ಲಾಮಟ್ಟದ ಸಮಾವೇಶದಲ್ಲಿ ಡಿ.ವೈ.ಎಫ್.ಐ ರಾಜ್ಯಾಧ್ಯಕ್ಷರಾದ ಕೆ.ಎನ್.ಉಮೇಶ್‌ರವರು ಭಾಗವಹಿಸಿ ಮಾತನಾಡಿದರು. ಸಭೆಯಲ್ಲಿ ಭಾಗವಹಿಸಿದ ನೂರಕ್ಕೂ ಮಿಕ್ಕಿದ ಪ್ರೇರಕರ ಸ್ಫೂರ್ತಿ ತುಂಬಿತು. ಈ ಸಭೆಯಲ್ಲಿ ಭಾಗವಹಿಸಿದ ಪ್ರೇರಕರಂತೂ ಧೃಢವಾಗಿ ಡಿ.ವೈ.ಎಫ್.ಐ ನೊಂದಿಗೆ ನಿಂತರು. ಸಮಾವೇಶವು ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯನ್ನು ರಚಿಸಿತು.

ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಪ್ರೇರಕರು ಬೀದಿಗಿಳಿದು ಹೋರಾಟ ನಡೆಸಿದರು. ಸ್ಟೇಟ್ ಬ್ಯಾಂಕ್‌ನಿಂದ ಮೆರವಣಿಗೆಯಲ್ಲಿ ಹೊರಟ ನೂರಾರು ಸಂಖ್ಯೆಯಲ್ಲಿದ್ದ ಸಾಕ್ಷರತಾ ಪ್ರೇರಕರು, 'ಪ್ರೇರಕರ ಬದುಕನ್ನು ರಕ್ಷಿಸಿ, ನಮ್ಮನ್ನು ಮಾನವೀಯತೆಯಿಂದ ನೋಡಿಕೊಳ್ಳಿ, ಮನುಷ್ಯರಂತೆ ಬದುಕಲು ಬಿಡಿ' ಮುಂತಾದ ಮನ ಮಿಡಿಯುವ ಘೋಷಣೆಗಳನ್ನು ಕೂಗುತ್ತಾ, ಮಂಗಳೂರು ನಗರದಾದ್ಯಂತ ಸಂಚರಿಸಿದರು. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯೆದುರು ಜರುಗಿದ ಪ್ರತಿಭಟನೆಯನ್ನುದ್ದೇಶಿಸಿ ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್, ಪ್ರೇರಕರ ಸಂಘದ ಜಿಲ್ಲಾಧ್ಯಕ್ಷರಾದ ನಂದಾ ಪಾಯಸ್, ಜಿಲ್ಲಾ ಕಾರ್ಯದರ್ಶಿ ದೇವಕಿ, ಸಿಐಟಿಯು ಜಿಲ್ಲಾ ನಾಯಕರಾದ ಯಾದ[illegible] ಶೆಟ್ಟಿ, ಎಸ್.ಎಫ್.ಐ ಜಿಲ್ಲಾಧ್ಯಕ್ಷರಾ[illegible] ಮಹೇಶ್ ಪಡೀಲ್‌ರವರು ಮಾತನಾ[illegible] ಪ್ರೇರಕರ ಬದುಕನ್ನು ರಕ್ಷಿಸಲು ಮುಂದಾ[illegible] ಬೇಕೆಂದು ಒತ್ತಾಯಿಸಿದರು. ಹೋರಾಟ[illegible] ಬಳಿಕ ಸೇರಿದ್ದ ಸಭೆಯಲ್ಲಿ ಪ್ರತಿಯೊ[illegible] ಪ್ರೇರಕರಲ್ಲಿ ಹೋರಾಟವು ಆತ್ಮವಿಶ್ವಾಸವ[illegible] ತುಂಬಿಸಿತು. ಮಾತ್ರವಲ್ಲದೆ ಅಕ್ಟೋಬರ್ [illegible]ರ ವಿಧಾನಸೌದ ಚಲೋ ಹೋರಾಟದ[illegible] ಸುಮಾರು 70 ರಷ್ಟು ಪ್ರೇರಕರು ಸ್ವಯಂ ಪ್ರೇರಿತವಾಗಿ ಹೆಸರನ್ನು ನೋಂದಾಯಿ[illegible]ರುವುದು ಸಂಘಟನೆ ಮತ್ತು ಹೋರಾಟ[illegible] ಪ್ರಭಾವ ಎಂಬುವುದರಲ್ಲಿ ಸಂಶಯವಿಲ್ಲ.

ಸಭೆ-ಸಮಾವೇಶ- ಹೋರಾಟಗಳ[illegible] ಪ್ರೇರಕರಲ್ಲಿ ಧೈರ್ಯ ಉತ್ಸಾಹ ತುಂಬ[illegible] ಮಂಗಳೂರು ಮಹಾನಗರ ಪಾಲಿಕೆ[illegible] ಮೇಯರ್ ದಿವಾಕರ್‌ರವರು 'ಈ ಜಿಲ್ಲೆಯ[illegible]ನೊಂದ ಜನತೆಯ ಪರವಾಗಿ ಧ್ವನಿ ಎತ್ತ[illegible] ಸಂಘಟನೆ ಇದ್ದರೆ ಅದು ಡಿ.ವೈ.ಎಫ್[illegible] ಮಾತ್ರ. ಅಂತಹ ಸಂಘಟನೆಯಡಿಯಲ್ಲಿ ನೀ[illegible] ಸಂಘಟಿತರಾಗುವುದು ತುಂಬಾ ಸಂತೋ[illegible] ಯಾವತ್ತೂ ಡಿ.ವೈ.ಎಫ್.ಐ ಸಂಪ[illegible] ಬಿಡಬೇಡಿ' ಎಂದು ಪ್ರೇರಕರಲ್ಲಿ ಹೇಳಿರುವ[illegible] ಡಿ.ವೈ.ಎಫ್.ಐ ಮೇಲಿನ ಗೌರವ[illegible] ಪ್ರತೀಕವಾಗಿತ್ತು.

ಇಷ್ಟೆಲ್ಲಾ ಬೆಳವಣಿಗೆ ಜಿಲ್ಲೆಯಲ್ಲಿ ನಡೆದು[illegible] ಅದನ್ನು ಮಟ್ಟ ಹಾಕಬೇಕು, ಸಂಘಟನೆಯ[illegible] ಮುರಿಯಬೇಕೆಂದು ಸ್ಥಾಪಿತ ಹಿತಾಸಕ್ತಿ[illegible] (ಕಾಂಗ್ರೆಸ್, ಬಿಜೆಪಿ), ಕಾಣದ ಕೈ[illegible] (ಸಂಯೋಜಕರು) ಸಾಕಷ್ಟು ಕೆ[illegible] ನಿರ್ವಹಿಸಿದವು. ಡಿ.ವೈ.ಎಫ್.ಐ ಯೊಂ[illegible] ಗುರುತಿಸಬೇಡಿ, ಅದು ರಾಜಕೀ[illegible] ಸಂಘಟನೆ- ಉಗ್ರಗಾಮಿ ಸಂಘ[illegible] ಎಂಬಂತಹ ಅಪಪ್ರಚಾರ ನಡೆಯಿತು. ಇದ[illegible] ಬಗ್ಗದ ಪ್ರೇರಕರನ್ನು ವೈಯಕ್ತಿಕವಾಗಿ ಭೇಟಿ [illegible] ಸಂಘ ಕಟ್ಟದಂತೆ ಹೆದರಿಸಲಾಯಿತು. [illegible] ಬೆಳ್ತಂಗಡಿ, ಪುತ್ತೂರುಗ[illegible] ಸಂಯೋಜಕರುಗಳೇ ಪ್ರೇರಕರ[illegible] ಸಂಘಟಿಸಿದರು. ಇವರು ಎಲ್ಲಿಯ[illegible] ಅಪಹಾಸ್ಯಕ್ಕೆ ಗುರಿಯಾದರೆಂದರೆ ಪ್ರೇರ[illegible] ಸಂಘಟಿಸಿ ಪ್ರೇರಕರ ಸಮಸ್ಯೆಗಳ [illegible] ಚಕಾರವೆತ್ತಲಿಲ್ಲ. ಸಂಘದ ನಾಯ[illegible] ವಹಿಸಿದವರಿಗೆ ಸಂಘ ಬಿಡುವಂತೆ, ಹೋ[illegible] ಮಾಡದಂತೆ ನಾನಾ ತರದ ಬ[illegible] ಹಾಕಲಾಯಿತು. ಇವುಗಳನ್ನೆಲ್ಲಾ ಮೆಟ್ಟಿ [illegible] ನೂರಾರು ಪ್ರೇರಕರು ಹೋರಾಟ[illegible] ಭಾಗವಹಿಸಿದಂತೂ ಪ್ರೇರಕರ ಐಕ್ಯತೆ[illegible] ಎತ್ತಿ ತೋರಿಸಿದಂತಾಗಿದೆ.

ಸುನಿಲ್ ಕುಮ[illegible]

ಅಂಕಿ ಸಂಖ್ಯೆ

	ಸಾಲಗಾರರ ಸಂಖ್ಯೆ	ಬ್ಯಾಂಕುಗಳ ಸಾಲ		ಸಾಲದ ವರ್ಗ	
	ಗ್ರಾಮೀಣ	ಅರೆಪಟ್ಟಣ	ನಗರ	ಮಹಾನಗರ	ಅ.ಭಾರತ
2ಲಕ್ಷರೂಗಳಿಗೂ ಕಡಿಮೆ	24784750	14526980	7063059	7755061	5429850
ಅಖಿಲ ಭಾರತ	45.79	26.84	13.05	14.33	100
ಸಾಲದ ಮೊತ್ತ	43479.63	36397.30	24944.39	20827.69	125649.01
ಅಖಿಲ ಭಾರತ	34.60	28.97	19.85	16.58	100
2 ಲಕ್ಷ ರೂಗಳಿಗೂ ಹೆಚ್ಚು.					
ಸಾಲಗಾರರ ಸಂಖ್ಯೆ	378106	510038	597789	772596	2258529
ಅಖಿಲ ಭಾರತ	16.74	22.58	26.47	34.21	100
ಸಾಲದ ಮೊತ್ತ	44233.26	53759.05	98812.61	333539.17	530344.09
ಅಖಿಲ ಭಾರತ	8.34	10.14	18.63	62.89	100
ಒಟ್ಟು					
ಸಾಲಗಾರರ ಸಂಖ್ಯೆ	25162856	15037018	7660848	8527657	56388379
ಅಖಿಲ ಭಾರತ	44.62	26.67	13.59	15.12	100
ಸಾಲದ ಮೊತ್ತ	87712.89	90156.35	123757.00	354366.86	655993.10
ಅಖಿಲ ಭಾರತ	13.37	13.74	18.87	54.01	100

ಉದ್ಭವವಾದವುಗಳಲ್ಲ. ಸರಕಾರದ ತಪ್ಪು ನೀತಿಗಳಿಂದ ಉಂಟಾದವುಗಳು. ಸಮಸ್ಯೆಗಳ ರೂವಾರಿಗಳು ತಾವೇ ಆಗಿರುವ ಈ ಬಲ ರಾಜಕೀಯ ಪಕ್ಷಗಳು ಅವುಗಳ ಪರಿಹಾರಕ್ಕೆ ಸಂಕಲ್ಪ ಮಾಡಬಹುದೆ? ಗ್ಯಾಟ ಒಪ್ಪಂದಕ್ಕೆ ಸಹಿ

ನರಗುಂದ ರೈತ ಬಂಡಾಯವನ್ನು ಬಂಡವಾಳವಾಗಿಸಿಕೊಳ್ಳುವವರು

ನರಗುಂದ ರೈತ ಬಂಡಾಯವನ್ನು ಬಂಡವಾಳವಾಗಿಸಿಕೊಳ್ಳುವ ಹಾತೊರೆಯುತ್ತಿರುವವರಿಗೆ ನಾಡಿನ ರೈತರ ಸಮಸ್ಯೆಗಳ ಮೂಲೋತ್ಪಾಟನೆಗೆ ಬದ್ಧತೆ ಕಾಳಜಿ ಇದೆ

ಬಸು


ಒಂದು ಅನುಭವದ ಮಾತಿದೆ. "ಪ್ರಜಾಪ್ರಭುತ್ವದಲ್ಲಿ ಎಲ್ಲರನ್ನು ಕೆಲವು ಕಾಲ ಮೋಸ ಮಾಡಬಹುದು ಕೆಲವರನ್ನು ಎಲ್ಲ ಕಾಲದಲ್ಲೂ ಮೋಸ ಮಾಡಬಹುದು. ಆದರೆ ಎಲ್ಲರನ್ನು ಎಲ್ಲ ಕಾಲದಲ್ಲೂ ಮೋಸ ಮಾಡಲು ಸಾಧ್ಯವಿಲ್ಲ". ಆದರೆ ನಮ್ಮ ರಾಜಕೀಯ ಪಕ್ಷಗಳು ಮಾತ್ರ ಎಲ್ಲರನ್ನೂ ಎಲ್ಲ ಕಾಲದಲ್ಲೂ ಮೋಸ ಮಾಡಬಹುದು ಎಂದೇ ಭಾವಿಸಿದಂತಿದೆ. ಜುಲೈ 21 ರಂದು ಪ್ರತಿವರ್ಷ ನರಗುಂದ-ನವಲಗುಂದಗಳಲ್ಲಿ ರೈತ ಹುತಾತ್ಮ ದಿನಾಚರಣೆ ಆಚರಿಸಲಾಗುತ್ತಿದೆ. 1981 ರಿಂದ ರಾಜ್ಯ ರೈತ ಸಂಘದವರು ಅವ್ಯಾಹತವಾಗಿ ಈ ಕಾರ್ಯಕ್ರಮ ಮಾಡುತ್ತ ರಾಜ್ಯದ ಮೂಲೆ ಮೂಲೆಗಳಿಂದ ರೈತರು ಇಲ್ಲಿಗೆ ಬರುವಂತೆ ನೋಡಿಕೊಳ್ಳುತ್ತಿದ್ದರು. ಈ ಕಾರ್ಯಕ್ರಮಕ್ಕು ತಮಗೂ ಏನೂ ಸಂಬಂಧವಿಲ್ಲ ಎಂಬಂತಿದ್ದ ರಾಜಕೀಯ ಪಕ್ಷಗಳು ಕ್ರಮೇಣ ಇದರಲ್ಲಿ ಪಾಲು ಕೇಳಹತ್ತಿದವು. ಮೊದಲು ಬಿಜೆಪಿ ಪ್ರತ್ಯೇಕವಾಗಿ ನವಲಗುಂದದಲ್ಲಿ ರೈತ ಹುತಾತ್ಮ ದಿನಾಚರಣೆ ಆಚರಿಸುತ್ತಾ ತಾವೂ ರೈತರ ಪರಿ ಎಂಬುದನ್ನು ತೋರಿಸಬಹುದು. ಈ ವರ್ಷ ವಿಶೇಷವಾಗಿ ಪ್ರಗತಿಪರ ಜನತಾದಳದ ಮುಖಂಡ ಬಸವರಾಜ ಬೊಮ್ಮಾಯಿ ಧಾರವಾಡದಿಂದ ಪಾದಯಾತ್ರೆ ಕೈಗೊಂಡು ಜುಲೈ 21 ರಂದು ನರಗುಂದದಲ್ಲಿ ಬೃಹತ್ ಸಮಾವೇಶ ಮಾಡಿದರು. ಸ್ಥಳೀಯವಾಗಿ ಕಾಂಗ್ರೆಸ್ ಶಾಸಕರು ಮಾಜಿ ಮಲಪ್ರಭಾ ರೈತ ಹೋರಾಟದ ಮುಖಂಡರೂ ಆದ ಶ್ರೀ.ಬಿ.ಆರ್ ಯಾವಗಲ್ ಪ್ರತ್ಯೇಕ ಸಮಾವೇಶ ನಡೆಸಿದರು. ರೈತ ಸಂಘದ ಎರಡು ಬಣಗಳು ಕನ್ನಡ ನಾಡು ಪಕ್ಷ, ಜಾತ್ಯಾತೀತ ಜನತಾದಳ ಹೀಗೆ ಎಲ್ಲಾ ಪಕ್ಷಗಳೂ ರೈತ ಹುತಾತ್ಮ ದಿನಾಚರಣೆ ಆಚರಿಸಿ, ರೈತರ ಗಮನ ತಮ್ಮೆಡೆಗೆ ಸೆಳೆಯಲು ಪ್ರಯತ್ನಿಸಿದವು. ಒಮ್ಮಿಂದೊಮ್ಮೆಲೆ ರೈತರ ಬಗ್ಗೆ ಈ ವರ್ಷಗಳಿಗೆ ಅನುಕಂಪವೇಕೆ? ಈ ಪಕ್ಷಗಳು ಮಾಡುತ್ತಿರುವ ಕಸರತ್ತನ್ನು ಒಂದು ಬಚ್ಚಿಟ್ಟ ಅಜೆಂಡಾ ಅಂತೂ ಇದೆ. ಅದುವೇ ಚುನಾವಣೆ" ಎಂದು ಬೇರೆ ಹೇಳಬೇಕಿಲ್ಲ. ರೈತರೆ ಆಗಲಿ ಜನಸಾಮಾನ್ಯರೆ ಆಗಲಿ ಇವರ ವಿನಃ ನೋಡಿದರೆ ವಿನಃ ಪ್ರೇರೇಪಿತರಾಗಲಿಲ್ಲ ಎಂಬುದು ಸತ್ಯ. ಅನೇಕ ಪತ್ರಿಕೆಗಳು ಈ ಬೆಳವಣಿಗೆಯನ್ನು ನಗೆಯಾಡಿವೆ.

ರೈತರ ಹೋರಾಟಗಳು ವಿವಿಧ ಮುಖ ಪಡೆಯುತ್ತಿರುವವರು ಪರಿಸ್ಥಿತಿಯ ವೈಚಿತ್ರ್ಯ. ರಾಜಕೀಯ ಪಕ್ಷಗಳ ನೇತೃತ್ವದ ರೈತ ಹೋರಾಟ ಒಂದೆಡೆಯಾದರೆ, ಅದೇ ರಾಜಕೀಯ ಕಾರ್ಯಕರ್ತರು ಪಕ್ಷೇತರ ರೈತ ಸಂಘಟನೆಗೆ ಕರೆ ನೀಡುತ್ತಾರೆ. ಅಲ್ಲದೆ ರೈತ ಸಂಘಟನೆಗಳ ಹೋರಾಟಗಳಂತೂ ಸರಿಯೆ. ಹೀಗೆ ಹೋಟಿಬಾಟಗಳು ನಡೆಯುತ್ತವೆ. ಅದರೆ ಸಾಧನೆ ಶೂನ್ಯ. ರೈತರು ಆತ್ಮಸ್ಥೈರ್ಯ ಕಳೆದುಕೊಂಡು ಹೋರಾಟದ ಹಾರ ತೊರೆದು ಆತ್ಮಹತ್ಯೆಯ ಹಾದಿ ತುಳಿಯುತ್ತಿದ್ದಾರೆ. ಈ ರಾಜಕೀಯ ಧುರೀಣರು ಸತ್ತ ರೈತನ ಮನೆಗೆ ಹೋಗಿ ಸಾಂತ್ವನ ಹೇಳುತ್ತವೆಯೇ ಹೊರತು ಈ ಸಮಸ್ಯೆಗೆ ಮೂಲ ಕಾರಣವೇನು? ಅದಕ್ಕೆ ಪರಿಹಾರವೇನು? ಎಂಬುದನ್ನು ಚಿಂತಿಸುತ್ತಿಲ್ಲ. ಪರಸ್ಪರ ದೋಷಾರೋಪಣೆ ಹೊರತು ಮತ್ತೇನು ಆಗುತ್ತಿಲ್ಲ. ರಾಜ್ಯದ ಬಿಜೆಪಿ ದುರೀಣರು ಕಾಂಗ್ರೆಸ್ಸನ್ನು ದೂಷಿಸಿದರೆ ಕಾಂಗ್ರೆಸ್ಸು ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರವನ್ನು ತಪ್ಪಿಸತ್ಥರ ಸಾಲಿಗೆ ತಳ್ಳುವ ಪ್ರಯತ್ನ ಮಾಡುತ್ತಾರೆ. ಆದರೆ ರೈತರು ಹಾಗೂ ಜನಸಾಮಾನ್ಯರು ದೃಷ್ಟಿಯಲ್ಲಿ ಎಲ್ಲಾ ಪಕ್ಷಗಳವರು, ಕಳ್ಳರು ಹಾಗೂ ಬಂಡರು ಹೀಗಾಗಿ ಅದರಲ್ಲಿ ನಿರ್ಲಿಪ್ತ ಭಾವ ಆವರಿಸಿದೆ.

ಈ ದೇಶವನ್ನು ಹೆಚ್ಚು ಕಾಲ ಆಳಿದ ಪಕ್ಷ ಕಾಂಗ್ರೆಸ್ ಒಂದಿಷ್ಟು ಅವಧಿ ಕಾಂಗ್ರೆಸ್ಸೇತರ ಸರಕಾರ ಬಂದರೂ, ಅವರು ದೇಶದ ಆಗುಹೋಗುಗಳಿಗಿಂತ ತಮ್ಮ ಕಿತ್ತಾಟದಲ್ಲಿ ಸಮಯ ಕಳೆದದ್ದುಂಟು. ಹೀಗಾಗಿ ಜನಪರ ಇಲ್ಲವೆ ಜನವಿರೋಧಿ ಧೋರಣೆ ತಾಳುವವರು ಆ ವರ್ಷ ಸರಕಾರದಿಂದ ಆಗಲೇ ಇಲ್ಲ. ಥಗಿನ ಎನ್.ಡಿ.ಎ. ಸರ್ಕಾರ ಕಾಂಗ್ರೆಸ್ಸಿನ ಆರ್ಥಿಕ ಧೋರಣೆಯನ್ನೇ ಜಾರಿಗೆ ತರುತ್ತಾರೆ. ಹೀಗಾಗಿ ಕಾಂಗ್ರೆಸ್ ಯತ್ನ ಬಿಜೆಪಿ ನಡುವೆ ಸಭ್ಯತೆ ಇದೆ. ಜೀವ ವಿಮಾ ಖಾಸಗೀಕರಣ ಮಸೂದೆಗೆ ಕಾಂಗ್ರೆಸ್ಸು ಬಿಜೆಪಿ ಸರಕಾರಕ್ಕೆ ಸಂಸತ್‌ನಲ್ಲಿ ಬೆಂಬಲ ನೀಡಿದ ಉದಾಹರಣೆ ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

ಇಂದು ನಮ್ಮ ಆರ್ಥಿಕತೆಯ ಕತ್ತು ಹಿಚುಕುತ್ತಿರುವವರು ಗ್ಯಾಟ ಒಪ್ಪಂದ ಎನ್ನುವುದು ಜನಸಾಮಾನ್ಯರಿಗೂ ಅರ್ಥವಾಗಹತ್ತಿದೆ. ಸಾರ್ವಜನಿಕ ಜ್ಞಾಪಕ ಶಕ್ತಿ ಕಡಿಮೆ (public memory is short) ಗ್ಯಾಟ ಒಪ್ಪಂದಕ್ಕೆ ಸಹಿ ಹಾಕಿದ ಕಾಂಗ್ರೆಸ್ ಬಗ್ಗೆಯಾಗಲಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿರುವ ಎನ್.ಡಿ.ಎ. ಸರಕಾರದ ಬಗ್ಗೆಯಾಗಲಿ ಜನರ ಆಕ್ರೋಶವಿಲ್ಲ. ಅದರ ಬದಲು ಎಲ್ಲರೂ ಕಳ್ಳರೆ ಎಂದು ಮೂದಲಿಸಿ, ಸಮಸ್ಯೆಯನ್ನು ಸರಳೀಕರಣಗೊಳಿಸುವ ಮನೋಭಾವ ಇದೆ.

1994 ರಲ್ಲಿ ನರಸಿಂಹರಾವ್ ಸರಕಾರ ಗ್ಯಾಟ ಒಪ್ಪಂದಕ್ಕೆ ಸಹಿ ಹಾಕಿತು. ಇದರ ಮೂಲಕ ಮುಕ್ತ ವ್ಯಾಪಾರ ನೀತಿ, ಒಳಆಮದು ಸುಂಕ ಇಳಿಕೆ ಜಾರಿಗೆ ಬಂದವು. ಹೀಗಾಗಿ ಭಾರತದಲ್ಲಿ ಬೆಳೆಯುವ ಎಲ್ಲಾ ಕೃಷಿ ಪದಾರ್ಥಗಳು ಬೇರೆ ದೇಶದಲ್ಲಿ ಬೆಳೆಯುತ್ತವೆ. ಆ ದೇಶಗಳ ಕೃಷಿ ಪದಾರ್ಥಗಳಿಗೆ ಭಾರತ ಮಾರುಕಟ್ಟೆಯಾಗಿದೆ ಹೊರತು ಭಾರತದ ಕೃಷಿ ವಸ್ತುಗಳಿಗೆ ಬೇರೆ ದೇಶಗಳು ಮಾರುಕಟ್ಟೆ ಒದಗಿಸಲಾರವು. ಮಾರುಕಟ್ಟೆಯಲ್ಲಿ ವಿದೇಶಿ ಪದಾರ್ಥಗಳೊಂದಿಗೆ ನಮ್ಮ ವಸ್ತುಗಳು ಸ್ಪರ್ಧೆ ನೀಡಲಾರವು. ಹೀಗಾಗಿ ನಮ್ಮ ಪದಾರ್ಥಗಳು ಒಂದೋ ಅಗ್ಗದರದಲ್ಲಿ ಮಾರಾಟವಾಗಬೇಕು ಇಲ್ಲವೆ ದಾಸ್ತಾನು ಮಳಿಗೆಯಲ್ಲಿ ಕೊಳೆಯುತ್ತಾ ಬೀಳಬೇಕು.



1981ರ ಚಾರಿತ್ರಿಕ ಕಾಲ್ನಡಿಗೆ ಜಾಥಾ -ನರಗುಂದದಿಂದ ಬೆಂಗಳೂರಿನತ್ತ

ಇಂದು ಸಾಂಪ್ರದಾಯಿಕ ಕೃಷಿ ಪದವಿಯ ಸ್ಥಾನವನ್ನು ವೈಜ್ಞಾನಿಕ ಕೃಷಿ ಪಡೆದಿದೆ. ವೈಜ್ಞಾನಿಕ ಕೃಷಿ ಹೆಚ್ಚಿನ ಬಂಡವಾಳವನ್ನು ನಿರೀಕ್ಷಿಸುತ್ತದೆ ಅಂದಾಗ ರೈತ ತಾನು ಹಾಕಿದ ಬಂಡವಾಳಕ್ಕೆ ಲಾಭವನ್ನು ಬಯಸುವುದು ಸಹಜ. ಆದರೆ ಮಾರುಕಟ್ಟೆಯಲ್ಲಿ ತನ್ನ ಬೆಳೆಗೆ ಸರಿಯಾದ ಬೆಲೆ ಬಾರದೆ. ತಾನು ಹಾಕಿದ ಬಂಡವಾಳ ಬಾರದಾದಾಗ, ಬ್ಯಾಂಕಿನಿಂದ ತಂದ ಸಾಲವನ್ನು ಮರುಪಾವತಿ ಮಾಡಲಾಗದೆ ಕಟಬಾಕಿದಾರ ನಾಗುತ್ತಾನೆ. ಅವನಿಗೆ ಮರಳಿ ಸಾಲ ಸಿಗದು. ಆಗ ರೈತನಿಗೆ ಸರಕಾರಿ ಸಾಲವೇ ಗತಿ. ಸಾಹುಕಾರಿ ಸಾಲ ಎಂದರೆ ತಿರುಗಣಿ ಮಡುವಿಗೆ ಬಿದ್ದಹಾಗೆಯೇ ಭಂಡತನ ಗೊತ್ತಿಲ್ಲದ ಬೋಳೆತನ ಮರೆಯುವ ಮತ್ತು ಸಾಭಿಮಾನಿ ರೈತ ಆತ್ಮಹತ್ಯೆಯ ಹಾದಿ ಹಿಡಿಯುತ್ತಾನೆ.

ರೈತರ ಸಮಸ್ಯೆಗಳು ಸ್ವಾಭಾವಿಕವಾಗಿ ಹಾಕುವಾಗ ವಿರೋಧಿಸದ ಬಿಜೆಪಿ ಹಾಗೂ ದಳ ಪರಿವಾರ, ಈಗ ಕೃಷ್ಣ ಸರಕಾರದ ಮೇಲೆ ಗೂಬೆ ಕೂಡ್ರಿಸಲು ಹವಣಿಸುತ್ತಿರುವವರು ಆತ್ಮವಂಚನೆ ಅನ್ನಿಸದೆ? 90 ರ ದಶಕದಲ್ಲಿ ಗ್ಯಾಟ ಒಪ್ಪಂದ-ಡಂಕಲ್ ಪ್ರಸ್ತಾವನೆ ವಿರೋಧಿಸಿ ಪ್ರತಿಭಟನೆ ಮಾಡಿದ ಎಡಪಕ್ಷಗಳ ಹಾಗೂ ಪ್ರಾಂತ ಮತ್ತು ರಾಜ್ಯ ರೈತ ಸಂಘದ ಹೋರಾಟಗಳನ್ನು ಗೌಣವಾಗಿ ಕಂಡ ಈ ಪಕ್ಷಗಳಿಗೆ ಇಂದು ರೈತನ ಬಗ್ಗೆ ಒಮ್ಮಿಂದೊಮ್ಮೆಲೆ ಕಾಳಜಿ ಮಾಡಿದುದು ನಾಟಕೀಯ ಅನ್ನಿಸಲಾರದೆ? ಜನತಾದಳಕ್ಕೆ ನಿಜವಾಗಿ ರೈತರ ಬಗ್ಗೆ ಕಾಳಜಿ ಇದ್ದರೆ ಅವರನ್ನು ಸಮಸ್ಯೆಯ ಸುಳಿಯಿಂದ ಪಾರು ಮಾಡುವ ಇರಾದೆ ಇದ್ದರೆ, ಸಜಮಾನ ಮನಸ್ಕ ಶಕ್ತಿಗಳೊಂದಿಗೆ ಸೇರಿಕೊಂಡು ಜನವಿರೋಧಿ ರೈತವಿರೋಧಿ ಧೋರಣೆಗಳನ್ನು ಕೈಬಿಡುವಂತೆ ಸರಕಾರದ ಮೇಲೆ ಒತ್ತಡ ಹೇರಲು ಮನಸ್ಸು ಮಾಡಲಿ.


ಮಂತ್ರಿಗಳು ಹೇಳಿದ್ದು

ಒಬ್ಬನೂ ಹಸಿವಿನಿಂದ ಸತ್ತಿಲ್ಲವೆಂದು
ಮಂತ್ರಿಗಳು ನಿಜವನ್ನೇ ಹೇಳಿದರು ಇಂದು
ಒಬ್ಬನೂ ಹೋಗಿಲ್ಲ ಹಸಿವಿನಿಂದ ಮಡಿದು
ಮಡಿದದ್ದು ಆಡಳಿತ ಯಂತ್ರಗಳು ಬಡಿದು

- ವಿಡಂಬಾರಿ.

ವೃದ್ಧರ ಸಮಸ್ಯೆಗಳೇನು?

ವೃದ್ದರ ಸಂಖ್ಯೆ ಹೆಚ್ಚುತ್ತಿದೆ. ವೃದ್ದರ ಸಮಸ್ಯೆಗಳೂ ಹೆಚ್ಚಲು ಸಾಧ್ಯ. ಈ ಜಾಗತೀಕರಣ ವ್ಯವಸ್ಥೆ ಆ ಸಮಸ್ಯೆಯನ್ನು ಹೆಚ್ಚಿಸುತ್ತದೆಂದು ಈಗಾಗಲೇ ಅರಿವು ಮೂಡುತ್ತ ಬಂದಿದೆ. ಹಿಂದಿನ ಸಂಚಿಕೆಯಲ್ಲಿ ವೃದ್ಧಾಪ್ಯದ ಬಗ್ಗೆ ಇರುವ ಕೆಲವು ಮಿಥ್ಯತೆಗಳನ್ನು ತಿಳಿದಿದ್ದೇವೆ. ಇನ್ನೂ ಕೆಲವು ಮಿಥ್ಯತಥ್ಯಗಳನ್ನು ತಿಳಿಯೋಣ.



ಮಿಥ್ಯ: ವಯಸ್ಸಾದಂತೆಲ್ಲ ಹೆಚ್ಚು ಅಸಹಾಯಕತೆ ಉಂಟಾಗುತ್ತದೆ.


ತಥ್ಯ : ವೃದ್ಧಾಪ್ಯದಲ್ಲಿ ಕಣ್ಣು, ಕಿವಿ, ದೈಹಿಕ ಕಾಯಿಲೆಗಳಿಂದಾದ ದೌರ್ಬಲ್ಯ ಕೆಲವರಲ್ಲಿ ಕಂಡುಬರುತ್ತದೆ. ಆದರೆ ಅಸಹಾಯಕತೆಗೆ ವೃದ್ಧಾಪ್ಯ ಕಾರಣವಲ್ಲ, ಮಾನಸಿಕ ಸ್ಥಿತಿ ಕಾರಣ, ಅದಕ್ಕೆ ಅವರ ವಾತಾವರಣ, ಕುಟುಂಬದ ಪರಿಸ್ಥಿತಿ ಕಾರಣವಾಗುತ್ತಿದೆ.

ಮಿಥ್ಯ: ವೃದ್ಧಾಪ್ಯದಲ್ಲಿ ಮನಶಾಂತಿ ಇರುತ್ತದೆ. ವೃದ್ದರು ಸಮಾಜಕ್ಕೆ ಆಭಾರಿಯಾಗಿರುತ್ತಾರೆ.

ತಥ್ಯ: ವೃದ್ಧಾಪ್ಯದಲ್ಲಿ ಮನಶಾಂತಿ ಇರುವುದನ್ನೂ ಕಾದಂಬರಿಗಳಲ್ಲಿ ಓದಬಹುದಾಗಿದೆ. ಆದರೆ ವೃದ್ಧರಿಗೆ ಆರೋಗ್ಯ ಹಾಗೂ ಭವಿಷ್ಯದ ಬಗ್ಗೆ ಆತಂಕವಿರುವುದನ್ನು ಕಾಣುವುದು ಸಾಮಾನ್ಯ. ಈ ಆತಂಕ ಅವರ ಕುಟುಂಬದ ಸದಸ್ಯರ ಬೆಂಬಲದ ಮೇಲೆ ಅವಲಂಬಿಸಿದೆ ಕೆಲವು ಬಾರಿ (L 1%) ಇದು ವ್ಯಕ್ತಿಯ ಸ್ವಭಾವದ ಮೇಲೆ ಅವಲಂಬಿಸುತ್ತದೆ.

ಮಿಥ್ಯ: ವೃದ್ಧರು ದೈಹಿಕ ಶ್ರಮ ಮಾಡಿಕೊಳ್ಳಬಾರದು ಆರೋಗ್ಯದಿಂದಿರಲು ವಿಶ್ರಾಂತಿ ತೆಗೆದುಕೊಳ್ಳಬೇಕು.

ತಥ್ಯ: ವೃದ್ಧರಿಗೆ ದೈಹಿಕ ಹಾಗೂ ಮಾನಸಿಕ ಅಶಕ್ತತೆ ಇರುತ್ತದೆ ಎಂಬುದು ಸತ್ಯವಲ್ಲ. ದೈಹಿಕ ಶ್ರಮವಾದಾಗ ವಿಶ್ರಾಂತಿ ಅಗತ್ಯ. ಆದರೆ ದಿನನಿತ್ಯದ ಕೆಲಸಗಳನ್ನು ಮಾಡಬಹುದಾಗಿದೆ. "ನೀವು ಸುಮ್ಮನೇ ಮೂಲೇಲಿ ಕೂತಿರಿ ಎಲ್ಲ ಕೆಲಸಕ್ಕೂ ಬರಬೇಡಿ. ನಿಮಗೆ ವಯಸ್ಸಾಯಿತು ವಿಶ್ರಾಂತಿ ಬೇಕು" ಎಂಬ ಮಾತುಗಳು ವೃದ್ದರು ಕೇಳಿದಾಗ, ಅವರೂ ಶ್ರಮ ಒಳ್ಳೆಯದಲ್ಲ ಎಂದು ತೀರ್ಮಾನಿಸುತ್ತಾರೆ. ದಿನನಿತ್ಯದ ಎಲ್ಲ ಕೆಲಸಗಳನ್ನು ಮಾಡಿಕೊಂಡು ಹೋಗುವುದು ಆರೋಗ್ಯಕ್ಕೆ ಒಳ್ಳೆಯದು.



1947 ದೇಶ ಸ್ವತಂತ್ರವಾದಾಗ

ಪಕ್ಷದ ಕೇಂದ್ರ ಸಮಿತಿಯಲ್ಲಿ 1947ರ ಸ್ವಾತಂತ್ರ್ಯ ದಿನಾಚರಣೆಯಲ್ಲಿ ನಾವು ಭಾಗಿಗಳಾಗುವಂತೆ ಕರೆ ನೀಡಿದಾಗ, ಜಿಲ್ಲೆಯ ಮುಂದಾಳು ಕಾಂ.ಶಿವಶಂಕರ ರಾಯರು ಬಂದು ಪಕ್ಷದ ಸದಸ್ಯರ ಸಭೆಯನ್ನು ಸೇರಿಸಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ನಾವು ಅದರಲ್ಲಿ ಭಾಗವಹಿಸುವಂತೆ ಮಾಡಲು ಬಹಳ ಪ್ರಯಾಸ ಪಡಬೇಕಾಯಿತು. ಅದುವರೆಗೆ ನಮಗೆ ನೀಡಲಾದ ತಿಳುವಳಿಕೆಯಂತೆ ಇದನ್ನು ಸ್ವಾತಂತ್ರ್ಯವೆಂದು ಒಪ್ಪಲು ನಿರಾಕರಿಸಿ ಸದಸ್ಯರೆಲ್ಲರೂ ತೀವ್ರತರದ ಚರ್ಚೆ ನಡೆಸಿದರು. ಕಾಂ.ಶಿವಶಂಕರ ರಾಯರು ಪ್ರಯಾಸಪಟ್ಟು ನಮ್ಮನ್ನು ಒಪ್ಪಿಸಿ ಕೇಂದ್ರ ಸಮಿತಿಯ ನಿರ್ಣಯದಂತೆ ವಿವರಣೆ ನೀಡಿದರು. ಮತ್ತು ನಮ್ಮ ಆಫೀಸುಗಳನ್ನು ಶಿರಿಬೀಡು ಮತ್ತು ಅಜ್ಜರಕಾಡು ಬಳಿ 2 ಆಫೀಸುಗಳಲ್ಲಿ ಬಾವುಟ ಹಾಕಿ ಶೃಂಗರಿಸಬೇಕೆಂದು ನಿರ್ದೇಶಿಸಿದರು. ರಾಷ್ಟ್ರಧ್ವಜವನ್ನು ಮತ್ತು ನಮ್ಮ ಕೆಂಬಾವುಟವನ್ನು ಜತೆಜತೆಯಾಗಿ ಹಾರಿಸಬೇಕೆಂದು ತಿಳಿಸಿದಂತೆ ನಾವು ನಮ್ಮ ಆಫೀಸುಗಳನ್ನು ಶೃಂಗರಿಸಿ ಬೆಳಿಗ್ಗೆ ಧ್ವಜ ವಂದನೆಯ ಮೂಲಕ ರಾಷ್ಟ್ರಧ್ವಜ ಮತ್ತು ಕೆಂಬಾವುಟವನ್ನು ಹಾರಿಸಿದೆವು.

ಅಜ್ಜರಕಾಡಿನಲ್ಲಿ ಕಾಂಗ್ರೆಸ್ಸಿಗರಿಂದ ನಡೆದ ರಾಷ್ಟ್ರಧ್ವಜ ವಂದನೆಯ ಕಾರ್ಯಕ್ರಮದಲ್ಲಿ ನಾವು ಮುಖ್ಯ ಕಾರ್ಯಕರ್ತರು, ಮುಖಂಡರು ಭಾಗವಹಿಸಿ ಗೌರವ ನೀಡಿದೆವು.


ಎಲ್ಲೆಲ್ಲಿ ಕಾಂಗ್ರೆಸ್ಸಿನ ಹೋರಾಟದ ಪರಂಪರೆಯ ನಾಯಕರಿದ್ದರೂ ಅಲ್ಲಿ ಎಲ್ಲಾ ಕಡೆ ಧ್ವಜವಂದನೆ ಮೆರವಣಿಗೆ ಭಾಷಣಗಳು ನಡೆದವು. ಏನಿದ್ದರೂ ಅಂದಿನ ಬಹಳಷ್ಟು ಕಾಂಗ್ರೆಸ್ಸಿಗರು ದೇಶಭಕ್ತರಾಗಿದ್ದರು. ಕಷ್ಟ, ಹಿಂಸೆ, ನಷ್ಟ ಅನುಭವಿಸಿದ ಹಲವಾರು ಮುಖಂಡರುಗಳಲ್ಲಿ ಪೌಂಗಾಳ ಲಕ್ಷ್ಮಿನಾರಾಯಣ ನಾಯ್ಕರ ಮನೆತನ ಮತ್ತು ಶ್ರೀ ಉಪೇಂದ್ರ ನಾಯ್ಕರು ಮೊದಲಾದವರಿದ್ದರು. ನಮ್ಮ ಪಕ್ಷದ ಘಟಕಕ್ಕೆ ಅವರೆಲ್ಲರ ಬಗ್ಗೆ ಅಪಾರವಾದ ಗೌರವವಿತ್ತು.

ಸಂಜೆ 5 ಗಂಟೆಗೆ ಬೃಹತ್ ಮೆರವಣಿಗೆ ರಾಷ್ಟ್ರಧ್ವಜದೊಂದಿಗೆ ಹೊರಟಿತು. ನಮಗೆ ನಿರ್ದೇಶನ ನೀಡಲಾದಂತೆ ಆ ಮೆರವಣಿಗೆಯ ಹಿಂದಿನಿಂದ ನಾವು ಅವರಂತೆಯೇ ಎರಡು ಮಂದಿಯ ಸಾಲಿನಲ್ಲಿ ನೂರಾರು ಕಾರ್ಮಿಕರು ಭಾಗವಹಿಸಿದೆವು. ರಾಷ್ಟ್ರಧ್ವಜ ಮತ್ತು ಕೆಂಬಾವುಟವನ್ನು ನಮ್ಮ ಮೆರವಣಿಗೆಯಲ್ಲಿ ಎತ್ತಿ ಹಿಡಿದಿದ್ದೆವು.

ಕಾಂಗ್ರೆಸ್ಸಿಗರು ನಮ್ಮನ್ನು ನೋಡಿ ಸ್ವಲ್ಪಮಟ್ಟಿಗೆ ವಿಚಲಿತರಾದಂತೆ ಕಂಡಿತಾದರೂ ಅವರಿಂದ ಯಾವುದೇ ತರದ ಅಡ್ಡಿ, ಆತಂಕ ಎದುರಾಗಲಿಲ್ಲ. ಮುಂದೆ ಹೋದಂತೆ ಆ ಆತಂಕ ನಿವಾರಣೆಯಾದಂತೆ ಕಂಡುಬಂತು.

ಮುಂದಿನ ಸಾಲುಗಳಲ್ಲಿದ್ದವರು ಭೋಲ್ ಭಾರತ್ ಮಾತಾಕಿ ಜೈ, ಮಹಾತ್ಮ ಗಾಂಧಿಕಿ ಜೈ, ಜವಾಹರ್‌ಲಾಲ್ ನೆಹರೂಕಿ ಜೈ, ವಲ್ಲಭಾಯಿ ಪಟೇಲ್‌ಕೀ ಜೈ ಎಂಬಿತ್ಯಾದಿ ಘೋಷಣೆಗಳನ್ನು ಅವರು ಕೂಗುತ್ತಾ ಇದ್ದರು.

ನಮ್ಮ ಹಿಂದಿನ ಸಾಲಿನಲ್ಲಿ ಮೇಲಿನ ಕೆಲವು ಘೋಷಣೆಗಳೊಂದಿಗೆ ನಾವು ನಮಗೆ ಪಕ್ಷದಿಂದ ನೀಡಲಾದ ಭೋಲೋ ಸುಭಾಶ್‌ಚಂದ್ರ ಭೋಸ್‌ರವರಿಗೆ ಜಯವಾಗಲಿ, ಅಜಾದ್ ಹಿಂದ್ ಸೇನೆಯ ಯೋಧರಿಗೆ ಜಯವಾಗಲಿ, ನಾವಿಕರ ಬಂಡಾಯದ ಹುತಾತ್ಮರಿಗೆ ಜಯವಾಗಲಿ, ಭಗತ್‌ಸಿಂಗರಿಗೆ ಜಯವಾಗಲಿ, ಚಿತ್ತಂಗಾಂಗ್ ಕ್ರಾಂತಿಕಾರಿಗಳಿಗೆ ಜಯವಾಗಲಿ, ಕಯ್ಯೂರು ಯೋಧರಿಗೆ ಜಯವಾಗಲಿ, ಪುನ್ನಪ್ರವಯಾಲಾರ್‌ನ ವೀರ ಹುತಾತ್ಮರಿಗೆ ಜಯವಾಗಲಿ ಎಂದು ಬಹಳ ಗಟ್ಟಿಯಾಗಿ ಘೋಷಣೆಗಳನ್ನು ಕೂಗಿದೆವು. ನಾನು ಘೋಷಣೆ ಕೂಗುವುದರಲ್ಲಿ ಮುಖ್ಯ ಪಾತ್ರವಹಿಸಿದೆ.




ಡೇವಿಡ್ ಕರ್ಕಡ, ಉಡುಪಿ

ನಗರದಲ್ಲಿ ಸುತ್ತಾಡಿದ ನಂತರ ಮೆರವಣಿಗೆಯು ಅಜ್ಜರಕಾಡಿನ ಗಾಂಧಿ ಮೈದಾನವನ್ನು ತಲುಪಿ ಬಹಿರಂಗ ಸಭೆ ನಡೆಸಲಾಯಿತು. ಇಂದಿನ ಹೋರಾಟ ನಿರತರಾಗಿದ್ದ ಕಾಂಗ್ರೆಸ್ ಮುಂದಾಳುಗಳು ಭಾಷಣ ಮಾಡಿದರು. ನಾವು ಮೌನವಹಿಸಿ ಕೇಳಿದೆವು. ನಮ್ಮ ಪಕ್ಷಕ್ಕೆ ಬಹಿರಂಗ ಸಭೆಯಲ್ಲಿ ಮಾತನಾಡುವ ಅವಕಾಶ ಸಿಗಲಿಲ್ಲ. ಅದನ್ನು ನಾವು ನಿರೀಕ್ಷಿಸಿಯೂ ಇರಲಿಲ್ಲ. ಮುಂದಾಳುಗಳು ತಿಳಿಸಿದಂತೆ ನಡೆಯಿತು. ಅದರಿಂದ ನಮಗೆ ಬೇಸರವೇನೂ ಆಗಲಿಲ್ಲ. ಈ ವಿಚಾರವನ್ನು ಕೆಲವು ದಿನಗಳವರೆಗೆ ಹೇಳುತ್ತಿದ್ದೆವು ಮತ್ತು ಮೇಲಿನ ಸಮಿತಿಗೆ ವರದಿ ಮಾಡಿದೆವು(ಮಂಗಳೂರಿನ ಕೇಂದ್ರಕ್ಕೆ).

19 ವರ್ಷದ ಯುವಕನಾಗಿದ್ದ ನನಗೆ ಎಲ್ಲಿಲ್ಲದ ಉತ್ಸಾಹವಿತ್ತು. ಪಂಡಿತ ಜವಾಹರ್‌ಲಾಲ್ ನೆಹರೂರವರು 47 ರ ಆಗಸ್ಟ್ 14 ರ ಮಧ್ಯರಾತ್ರಿ ಕೆಂಪುಕೋಟೆಯಿಂದ ಮಾಡಿದ ಭಾಷಣವನ್ನು ಕೇಳಲು ಅಜ್ಜರಕಾಡಿನ ರೇಡಿಯೋ ಕೇಂದ್ರದಲ್ಲಿ ಪಕ್ಷದ ಸದಸ್ಯರೆಲ್ಲರೂ ಕಾದು ಕುಳಿತು ಭಾಷಣ ಕೇಳಿದೆವು. ಕಾಂಗ್ರೆಸ್ಸಿಗರು ಅದೇ ರೀತಿಯಾಗಿಯೇ ಭಾಷಣ ಆಲಿಸಿದರು. ಆಗಿನ ಕಾಲದಲ್ಲಿ ಮನೆಗಳಲ್ಲಿ ರೇಡಿಯೋ ಬಂದಿರಲಿಲ್ಲ. ರಾಷ್ಟ್ರಧ್ವಜದೊಂದಿಗೆ ನಮ್ಮ ಕೆಂಬಾವುಟವನ್ನು ಎತ್ತಿಹಿಡಿದು ಮೆರವಣಿಗೆಯಲ್ಲಿ ಭಾಗವಹಿಸಿದ್ದು ಇಂದಿಗೂ ನನಗೆ ಮತ್ತು ಸಂಗಾತಿಗಳಿಗೆ ಹೆ[illegible] ಎನಿಸುತ್ತದೆ.

(ಕಾಂ. ಎಸ್.ಎನ್.ಹೊಳ್ಳರ ಬಿಡುಗ[illegible] ಮಂಗಳೂರಿಗೆ ಇ.ಎಂ.ಎಸ್. ನಂಬೂದಿರಿಪಾಡರ ಆಗಮನ, ಮುಂದಿನ ಬಾರಿ ಪಕ್ಷ[illegible] ಹೊಸ ನೀತಿ ಧೋರಣೆಗಳ ವಿವರಣೆ ಮು[illegible] ಬದಲಾದ ಕಾಲಘಟ್ಟದಲ್ಲಿ ಪಕ್ಷದ ಧೋರಣೆಯ[illegible] ವಿವರಿಸಲು ಮಂಗಳೂರಿನ ಕೇಂದ್ರ ಮೈದಾನದ[illegible] ಸುಮಾರು 10 ಸಾವಿರಕ್ಕಿಂತಲೂ ಹೆಚ್ಚು ಮ[illegible] ಸೇರಿದ ಸಭೆಯ ವಿವರಣೆ).

ಮು[illegible]



ವಿಮಾನ ನಿಲ್ದಾಣಗಳು ಖಾಸಗೀಯವರಿಗೆ

ಕೇಂದ್ರ ಸರ್ಕಾರದ ಮಂತ್ರಿ ಮಂಡಲ ದೆಹಲಿ ಮತ್ತು ಮುಂಬೈಗಳ ವಿಧಾನ ನಿಲ್ದಾಣಗಳ ಖಾಸಗೀಕರಣ ಮಾಡುವ ನಿರ್ಧಾರ ತೆಗೆದುಕೊಂಡಿದೆ. ಖಾಸಗೀಕರಣ ಒಂದು ಚಾಳಿಯಾಗಿ ಬೆಳೆದಿರುವ ಈ ಸರ್ಕಾರಕ್ಕೆ ಖಾಸಗೀಕರಣ ಮಾಡದೇ ಒಂದು ದಿನವನ್ನೂ ಕಳೆಯುವುದು ಕಷ್ಟದ ಕೆಲಸ.

ವಿಮಾನ ನಿಲ್ದಾಣಗಳು ದೇಶದ ಬದ್ರತೆಯ ದೃಷ್ಟಿಯಿಂದ ಬಹುಮುಖ್ಯ ಆಯಕಟ್ಟಿನ ಸ್ಥಳಗಳು. ಆದ್ದರಿಂದಲೇ ಇವುಗಳ ಸರ್ಕಾರಿ ಸ್ವಾಮ್ಯದಲ್ಲಿರುವುದು ಒಳ್ಳೆಯದಾಗಿತ್ತು. ಇದಲ್ಲದೆ ವಿಮಾನಯಾನ ಮಾಡುವ ಜನರ ಸುರಕ್ಷತೆಯ ಪ್ರಶ್ನೆಯೂ ಇಲ್ಲಿ ಅಡಗಿದೆ.

ಖಾಸಗೀಯವರು ದೇಶದ ರಕ್ಷಣೆ ಮತ್ತು ಜನರ ಸುರಕ್ಷತೆಯ ಬಗ್ಗೆ ಎಂತಹ ಕಾಳಜಿ ಮತ್ತು ಜನರ ಸುರಕ್ಷತೆಯ ಬಗ್ಗೆ ಎಂತಹ ಕಾಳಜಿ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಇದಲ್ಲದೆ ವಿಮಾನ ನಿಲ್ದಾಣಗಳು ಸಾಕಷ್ಟು ಆದಾಯ ತಂದುಕೊಡುವ ಸೌಲಭ್ಯಗಳೂ ಹೌದು. ಈ ಆದಾಯವನ್ನು ಖಾಸಗೀಯವರಿಗೆ ಕೊಡುವುದೇ ಸರ್ಕಾರದ ಉದ್ದೇಶ ಎಂಬುದು ಸ್ಪಷ್ಟ.

ಕ್ಯಾನ್‌ಕುನ್ ಮುರಿದು ಬಿದ್ದ ವಿಶ್ವವ್ಯಾಪಾರ ಸಂಘಟನೆಯ ಮಾತುಕತೆಗಳು

ಭಾರತದ ಪ್ರತಿನಿಧಿ ಕೇಂದ್ರದ ಮಂತ್ರಿ ಅರುಣ ಜೈಟ್ಲೆ ಹೀರೋನ ತರಹ ಮಾತನಾಡಿದ್ದಾರೆ. ಪತ್ರಿಕೆಗಳಲ್ಲಿ ಅವರ ಪೌರುಷದ ಮಾತುಗಳು ಅಚ್ಚಾಗಿವೆ.

ವಿಶ್ವವ್ಯಾಪಾರ ಸಂಘಟನೆಯ ಸಚಿವ ಮಟ್ಟದ ಮಾತುಕತೆಗಳು ಮುರಿದುಬಿದ್ದಿವೆ. ಮುಖ್ಯವಾಗಿ ಕೃಷಿ ಸಬ್ಸಿಡಿ, ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಮಾರುಕಟ್ಟೆಯ ಬಾಗಿಲುಗಳನ್ನು ತೆರೆದ ಬಗೆಗಿನ ವಿಷಯದಲ್ಲಿ ಈ ಮಾತುಕತೆಗಳು ತೆರೆದ ಬಗೆಗಿನ ವಿಷಯದಲ್ಲಿ ಈ ಮಾತುಕತೆಗಳು ಮುಖ್ಯವಾಗಿ ಮುರಿದು ಬಿದ್ದಿರುವುದೂ ಈ ವೇದಿಕೆಯಲ್ಲಿ ಭಾರತ, ಚೀನಾ, ಬ್ರೆಜಿಲ್ ಮತ್ತಿತರ ದೇಶಗಳ ಒಟ್ಟಿಗೆ ತಮ್ಮ ವಾದಗಳನ್ನು ಮಂಡಿಸಿದವು. ಒಟ್ಟಾಗಿ ಮಾತುಕತೆಗಳಿಗಿಳಿದವು. ಇದು ಒಳ್ಳೆಯ ಹಾಗೂ ಸಹಜ ಬೆಳವಣಿಗೆ.

ಇಲ್ಲಿ ಗಮನ ನೀಡಬೇಕಾದ ಮುಖ್ಯ ಅಂಶವೊಂದಿದೆ. ಇಂತಹ ಜಾಗತಿಕ ಮಟ್ಟದ ಸಭೆಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿಶೀಲ ದೇಶಗಳ ಮತ್ತು ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳನ್ನು ತುಳಿಯುವ ಕೆಲಸವನ್ನು ಮಾಡುತ್ತಲೇ ಬಂದಿದೆ. ಆದ್ದರಿಂದಲೇ ಇಂತಹ ಸಂದರ್ಭಗಳಲ್ಲೆಲ್ಲ ಜಗತ್ತಿನ ಎರಡನೇ ಅತಿ ಜನಸಂಖ್ಯೆಯ ದೇಶವಾದ ಭಾರತಕ್ಕೆ ವಿಶಿಷ್ಟ ಸ್ಥಾನವಿದೆ. ಅಭಿವೃದ್ಧಿಶೀಲ ಮತ್ತು ಕನಿ[illegible] ಅಭಿವೃದ್ಧಿ ಹೊಂದಿದ ದೇಶಗಳಿಗೆ ನೇತೃ[illegible] ನೀಡುವುದೇ ಅದರ ವಿಶಿಷ್ಟ ಸ್ಥಾನ[illegible] ಐತಿಹಾಸಿಕವಾಗಿಯೇ ಭಾರತ ಈ ಕೆಲ[illegible] ಮಾಡಿದೆ.

ಇಂದಿನ ಬಿಜೆಪಿ ನೇತೃತ್ವದ ಎನ್.ಡಿ[illegible] ಸರ್ಕಾರ ಇಂತಹ ತನ್ನ ಸ್ಥಾನವ[illegible] ಬಿಟ್ಟುಕೊಟ್ಟು ವೈ ಮರೆತ[illegible] ನಡೆದುಕೊಂಡಿದೆ. ಬದ[illegible] ಅಮೇರಿಕಾದಂತಹ ದೇಶಕ್ಕೆ ಚೇ[illegible] ಆಗುವಂತಹ ಧೋರಣೆಯನ್ನು ಅ[illegible] ತೋರಿದೆ.

ಸರ್ಕಾರಿ ಬ್ಯಾಂಕುಗಳು ಸಮಸ್ಯೆಗಳ ಆಗ[illegible]

ಹಣಕಾಸು ವಲಯದಲ್ಲಿ ತಡೆ ಇಲ್ಲದ ಉದಾರೀಕರಣ ನಡೆದಿದೆ. ಸರ್ಕಾರಿ ವಲಯದ ಬ್ಯಾಂಕುಗಳಿಗೆ ಸ್ಪರ್ಧೆಯ ಜಾತ್ರೆಯೇ ಏರ್ಪಟ್ಟಿದೆ. ಖಾಸಗಿ ಬ್ಯಾಂಕುಗಳು, ವಿದೇಶೀ ಬ್ಯಾಂಕುಗಳು ಈ ಸ್ಪರ್ಧೆಯನ್ನೊಡ್ಡಿದೆ.

ಉದಾರೀಕರಣವಾದಿಗಳ ಪ್ರಕಾರ ಸರ್ಕಾರಿ ಬ್ಯಾಂಕುಗಳು ಯಾವುದೇ ಸಾಮರ್ಥ್ಯ ಇಲ್ಲದವು. ಅವು ಯಾವುದೇ ಸ್ಪರ್ಧೆಯನ್ನು ಎದುರಿಸುವ ತಾಕತ್ತಿಲ್ಲದವು ಎಂದೆಲ್ಲ ವಾದವನ್ನು ಹೂಡಿದ್ದವು.

ಇಂತಹ ಸವಾಲುಗಳ ನಡುವೆಯೂ ಈ ಸರ್ಕಾರಿ ವಲಯದ ಬ್ಯಾಂಕುಗಳು ಖಾಸಗೀ ಬ್ಯಾಂಕುಗಳ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸಿವೆ. ಖಾಸಗಿ ಮತ್ತು ವಿದೇಶೀ ಬ್ಯಾಂಕುಗಳಿಗೆ ಇರುವ ಹಲವು ಅನುಕೂಲಗಳು ಇಲ್ಲದೆ ಇದ್ದರೂ ಇವು ಈ ಸಾಮರ್ಥ್ಯ ಮೆರೆದಿವೆ.

ಇಂದಿನ ಪರಿಸ್ಥಿತಿಯಲ್ಲಿ ವೈಯಕ್ತಿಕ ಸಾಲಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಈ ಸಾಲಗಳಿಗೆ (ಅಂದರೆ ವಾಹನಗಳ ಸಾ[illegible] ಮನೆ ಸಾಲ ಇತ್ಯಾದಿ) ಬಹಳ ಬೇಡಿಕೆಯ[illegible] ಇದೆ. ಈ ಬ್ಯಾಂಕುಗಳ ನಿಧಿ ಪಡೆಯ[illegible] ಖರ್ಚು ಕಡಿಮೆ ಇರುವುದರಿಂದ [illegible] ಸಾಧ್ಯವಾಗಿದೆ.

ಏಷಿಯನ್ ಬ್ಯಾಂಕರ್ ಜರ್ನಲ್ ಎ[illegible] ಪತ್ರಿಕೆ ಇಂತಹ ವಿಶ್ಲೇಷಣೆಯನ್ನು ಮಾಡಿ[illegible] ಆದ್ದರಿಂದ ಹೂಡಿಕೆದಾರರು ಈ ಸರ್ಕಾ[illegible] ವಲಯದ ಬ್ಯಾಂಕುಗಳ[illegible] ಕಡೆಗಣಿಸುವಂತಿಲ್ಲ ಎಂದಿದೆ ಅದು.

ಜಾಗತೀಕರಣದ ಕೊಡುಗೆ

ಬಲುದೂರ ಬಡವ-ಶ್ರೀಮಂತರ ನಡುವಿನ ಅಂತರ

ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಬಹಳವಿದೆ ಎಂದು ಕೇಳುತ್ತೇವೆ. ಈ ಅಂತರ ಎಷ್ಟು ಇಲ್ಲಿ ಓದಿ...

ರತ್ನಾಕರ ಶೆಣೈ

ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾದಾಗ ಸುವರ್ಣ ಜಯಂತಿಯನ್ನು ಆಚರಿಸಲಾಯಿತು. ಆಗಸ್ಟ್ 14 ರ ಮಧ್ಯರಾತ್ರಿ ಪಂಚತಾರಾ ಹೋಟೆಲುಗಳಲ್ಲಿ, ವೈಭವೋಪೇತ ಕ್ಲಬ್ಬುಗಳಲ್ಲಿ ಸಂಭ್ರಮೋಲ್ಲಾಸದ ಭೋಜನ, ನರ್ತನಕೂಟಗಳು ನಡೆದವು. ಆಗ್ರಾದ ತಾಜ್‌ಮಹಾಲಿನ ಭವ್ಯ ಹಿನ್ನೆಲೆಯಲ್ಲಿ ಪ್ರಸಿದ್ಧ ಯಾನ್ನಿ ಪಾಶ್ಚಾತ್ಯ ಸಂಗೀತ ಮೇಳ ನಡೆಯಿತು. ಬೊಂಬಾಯಿಯಲ್ಲಿ ಪಾಪ್ ಸಂಗೀತದ ಅನಿಭಿಷಿಕ್ತದೊರೆ ಮೈಕೇಲ್ ಜಾಕ್ಸನ್‌ನ ಸಂಗೀತ ಸಂಜೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಸ್ವಿಜರ್‌ಲ್ಯಾಂಡಿನ ಕೋರಮ್ ಎಂಬ ಗಡಿಯಾರ ತಯಾರಿಕಾ ಸಂಸ್ಥೆ Golden Anniversary (ಸುವರ್ಣ ಜಯಂತಿ)ಯ ಹೆಸರಿನಲ್ಲಿ ಕೇವಲ 50 ವಿಶೇಷವಾದ ಕೈಗಡಿಯಾರಗಳನ್ನು ಬಿಡುಗಡೆ ಮಾಡಿತು. ಒಂದು ಗಡಿಯಾರದ ಬೆಲೆ ಎಷ್ಟು ಗೊತ್ತೆ? ಕೇವಲ 3.90 ಲಕ್ಷ ರೂಪಾಯಿಗಳು!

ಹೌದು, ಈ ಸಂದರ್ಭದಲ್ಲಿ ಸಂತೋಷ, ಉಲ್ಲಾಸ, ಸಂಭ್ರಮದಿಂದ ಮೆರೆದದ್ದು ಉಳ್ಳವರು ಮಾತ್ರ. ಸಾಮಾನ್ಯ ಜನರು-ಕಾರ್ಮಿಕರು, ರೈತರು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು ಮುತ್ತಿತರ ಜನವಿಭಾಗ ಏನನ್ನೂ ಆಚರಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಸ್ವಾತಂತ್ರ್ಯದ 50 ವರ್ಷಗಳು ಸೃಷ್ಟಿಸಿದ, ರೂಪಿಸಿದ ಸಮಾಜದಲ್ಲಿ ಹಸಿವು, ಬಡತನ, ನಿರುದ್ಯೋಗದ ಜತೆಜತೆಗೆ ಹಿಂಸೆ, ರಕ್ತಪಾತ, ದೊಂಬಿ, ಗಲಭೆ, ಲೂಟಿಗಳೇ ಅವರ ಪಾಲಿಗೆ ಲಭ್ಯವಾಗಿದ್ದವು. ದೇಶದ ಆದಾಯದ, ಉತ್ಪನ್ನದ ಬಹುಪಾಲನ್ನು ಬೆರಳೆಣಿಕೆಯಷ್ಟು ಶ್ರೀಮಂತರು ಕಬಳಿಸುವ ಸ್ಥಿತಿ ಬಂದೊದಗಿತ್ತು. ಉಳ್ಳವರ ಮತ್ತು ಬಡವರ ನಡುವಿನ ಅಂತರ ಅಗಾಧವಾಗಿ ಬೆಳೆದು ನಿಂತಿತ್ತು.

ಜಾಗತೀಕರಣದ ನೀತಿಗಳು ಈ ಅಂತರವನ್ನು ಇನ್ನಷ್ಟು ಮತ್ತು ಹೆಚ್ಚು ತೀವ್ರವಾಗಿ ಹಿಗ್ಗಿಸಿವೆ. ದೇಶದ ಸಮಸ್ತ ಜನ ಸಮುದಾಯದ ಬದಲಾಗಿ ಕೇವಲ ಉಳ್ಳವರ ಹಿತಾಸಕ್ತಿಗಳನ್ನು ಮಾತ್ರ ರಕ್ಷಿಸುವ ನೀತಿಗಳು ಈಗಾಗಲೇ ಜಾರಿಗೆ ಬಂದಿವೆ.

ಇತ್ತೀಚೆಗೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಇಂತಹ ಶ್ರೀಮಂತ ಜನರ ಮೋಜಿನ, ವೈಭೋಗದ ಜೀವನಕ್ರಮದ ತುಣುಕು ಚಿತ್ರವೊಂದನ್ನು ನೀಡಿತು. ಅದರಲ್ಲಿ ಬೆಳಕಿಗೆ ಬಂದ ಮಾಹಿತಿಗಳು, ಅಂಕಿ ಅಂಶಗಳನ್ನು ಸ್ವಲ್ಪ ಪರಿಶೀಲಿಸೋಣ.

ಭಾರತದಲ್ಲಿ ಸದ್ಯಕ್ಕೆ ವಾರ್ಷಿಕ 50 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ವರಮಾನವಿರುವ ಸುಮಾರು 25 ಸಾವಿರ ಕುಟುಂಬಗಳಿವೆ. (ಅಂದರೆ ತಿಂಗಳಿಗೆ ಸುಮಾರು 4.15 ಲಕ್ಷ ರೂಪಾಯಿಗಳು) ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಯಿರುವ ಸುಮಾರು 60 ಸಾವಿರ ಶ್ರೀಮಂತ ವ್ಯಕ್ತಿಗಳಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಅವರ ಸಂಖ್ಯೆ ದ್ವಿಗುಣವಾಗಲಿದೆ. ಇಷ್ಟೆಲ್ಲಾ ಆದಾಯವಿರುವವರು, ತಮ್ಮ ಖರ್ಚುಗಳನ್ನು ದೊಡ್ಡ ಮಟ್ಟದಲ್ಲಿಯೇ ಮಾಡಬೇಕು ತಾನೆ. ಅದಕ್ಕಾಗಿಯೇ ವಿಶೇಷವಾದ ಶ್ರೀಮಂತ ಉಪಭೋಗದ ಒಂದು ಲೋಕವೇ ನಿರ್ಮಾಣವಾಗಿದೆ ಮತ್ತು ವಿಸ್ತರಿಸುತ್ತಿದೆ.

ರೂ 2 ಕೋಟಿಗಳಿಂದ ರೂ. 11 ಕೋಟಿಗಳಷ್ಟು ವೆಚ್ಚದ ವಿಶಾಲ, ಸುಸಜ್ಜಿತ, ವೈಭವೋಪೇತ ಮನೆಗಳ ಗೃಹ ಸಮುಚ್ಚಯಗಳು ಎದ್ದು ನಿಂತಿವೆ. ಈಗಾಗಲೇ ಇಂತಹ ಸುಮಾರು 56 ಸಾವಿರ ಮನೆಗಳು ನಿರ್ಮಾಣವಾಗಿವೆ. ವಿಶ್ವದರ್ಜೆಯ ಆಸ್ಪತ್ರೆಗಳು, ಕ್ರೀಡಾಗಾರಗಳು, ವ್ಯಾಯಾಮ ಶಾಲೆಗಳು, ವಾಣಿಜ್ಯ ಸಂಕೀರ್ಣಗಳನ್ನೊಳಗೊಂಡ ಈ ಗೃಹ ಸಮುಚ್ಚಯಗಳಲ್ಲಿ ವಾಸಿಸುವವರು ಸಮಾಜದ ಇತರ ವರ್ಗಗಳಿಂದ ಪ್ರತ್ಯೇಕವಾಗಿ ತಮ್ಮದ್ದೇ ಆದ ಲೋಕದಲ್ಲಿ ವಿಹರಿಸಲು, ವಿರಮಿಸಲು ಬೇಕಾದ ವ್ಯವಸ್ಥೆ ಇದೆ. ಇಂತಹ ಮನೆಗಳನ್ನು ಕೊಳ್ಳಲು ಕೋಟಿಗಟ್ಟಲೆ ರೂಪಾಯಿಗಳ ಗೃಹ ಸಾಲಗಳನ್ನು ನೀಡಲು ವಿದೇಶಿ ಹಾಗೂ ದೇಶೀಯ ಖಾಸಗೀ ಬ್ಯಾಂಕುಗಳೂ ಇವೆ.

ಇಂತಹ ಆಗರ್ಭ ಶ್ರೀಮಂತರು ತಿರುಗಾಡಲು ಹೋದಾಗ ಅವರು ಸಾಮಾನ್ಯ ಜನರು ಬಳಸುವ ವಾಣಿಜ್ಯ ಕೇಂದ್ರಗಳು, ಭೋಜನಾಲಯಗಳು, ಮಾರುಕಟ್ಟೆಗಳಲ್ಲಿ, ಕಾಲಿಡುವುದಾದರೂ ಹೇಗೆ? ಅವರ ಅಂತಸ್ತಿಗೆ ಅದು ಧಕ್ಕೆ ತರುವುದಿಲ್ಲವೇ? ಅದಕ್ಕಾಗಿಯೇ ಅವರಿಗಾಗಿ ಕಣ್ಣುಕುಕ್ಕುವ ವೈಭವದ ಪ್ರತೀಕವಾದ ವ್ಯಾಪಾರ ಮಳಿಗೆಗಳು, ಭೋಜನಾಲಯಗಳು, ಪಾನಗೃಹಗಳು ತಲೆಯೆತ್ತಿವೆ. ಕೇವಲ 12,500 ರೂಪಾಯಿ ಬೆಲೆಯ ವಾಟರ್‌ಮನ್ ಲೇಖನಿ (PEN) ಅಥವಾ ಜುಜುಬಿ 6 ಸಾವಿರ ರೂಪಾಯಿ ಬೆಲೆಯ ಅಂಗಿ (Shirt) ಇಲ್ಲಿ ಅವರಿಗೆ ಲಭ್ಯ. 2 ಲಕ್ಷ ರೂಪಾಯಿಗಳವರೆಗೂ ಬೆಲೆ ಬಾಳುವ ಪ್ಯಾಗೇಟ್(Piager), ಛೋಪಾರ್ಡ್(Chopard) ಫ್ರಾಂಕ್ ಮುಲ್ಲರ್ (Frank Muller) ಕೈಗಡಿಯಾರಗಳು ಇಲ್ಲಿ ಮಾರಾಟವಾಗುತ್ತಿವೆ. ಬೊಂಬಾಯಿಯ ಪಲ್ಲಾಜಿಯೋ (Pallazzio) ಎಂಬ ಹೆಸರಿನ ಮಳಿಗೆಯೊಂದರಲ್ಲಿ ಪ್ರತಿನಿತ್ಯ ಹತ್ತಕ್ಕಿಂತಲೂ ಹೆಚ್ಚು ರೂ. 15 ಸಾವಿರ ರಿಂದ ರೂ. 20ಸಾವಿರ ಬೆಲೆಯ ಕೈಗಡಿಯಾರಗಳು ಮಾರಾಟವಾಗುತ್ತವೆ.

ಬೊಂಬಾಯಿಯಲ್ಲಿ ಅತ್ಯಂತ ಶ್ರೀಮಂತ ಭೋಜನಾಲಯ ವೊಂದಿದೆ. ಅದರ ಹೆಸರು ಅಥೇನಾ (ATHENA). ಪ್ರವೇಶ ಸದಸ್ಯರಿಗೆ ಮಾತ್ರ. ಸದಸ್ಯತ್ವ ಶುಲ್ಕ ರೂ. 30 ಸಾವಿರ ರಿಂದ ರೂ. 1 ಲಕ್ಷದವರೆಗೆ! ಇಲ್ಲಿ ಸಿಗುವ ಷಾಟೋ ಪೆಟ್ರಸ್(Chaeau Petrus) ಎಂಬ ಮದ್ಯದ ಬೆಲೆ ಸೀಸೆಗೆ ಕೇವಲ ರೂ. 3.5 ಲಕ್ಷ ರೂಪಾಯಿಗಳು (ಅದರ ಮೇಲೆ ಶೇ. 20 ರಷ್ಟು ತೆರಿಗೆಯನ್ನು ತೇರಬೇಕು). ರೂ. 10 ಸಾವಿರ ರಿಂದ ರೂ. 45 ಸಾವಿರವರೆಗಿನ ದರದ ದ್ರಾಕ್ಷಾರಸ (Weine) ಸಹ ಇಲ್ಲಿ ಲಭ್ಯ. ಒಂದು ಸಂಜೆಯ ಮೇಜವಾನಿಗೆ 2 ರಿಂದ 5 ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗುತ್ತದೆ.

ಅಷ್ಟೇ ಅಲ್ಲ. ಈ ಆಗರ್ಭ ಶ್ರೀಮಂತರು ಓಡಾಡಲು ಸಾಮಾನ್ಯ ಕಾರುಗಳು ಸಾಕಾಗಲಾರವು. ಅದಕ್ಕೆಂದಲೇ ರೂ. 1.99 ಕೋಟಿ ಬೆಲೆಯ ಬೆಂಟ್ಲೆ ಆರ್ನೇಜ್ ಆರ್ (Bentley Arnager) ಕಾರುಗಳು ಈಗ ಅವರಿಗೆ ಲಭ್ಯ. ಈಗಾಗಲೇ 5 ಕಾರುಗಳಿಗೆ ಕೋರಿಕೆ ಪತ್ರ ಬಂದಿದೆಯಂತೆ. ವರ್ಷಕ್ಕೆ ಇಂತಹ 15 ಕಾರುಗಳನ್ನು ಮಾರುವ ಯೋಜನೆ ಕಂಪನಿಯದ್ದು. (ಈ ಕಂಪನಿಯ ಮಾರಾಟ ಮಳಿಗೆ ಕೂಡಾ ಪಂಚತಾರಾ ಹೋಟೆಲ್ ಅಶೋಕಾದ ಸಮುಚ್ಚಯದಲ್ಲಿ! ಸಾಮಾನ್ಯ ಜನ ಓಡಾಡುವ ಜಾಗೆಯಲ್ಲಿ ಅಲ್ಲ!) ಈ ನಡುವೆ ಡೈಮ್ಲರ್ ಕ್ರಿಸ್ಲರ್ (DFaimler Chrysler) ಕಂಪನಿ ಕೂಡಾ ರೂ. 3 ಕೋಟಿ ಬೆಲೆಯ ಮೇಬ್ಯಾಕ್ (Maybach) ಕಾರುಗಳನ್ನು ಮಾರುಕಟ್ಟೆಗೆ ತರುವ ಸನ್ನಾಹದಲ್ಲಿದೆ. ಮಾತ್ರವಲ್ಲ ಭಾರತದಲ್ಲಿ ಪ್ರಥಮ ಬಾರಿಗೆ ಲಿಮೋಸಿನ್(Limousine) ದರ್ಜೆಯ ಕಾರುಗಳನ್ನು ಮಾರುಕಟ್ಟೆಗೆ ತರಲು ಬೆಂಟ್ಲೇ (Bentley) ಕಂಪನಿ ಉದ್ದೇಶಿಸಿದೆ. ಪ್ರತಿಯೊಂದು ಕಾರಿನ ಬೆಲೆ ರೂ. 4 ಕೋಟಿಗೂ ಹೆಚ್ಚು!

ಕೇವಲ 1000 ಕಾರುಗಳನ್ನು ಮಾತ್ರ ತಯಾರಿಸುವ ಮರ್ಸಿಡಿಸ್ ಬೆಂಜ್ (Merceded Benz) ನ ಘಟಕ ವರ್ಷಕ್ಕೆ ರೂ. 39 ಕೋಟಿ ನಿವ್ವಳ ಲಾಭ ಗಳಿಸುತ್ತಿದೆ. ಡೈಮ್ಲರ್ ಕ್ರಿಸ್ಲರ್ (Daimler Chrysler)ನ ಎಸ್(S) ದರ್ಜೆಯ ಕಾರುಗಳು ಪ್ರತಿವರ್ಷ 75 ರಷ್ಟು ಮಾರಾಟವಾಗುತ್ತವೆ. ಪ್ರತಿಯೊಂದರ ಬೆಲೆ ಸುಮಾರು 65 ಲಕ್ಷ ರೂಪಾಯಿಗಳು.

ನಮ್ಮ ದೇಶದಲ್ಲಿ ಸೃಷ್ಟಿಯಾಗುತ್ತಿರುವ ಪ್ರಗಲ್ಭ ಶ್ರೀಮಂತಿಕೆಯ ವರ್ಗವೊಂದರ ಕೇವಲ ಆಂಶಿಕ ಚಿತ್ರಣವನ್ನು ಮಾತ್ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ನೀಡಿದೆ.



ಆದರೆ, ಕಣ್ಣು ಹಾಯಿಸಿದ ಕಡೆಯಲ್ಲೆಲ್ಲಾ ಈ ವರ್ಗದ ಉಪಭೋಗಕ್ಕಾಗಿಯೇ ಇಡೀ ವ್ಯವಸ್ಥೆ ಕಾರ್ಯನಿರತವಾಗಿರುವುದನ್ನು ಕಾಣಬಹುದು. ಮೀಟರ್ ಒಂದಕ್ಕೆ ಲಕ್ಷ ರೂಪಾಯಿ ಬೆಲೆ ಬಟ್ಟೆ (Suiting), ಮೂವತ್ತು ಸಾವಿರ ಬೆಲೆಯ ಪರಿಮಳ ದ್ರವ್ಯದ ಚಿಕ್ಕಸೀಸೆ, 5 ಲಕ್ಷ ರೂಪಾಯಿ ಬೆಲೆಯ ಸೀರೆ, 8 ಸಾವಿರ ರೂಪಾಯಿಗಳ ಪಾದರಕ್ಷೆಗಳು ಈಗ ಮಾರುಕಟ್ಟೆಯಲ್ಲಿ ಲಭ್ಯ.

ಬಹುಸಂಖ್ಯಾತ ಜನ ಸಮುದಾಯ ದಿನೇ ದಿನೇ ಆರ್ಥಿಕ/ ಸಾಮಾಜಿಕ ಅವನತಿಯ ಅಂಚಿಗೆ ದೂಡಲ್ಪಡುತ್ತಿರುವ ಈ ಕಾಲಘಟ್ಟದಲ್ಲೇ, ಇಂತಹ ಅಸಹ್ಯವೆನಿಸುವಷ್ಟು ವೈಭವದ, ಶ್ರೀಮಂತಿಕೆಯ ಜೀವನ ಬೆರಳೆಣಿಕೆಯ ಕೆಲವರ ಪಾಲಾಗಿರುವುದು ಜಾಗತೀಕರಣ ನಮ್ಮ ದೇಶಕ್ಕೆ ಕೊಟ್ಟಿರುವ ಕೊಡುಗೆ. ಜಗತ್ತಿನಲ್ಲೆಲ್ಲಾ ಶ್ರೀಮಂತ ದೇಶಗಳು ಮತ್ತು ಇತರ ದೇಶಗಳ ನಡುವಿನ ಹಾಗೂ ದೇಶದ ಆಂತರ್ಯದಲ್ಲೇ ಉಳ್ಳವರ ಮತ್ತು ಬಡವರ ನಡುವಿನ ಅಂತರ ಹೆಚ್ಚಾಗುತ್ತಿರುವುದಕ್ಕೆ ಇದಕ್ಕಿಂತಲೂ ಹೆಚ್ಚು ಪ್ರಖರ ನಿದರ್ಶನದ ಅಗತ್ಯವಿಲ್ಲ.

ಬೆಂಗಳೂರು ಬಸ್ ನಿಲ್ದಾಣದಿಂದ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ(KSRTC) ಗೆ 1955 ಬಸ್‌ಗಳು ಪ್ರತಿದಿನ ಕರ್ನಾಟಕದ ಇತರೆ ಊರುಗಳಿಗೆ ಚಲಿಸುತ್ತವೆ. ಇವುಗಳಲ್ಲಿ

ವೇಗದೂತ	1675
ಲಕ್ಸುರಿ	28
ಡಿಲಕ್ಸ್	71
ರಾಜಹಂಸ	150
ಇತರೆ	31

ವೇಗದೂತ ಬಸ್ಸುಗಳಲ್ಲಿ 55 ರಿಂದ 61 ಜನ ಕುಳಿತು ಕೊಳ್ಳಬಹುದು ಹಾಗೂ ಡಿಲಕ್ಸ್/ ರಾಜಹಂಸ ಬಸ್‌ಗಳಲ್ಲಿ 3 ಮಂದಿ ಪ್ರಯಾಣಿಸಬಹುದು. ಅಂದರೆ ಸರಾಸರಿ ಪ್ರತಿ ಬಸ್ಸಿನಲ್ಲಿ 50 ಮಂದಿ ಪ್ರಯಾಣಿಸು ತ್ತಾರೆ ಎಂದು ಭಾವಿಸಿ ಪ್ರತಿದಿನ 1 ಲಕ್ಷಕ್ಕೂ ಹೆಚ್ಚು ಜನರು ಬೆಂಗಳೂರು ನಗರದಿಂದ ಬೇರೆ ಊರುಗಳಿಗೆ ಹೋಗುತ್ತಾರೆ.

ಇದರಿಂದ ಬಿಎಂಟಿಸಿ ಬಸ್ಸುಗಳ ಮೂಲಕ ಸಂಚರಿಸುವ ಪ್ರಯಾಣಿಕರು ಒಳಗೊಂಡಿಲ್ಲ.

ಜನತೆಗೆ ಬಡತನ ಶೇರುದಾರರಿಗೆ ಶ್ರೀಮಂತಿಕೆ

ಜನ ಬಡತನದಿಂದ ಸಾಯುತ್ತಿದ್ದರೂ ದೇಶದ ಶೇರು ಮಾರುಕಟ್ಟೆಯ ಸೂಚ್ಯಾಂಕ 4000 ದ ಗಡಿ ದಾಟಿ ಹೋಗಿದೆ. ನಿಜದಲ್ಲಿ ದೇಶದ ಆರ್ಥಿಕ ಅಭಿವೃದ್ಧಿ ಹೊಂದಲು ದೇಶದ ಜನತೆ ಶ್ರೀಮಂತರಾಗಬೇಕು. ಆದರೆ ಬಂಡವಾಳಶಾಹಿ ಪದ್ಧತಿಯಲ್ಲಿ ಬಂಡವಾಳಿಗರಿಗೆ ಲಾಭವಾದರೆ ಸಾಕು. ಅದನ್ನು ದೇಶದ ಅಭಿವೃದ್ಧಿ ಎಂದೇ ಬಿಂಬಿಸಲು ನಮ್ಮ ಸಮಗ್ರ ಮಾಧ್ಯಮಗಳು ತಯಾರು.

ಹೀಗೆ ಶೇರು ಬೆಲೆ ಸೂಚ್ಯಾಂಕ 4000ದ ಗಡಿಯನ್ನು ದಾಟಿರುವುದನ್ನೇ ಬಹಳ ದೊಡ್ಡದು ಮಾಡಿ ಸಮೂಹ ಮಾಧ್ಯಮಗಳು ಬಿಂಬಿಸಿದೆ. ದೇಶದ ಹಲವು ಕಡೆ ಬರಗಾಲವಿರುವುದು; ಮಳೆಯ ಕೊರತೆ, ನೆರೆಗಳಿಂದ ಆಗಿರುವ ಶಾಪ, ಜನತೆಯ ನೋವು ಈ ಮಾಧ್ಯಮಗಳಲ್ಲಿ ಎಲ್ಲೋ ಮೂರನೆಯ ಸ್ಥಾನ ಪಡೆಯುತ್ತದೆ.

ಇದು ಬಂಡವಾಳಶಾಹಿ ನೋಟ!!

ಶಾಂತಿ, ಏಕತೆ ಸಾರುವ ಸಾಂಸ್ಕೃತಿಕ ಕಲಾ ಜಾಥಾ ಕರ್ನಾಟಕಕ್ಕೆ

ಭವ್ಯ ಸ್ವಾಗತ ಜನತೆಯ ಅಪೂರ್ವ ಸ್ಪಂದನ

ಶಾಂತಿ ಸೌಹಾರ್ದತೆಯ ಸಂದೇಶಹೊತ್ತ ರಾಷ್ಟ್ರ ಮಟ್ಟದ ಕಲಾಜಾಥಾ ಕರ್ನಾಟಕದಲ್ಲಿ ಸಂಚರಿಸಿತು. ಮಂಗಳೂರು, ಮೈಸೂರು, ಬೆಂಗಳೂರು ರಾಯಚೂರಿನಿಂದ ಆಂಧ್ರದತ್ತ ಹೊರಟಿದೆ. ಈ ಮಹತ್ವದ ಜಾಥಾ ಕರ್ನಾಟಕಕ್ಕೆ ಪ್ರವೇಶಿಸಿದಾಗ ಅದನ್ನು ಸ್ವಾಗತಿಸಿ ಸಂಭ್ರಮದಿಂದ ಕಾರ್ಯಕ್ರಮಗಳು ನಡೆದವು ಇದಕ್ಕೆ ಜನತೆಯ ಅಪೂರ್ವವಾಗಿ ಸ್ಪಂದಸಿದ ವರದಿಯಲ್ಲಿದೆ.



ಮಂಗಳೂರಿನ ಗಡಿಯಲ್ಲಿ ಅದ್ಭುತ ಸ್ವಾಗತ

ರಾಷ್ಟ್ರಮಟ್ಟದ ಜಾಥಾವೊಂದು ಮಂಗಳೂರನ್ನು ಹಾದು ಹೋಗಲಿದೆ ಎಂಬ ಸುದ್ದಿ ಕಿವಿಗೆ ಬಿದ್ದೊಡನೆ ಮಂಗಳೂರಿನ ಸಂಗಾತಿಗಳಿಗಂತೂ ಎಲ್ಲಿಲ್ಲದ ಖುಷಿ. ಸ್ವಾತಂತ್ರ್ಯ ಸಂರಕ್ಷಣಾ ಜಾಥಾ, ನಿರುದ್ಯೋಗ ವಿರೋಧಿ ಜಾಥಾ, ಯುವಚೈತನ್ಯ ಜಾಥಾ ಮುಂತಾದ ಜಾಥಾಗಳನ್ನು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಂಘಟಿಸಿ ಜನತೆಯ ಪ್ರೀತಿ ವಿಶ್ವಾಸ ಗಳಿಸಿದ್ದು ಒಂದೆಡೆಯಾದರೆ, ಇನ್ನೊಂದೆಡೆ 'ಏಕತೆಯೆಡೆಗೆ - ಯುವಜನರ ನಡಿಗೆ' ಎಂಬ ರಾಜ್ಯಮಟ್ಟದ ಜಾಥಾವನ್ನು ಮಂಗಳೂರಿನಿಂದ ರಾಯಚೂರುತನಕ ಕೊಂಡೊಯ್ದು ಹಿರಿಮೆ ಇಲ್ಲಿನ ಸಂಗಾತಿಗಳದ್ದು. ಅಂತಹ ಮಹಾನ್ ಉದ್ದೇಶವನ್ನು ಹೊತ್ತು 20 ದಿನಗಳ ಕಾಲ ಸಂಚರಿಸುವ ಜಾಥಾವನ್ನು ಅದ್ದೂರಿಯಾಗಿ ಸ್ವಾಗತಿಸಬೇಕು. ಅಚ್ಚುಕಟ್ಟಾಗಿ ನಡೆಸಬೇಕೆಂದು ಕನಸು ಕಂಡು ಕ್ರಿಯಾಶೀಲರಾದರು. ಸ್ವಾಗತ ಸಮಿತಿಯು ರಚಿತವಾಯಿತು.

ಸೆಪ್ಟೆಂಬರ್-13 ರಂದು ತಿರುವನಂತಪುರದಲ್ಲಿ ಉದ್ಘಾಟನೆಯಾದ ಜಾಥಾವು ಒಂದು ವಾರಗಳ ಕಾಲ ಕೇರಳದಾದ್ಯಂತ ಸಂಚರಿಸಿ ಹಲವಾರು ಕಡೆಗಳಲ್ಲಿ ಕಾರ್ಯಕ್ರಮವನ್ನು ನೀಡಿ ಅದ್ದೂರಿಯಾದ ಸ್ವಾಗತವನ್ನು ಕಂಡಿತು. ಎಡ ಶಕ್ತಿಗಳು ಬಲಯುತವಾಗಿರುವ ಕೇರಳದಲ್ಲಿ ನಿರೀಕ್ಷೆಗೂ ಮೀರಿ ಜನತೆ ಸ್ಪಂದಿಸಿದೆ. ಆದರೆ ಕರ್ನಾಟಕದಲ್ಲಿ ಎಡಚಳುವಳಿಯು ಸಣ್ಣಶಕ್ತಿ ಮಾತ್ರವಲ್ಲದೆ, ಇಲ್ಲಿ ವಿಜ್ಞಾನ ಇನ್ನಷ್ಟೇ ಜನತೆಯ ಬಳಿಗೆ ಹೋಗಬೇಕಾಗಿದೆ. ಮೂಢನಂಬಿಕೆಗಳು ಜನತೆಯನ್ನು ತೀವ್ರವಾಗಿ ಕಾಡುತ್ತಿದೆ. ಇದನ್ನೆಲ್ಲಾ ಹೋಗಲಾಡಿಸಲು ಕರ್ನಾಟಕದ ಜನವಿಜ್ಞಾನ ಸಂಘಟನೆಗಳು ತೀವ್ರ ಪ್ರಯತ್ನ ನಡೆಸುತ್ತಿರುವುದು ಸಂತೋಷಕರವಾಗಿದೆ.

ಸೆಪ್ಟೆಂಬರ್-20, ಜಾಥಾ ಕರ್ನಾಟಕಕ್ಕೆ ಆಗಮಿಸುವ ದಿನ, ಇನ್ನೇನು ಕರ್ನಾಟಕದ ಗಡಿಗೆ ಕಾಲಿಡಬೇಕೆನ್ನುವಷ್ಟರಲ್ಲಿ ಸಿಕ್ಕಿದಂತಹ ಭವ್ಯಸ್ವಾಗತ ಇಡೀ ಜಾಥಾ ತಂಡದ ಅನುಮಾನ ಅನಿಸಿಕೆಯನ್ನೇ ಹುಸಿಗೊಳಿಸಿತು. ಬೆಳಿಗ್ಗೆ 8 ಗಂಟೆಗೆ ಗಡಿಯಲ್ಲಿ ಕರ್ನಾಟಕಕ್ಕೆ ಆಗಮಿಸಿದ ರಾಷ್ಟ್ರಮಟ್ಟದ ಸಾಂಸ್ಕೃತಿಕ ಕಲಾಜಾಥಾಕ್ಕೆ ಸ್ವಾಗತ ಕೋರುವ ಬ್ಯಾನರ್ ಕಲಾವಿದರನ್ನು ಹೊತ್ತಂತಹ ಬಸ್ಸನ್ನೇ ನಿಲ್ಲಿಸಿತು. 'ಶಾಂತಿ-ಸೌಹಾರ್ದತೆ ಚಿರಾಯುವಾಗಲಿ, ಜಾಥಾ ತಂಡದ ಸಂಗಾತಿಗಳಿಗೆ ಕೆಂಪು ವಂದನೆಗಳು, ಕರ್ನಾಟಕಕ್ಕೆ ಆಗಮಿಸಿದ ಕಲಾಜಾಥಾಕ್ಕೆ ಜಯವಾಗಲಿ' -ಮುಂತಾದ ಘೋಷಣೆಗಳು ಮುಗಿಲುಮುಟ್ಟುವ ನಡುವೆಯೇ ಸ್ವಾಗತಸಮಿತಿಯ ಸಂಚಾಲಕರಾದ ಕೃಷ್ಣಪ್ಪ ಕೊಂಚಾಡಿಯವರು ಜಾಥಾ ತಂಡದ ನಾಯಕರಾದ ಸೋಫಿನ್‌ರವರಿಗೆ ಹೂಹಾರವನ್ನು ಹಾಕುವುದರ ಮೂಲಕ ಇಡೀ ತಂಡವನ್ನು ಸ್ವಾಗತಿಸಿದರು.

ಉಳ್ಳಾಲ ವಿಧಾನಸಭಾ ಕ್ಷೇತ್ರದ ವಾಣಿಜ್ಯ ಕೇಂದ್ರವೇ ತೊಕ್ಕೊಟು ಪರಿಸರ. ಕೇರಳ-ಕರ್ನಾಟಕದ ರಾಷ್ಟ್ರೀಯ ಹೆದ್ದಾರಿ-17 ಹಾದುಹೋಗುವುದು ಇಲ್ಲಿಯೇ. ಸಹಜವಾಗಿಯೇ ಜಾಥಾ ತಂಡ ತೊಕ್ಕೊಟು ಪಟ್ಟಣವನ್ನು ಪ್ರವೇಶಿಸಿದಂತೆ ನೂರಾರು ಡಿ.ವೈ.ಎಫ್.ಐ ಕಾರ್ಯಕರ್ತರು ಕೆಂಪು ನಕ್ಷತ್ರಾಂಕಿತ ಶ್ವೇತಪತಾಕೆಯನ್ನು ಹಿಡಿದುಕೊಂಡು ಜಾಥಾಕ್ಕೆ ಶುಭ ಕೋರಿದರು. ಪ್ರತಿಯೊಬ್ಬ ಕಲಾವಿದರಿಗೆ ಕೆಂಪು ಗುಲಾಬಿಯನ್ನು ಕೊಟ್ಟು ಗೌರವಿಸಿದರೆ, ಖ್ಯಾತ ನಾಟಕಕಾರ ಕಲಾವಿದರಾದ ಚಂದ್ರಹಾಸ ಉಳ್ಳಾಲ್‌ರವರು ಫಲಪುಷ್ಪ ನೀಡುವ ಮೂಲಕ ವಂದನೆ ಸಲ್ಲಿಸಿದರು. ಡಿ.ವೈ.ಎಫ್.ಐ ಉಳ್ಳಾಲ ವಲಯ ನಾಯಕರಾದ ರಾಮಚಂದ್ರ ಬಬ್ಬುಕಟ್ಟೆ, ಅರುಣ್ ಉಳ್ಳಾಲ, ಸೀತರಾಮಶೆಟ್ಟಿ ಮುಂತಾದವರ ಪರಿಶ್ರಮದಿಂದ ಬೆಳ್ಳಂಬೆಳಿಗ್ಗೆ ಕಾರ್ಯಕರ್ತರು ಆಗಮಿಸಿ ಬೆಳಗ್ಗಿನ ಜಾವದಲ್ಲೇ ಸಾವಿರಾರು ಕಣ್ಣುಗಳು ಕಾರ್ಯಕ್ರಮವನ್ನು ತದೇಕಚಿತ್ತದಿಂದ ವೀಕ್ಷಿಸಿ ಶಾಂತಿ-ಸೌಹಾರ್ದತೆ ದೇಶದಲ್ಲಿ ಇನ್ನಷ್ಟು ಬಲಗೊಳ್ಳಲಿ ಎನ್ನುವಂತಹ ಆಶಯ ವ್ಯಕ್ತಪಡಿಸಿರುವುದು ಜಾಥಾಕ್ಕೆ ಇನ್ನಷ್ಟು ಬಲ ಬಂದಂತಾಗಿತ್ತು.

ಜಾಥಾದ ಪ್ರಮುಖ ಕಾರ್ಯಕ್ರಮ ವ್ಯವಸ್ಥೆಯಾಗಿರುವುದು ಮಂಗಳೂರಿನ ಹೃದಯ ಭಾಗದಲ್ಲಿರುವ ಜಿಲ್ಲಾಧಿಕಾರಿಗಳ ಕಛೇರಿಯೆದುರು. ಕಾರ್ಯಕ್ರಮದ ಮೊದಲು ಕೆಲವೇ ದೂರದಿಂದ ಕಲಾವಿದರ ಶಿಸ್ತುಬದ್ಧ ಮೆರವಣಿಗೆ, ಅದರೊಂದಿಗೆ ಚೆಂಡೆ ಮತ್ತು ಡೋಲು ವಾದ್ಯದ ಸಮ್ಮಿಲನ- ಅದರ ಹಿಂದೆ ಶಾಂತಿ ಸೌಹಾರ್ದತೆ ಬಯಸುವ ಸಂಗಾತಿಗಳಿಂದ ಜಾಥಾಕ್ಕೆ ಶುಭ ಹಾರೈಕೆಯ ಘೋಷಣೆಗಳು ಮೆರವಣಿಗೆಯ ಪ್ರಾರಂಭದಲ್ಲೇ ಶಾಂತಿಯ ಸಾರುವ ಶ್ವೇತಪತಾಕೆ ಮಹಿಳಾ ಸಂಗಾತಿ ಹಿಡಿದಿರುವುದು- ಒಟ್ಟಿನಲ್ಲಿ ಮೆರವಣಿಗೆಯ ಅಚ್ಚುಕಟ್ಟುತನವೇ ಮಂಗಳೂರಿನ ಜನತೆಯ ಗಮನ ಸೆಳೆದವು ಹಾಗೂ ಜಾಥಾದ ಕಾರ್ಯಕ್ರಮವನ್ನು ನೋಡುವಂತೆ ಹುರಿದುಂಬಿಸಿತು. ಇದರ ಪರಿಣಾಮವೇ ಜಾಥಾದ ಕಾರ್ಯಕ್ರಮಕ್ಕೆ ನಿರೀಕ್ಷೆಗೂ ಮೀರಿ ಜನ ಸ್ಪಂದಿಸಿತು.



ಬೆಂಗಳೂರಿಗಾಗಮಿಸಿದಾಗ

ಸಾಂಸ್ಕೃತಿಕ ಕಾರ್ಯಕ್ರಮಕ್ಕಿಂತ ಮೊದಲು ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜ್ ಅಧ್ಯಾಪಕರ ಸಂಘಟನೆ ಆಮುಕ್ತ್‌ನ ಪ್ರಧಾನ ಕಾರ್ಯದರ್ಶಿ ಪ್ರೊ.ಹಯವದನ ಉಪಾಧ್ಯಾಯರವರು ಆಡಿದಂತಹ ಮಾತುಗಳು ಬಹಳ ಮಾರ್ಮಿಕವಾಗಿತ್ತು. "ಜಾಗತೀಕರಣದ ದುಷ್ಪರಿಣಾಮದಿಂದ ಜಗತ್ತಿನ ಬಹುಸಂಖ್ಯಾತ ಬಡದೇಶಗಳ ಬಡಜನರ ಬದುಕು ಅತ್ಯಂತ ಹೀನಾಯ ಪರಿಸ್ಥಿತಿಗೆ ಇಳಿದಿದೆ. ಕೇವಲ ಜಿ-8 ರಾಷ್ಟ್ರಗಳ ಬಹುರಾಷ್ಟ್ರೀಯ ಸಂಸ್ಥೆಗಳು ಮಾತ್ರ ಲಾಭ ಪಡೆದರೆ, ಭಾರತದಂತಹ ತೃತೀಯ ಜಗತ್ತಿನ ರಾಷ್ಟ್ರಗಳ ಪಾಲಿಗೆ ಇನ್ನೂ ಗಂಭೀರ ಸಮಸ್ಯೆಗಳನ್ನು ಒಡ್ಡಿವೆ. ಆದುದರಿಂದ ದೇಶದಲ್ಲಿ ಶಾಂತಿ, ಏಕತೆ, ಸಾರ್ವಭೌಮತೆಯ ಪುನರ್‌ವ್ಯಾಖ್ಯಾನ ಆಗಬೇಕಾದದ್ದು ತೀರಾ ಅಗತ್ಯ" ಎಂದು ಹೇಳುವ ಮೂಲಕ ಪ್ರೇಕ್ಷ... ಮೆಚ್ಚುಗೆಯನ್ನು ಪಡೆದರು. ಜಾಥಾ ತಂಡ... ನಾಯಕರಾದ ಸೋಫಿನ್‌ರವರು ಜಾಥ... ನಡೆದುಬಂದ ದಾರಿಯಲ್ಲಿ ಸಿಕ್ಕಿದಂತಹ ಜನತೆ... ಸ್ಪಂದನವನ್ನು ಮನಮುಟ್ಟುವ ರೀತಿಯ...

ಹೇಳಿದರು. ಪ್ರಾಸ್ತಾವಿಕ ಭಾಷಣ ಮಾಡಿದ... ಕೃಷ್ಣಪ್ಪ ಕೊಂಚಾಡಿ ವೇದಿಕೆಯಲ್ಲಿದ್ದ ಜಾ... ತಂಡದ ಇತರ ನಾಯಕರಾದ ಕೊಡುಕ... ಶ್ರೀಧರನ್ ಮಾಸ್ಟರ್, ಮಣಿ, ಭಾರತಜ... ವಿಜ್ಞಾನ ಸಮಿತಿಯ ಕರ್ನಾಟಕ ರಾ... ಕಾರ್ಯದರ್ಶಿ ಇ.ಬಸವರಾಜು, ಅಂತರಾಷ್ಟ್ರೀ... ಮಟ್ಟದ ಜಾದುಗಾರ ಕುದ್ರೋಳಿ ಗಣೇ... ವಿಚಾರವಾದಿ ಸಿ.ಎಸ್.ಶೆಟ್ಟಿಯವ... ಉಪಸ್ಥಿತರಿದ್ದರು. ಮೊದ... ಯಾದವಶೆಟ್ಟಿಯವರು ಸ್ವಾಗತಿಸಿದ... ಕೊನೆಯಲ್ಲಿ ಸಂತೋಷ್ ನೀತಿನಗರರ... ವಂದಿಸಿದರು. ಕಾರ್ಯಕ್ರಮವ... ಸುನೀಲ್‌ಕುಮಾರ್ ಬಜಾಲ್‌ರ... ನಿರ್ವಹಿಸಿದರು. ರಾಮದಾಸ್ ಮತ್ತಿ... ಗೆಳೆಯರು ಕ್ರಾಂತಿಗೀತೆಗಳನ್ನು ಹಾಡಿದರೆ, ಜ... ಜಾಥಾ ತಂಡದಿಂದ ಪೆಪ್ಸಿಕೋಲಾ ವಸ... ಎಸ್. ಎಳನೀರು ಎಂಬ ನಾಟಕವು ಅತ... ಯಶಸ್ವಿಯಾಗಿ ನಡೆಯಿತು. ಸೇರಿದ್ದ ಜನತೆ... ಮನಸ್ಸಿನಿಂದ ಕಾರ್ಯಕ್ರಮ ನೋಡುವಂತೆ ಮಾ... ಜಾಥಾ ತಂಡ ನಿಜಕ್ಕೂ ಶ್ಲಾಘನೀ... ಕೇರಳ-ಕರ್ನಾಟಕ ಮಹಾರಾಷ್ಟ್ರ ಸಂಗಾ... ಕೂಡುವಿಕೆಯಿಂದ ನಾಟಕ ರಚಿಸಿರುವ... ಪ್ರತಿಯೊಬ್ಬರ ಭಾವಪೂರ್ಣ- ವಿ... ಅಭಿನಯ, ಹಾಡು ಪ್ರೇಕ್ಷಕರ ಗಮನ ಸೆಳೆದ...

'ನಿಷಿ' ಮಂಗಳೂ...



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್.
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH